ಜುಲೈ 2014 ₹ 15/-

# ಯುಗಶ್ರೀ

ತ್ರೈಮಾಸಿಕ



- ವ್ರತಾನುಷ್ಠಾನ
- ಇಸ್ಲಾಮ್ ಶಾಂತಿ ಮತ್ತು ಕರುಣೆಯ ಧರ್ಮ
- ಸೃಷ್ಟಿಕರ್ತನ ನಾಲ್ಕು ಮುಖ್ಯ ಗುಣವಿಶೇಷಗಳು
- ಖತ್‌ಮೆನುಬುವತ್ ಮತ್ತು ಅಹ್ಮದಿಯಾ ಜಮಾಅತ್
- ಶಾಂತಿ, ಸೌಹಾರ್ದ ಮತ್ತು ಭ್ರಾತೃತ್ವ
- ಇಸ್ಲಾಮ್ ಬಗ್ಗೆ ಪ್ರಶ್ನೆಗಳಿಗೆ ಉತ್ತರ

"ಸಕಲ ಮಾನವರಿಗೆ ಸನ್ಮಾರ್ಗ ದರ್ಶಕವಾದ, ಮಾರ್ಗದರ್ಶನ ಮತ್ತು ಸತ್ಯಾಸತ್ಯ ವಿವೇಚನೆಯ ಸ್ಪಷ್ಟವಾದ ಸಾಕ್ಷ್ಯಗಳಿಂದ ಕೂಡಿದ ಖುರ್‌ಆನ್ ಅವತೀರ್ಣವಾದ ಮಾಸವಾಗಿದೆ ರಮಝಾನ್. ಆದ್ದರಿಂದ ನಿಮ್ಮ ಪೈಕಿ ಯಾರಾದರೂ ಈ ಮಾಸವನ್ನು ಪಡೆದರೆ ಆತನು ಅದರಲ್ಲಿ ಉಪವಾಸ ಮಾಡಲಿ. ಆದರೆ ಯಾರಾದರೂ ರೋಗಿ ಅಥವಾ ಪ್ರಯಾಣಿಕನಾಗಿದ್ದಲ್ಲಿ ಬೇರೆ ದಿನಗಳಲ್ಲಿ ಆ ಸಂಖ್ಯೆಯನ್ನು ಪೂರ್ತಿಗೊಳಿಸಲಿ. ಅಲ್ಲಾಹನು ನಿಮಗೆ ಸೌಲಭ್ಯವನ್ನು ಇಚ್ಛಿಸುತ್ತಾನೆ; ನಿಮಗೆ ಕಷ್ಟ ಕೊಡಲು ಇಚ್ಛಿಸುವುದಿಲ್ಲ. (ಇದು) ನೀವು ಸಂಖ್ಯೆಯನ್ನು ಪೂರ್ಣಗೊಳಿಸಲಿಕ್ಕೂ ನಿಮಗೆ ಮಾರ್ಗದರ್ಶನ ಮಾಡಿದುದಕ್ಕಾಗಿ ಅಲ್ಲಾಹನ ಸ್ತುತಿ ಕೀರ್ತನ ಮಾಡಲಿಕ್ಕೂ ನೀವು ಕೃತಜ್ಞತೆ ಸೂಚಿಸಲಿಕ್ಕೂ ಆಗಿದೆ"

ಪವಿತ್ರ ಖುರ್‌ನ್ (2:186)

# ಯುಗರಶ್ಮಿ


☆ ಉಪವಾಸದ ಉದ್ದೇಶ ಮತ್ತು ಉಪವಾಸಿಗನ ಕರ್ತವ್ಯ 1

☆ ಮುಹಮ್ಮದ್ ಪೈಗಂಬರರ(ಸ) ನುಡಿಮುತ್ತುಗಳು 2

☆ ಇಸ್ಲಾಮ್ ಶಾಂತಿ ಮತ್ತು ಕರುಣೆಯ ಧರ್ಮ 3

☆ ಸೃಷ್ಟಿಕರ್ತನ ನಾಲ್ಕು ಮುಖ್ಯ ಗುಣವಿಶೇಷಗಳು 9

☆ ಖತ್‌ಮೆನುಬುವ್ವತ್ (ಪ್ರವಾದಿತ್ವ ಪರಿಸಮಾಪ್ತಿ) ಮತ್ತು ಅಹ್ಮದಿಯಾ ಜಮಾಅತ್ 14

☆ ಶಾಂತಿ, ಸೌಹಾರ್ದ ಮತ್ತು ಭ್ರಾತೃತ್ವ 22

☆ ಇಸ್ಲಾಮ್ ಬಗ್ಗೆ ಪದೇ ಪದೇ ಕೇಳಲಾಗುತ್ತಿರುವ ಕೆಲವು ಪ್ರಶ್ನೆಗಳಿಗೆ ಉತ್ತರ 28

☆ ವ್ರತಾನುಷ್ಠಾನ 31

☆ ಇಸ್ಲಾಮಿನ ಪಾಠಗಳು: ಉಪವಾಸ 33

ಓದಿದ್ದು :

* "ಮಕ್ಕಳನ್ನು ಲೈಂಗಿಕವಾಗಿ ಶೋಷಿಸುವವರನ್ನು ಪೊಲೀಸರ ವಶಕ್ಕೆ ನೀಡಿರಿ." ವಿಶ್ವಸಂಸ್ಥೆ ವ್ಯಾಟಿಕನ್‌ಗೆ ನೀಡಿದ ಆದೇಶ. * ಮುಸ್ಲಿಮರು ಫೋಟೋ ತೆಗೆಸಿಕೊಳ್ಳ ಬಾರದು : ಫತ್ವಾ 37

* ಮುಸ್ಲಿಮರ ಬೆಂಬಲ: ಸತ್ಯವೋ ಮಿಥ್ಯವೋ? * ಕ್ರೈಸ್ತರು ಅಲ್ಲಾ ಎನ್ನುವಂತಿಲ್ಲ: ಮಲೇಷ್ಯ ಕೋರ್ಟ್ 38

* ಶರಿಯಾ ಕೋರ್ಟ್ ಅಮಾನ್ಯ : ಸುಪ್ರೀಂ 39

☆ ಅಹ್ಮದಿಯರಿಗೆ ಸುತ್ತೋಲೆ 40

☆ ವಾರ್ತೆಗಳು 41

☆ ನಿಧನ ವಾರ್ತೆಗಳು 43

☆ ಸೌಹಾರ್ದ 44


ಮುಖಪುಟ ಚಿತ್ರ : ಅಹ್ಮದಿಯಾ ಮಸ್ಜಿದ್ "ಬೈತುನ್ನೂರು" – ಕೆನಡಾದ ಕ್ಯಾಲಗರಿಯಲ್ಲಿರುವ ಉತ್ತರ ಅಮೇರಿಕದ ಅತ್ಯಂತ ದೊಡ್ಡ ಮಸೀದಿ.


ಬಿಡಿ ಪ್ರತಿ : ರೂ.15/- ವಾರ್ಷಿಕ ಚಂದಾ : ರೂ.60/- ಅಂಚೆ ಮೂಲಕ : ರೂ.70/-

ವಿಳಾಸ : 10 -23-1008/1, 1ನೇ ಮಹಡಿ, ಅನ್ಸಾರಿ ರಸ್ತೆ, ಬಂದರ್, ಮಂಗಳೂರು - 575 0 0 1

بسم الله الرحمن الرحيم

نحمده ونصلي على رسوله الكريم


# ಯುಗರಶ್ಮಿ

ಜುಲೈ 2014

ಆರಂಭ : 1975 | ಸಂಪುಟ : 31 | ವಫಾ 1393 ಹಿಜರೀ ಶಮ್ಸೀ | ಸಂಚಿಕೆ : 1-2

ಸಂಪಾದಕ : ಮುಹಮ್ಮದ್ ಯೂಸುಫ್


## ಉಪವಾಸದ ಉದ್ದೇಶ ಮತ್ತು ಉಪವಾಸಿಗನ ಕರ್ತವ್ಯ

"ಇಸ್ಲಾಮಿನ ಕರ್ಮಾನುಷ್ಠಾನಗಳಲ್ಲಿ ಮೂರನೆಯದು ಉಪವಾಸವಾಗಿದೆ. ಉಪವಾಸದ ಯಥಾರ್ಥತೆಯ ಬಗ್ಗೆ ಜನರು ಅಜ್ಞರು. ವಾಸ್ತವವೇನೆಂದರೆ, ಹೋಗಿ ನೋಡಿಲ್ಲದ ದೇಶದ ಕುರಿತು ಮತ್ತು ಅರಿವಿಲ್ಲದ ಲೋಕದ ಬಗ್ಗೆ ಮನುಷ್ಯನಿಗೆ ಏನು ಹೇಳಲು ಸಾಧ್ಯ? ಮನುಷ್ಯನು ಹಸಿದು, ದಾಹಿಸಿ ಇರುವುದು ಮಾತ್ರವಲ್ಲ ಉಪವಾಸ. ಅದಕ್ಕೊಂದು ತತ್ವವಿದೆ. ಅದಕ್ಕೊಂದು ಪ್ರಭಾವವಿದೆ. ಅದು ಅನುಭವದಿಂದ ತಿಳಿಯಲು ಸಾಧ್ಯ. ಆಹಾರವನ್ನು ಕಡಿಮೆಗೊಳಿಸುವುದಕ್ಕೆ ಅನುಗುಣವಾಗಿ ಆತ್ಮ ಪರಿಶುದ್ಧವಾಗುತ್ತದೆಂಬುದು ಮನುಷ್ಯ ಪ್ರಕೃತಿಯಲ್ಲಿರುವುದಾಗಿದೆ. ದರ್ಶನ ಶಕ್ತಿ ವರ್ಧಿಸುತ್ತದೆ. ಭೌತಿಕಾಹಾರವನ್ನು ಕಡಿಮೆಮಾಡಿ ಆಧ್ಯಾತ್ಮಿಕಾಹಾರವನ್ನು ಹೆಚ್ಚಿಸಬೇಕು ಎಂಬುದನ್ನು ಅಲ್ಲಾಹನು ಈ ಮೂಲಕ ಉದ್ದೇಶಿಸುತ್ತಾನೆ. ಹಸಿವೆಯನ್ನು ಮಾತ್ರವಲ್ಲ ಅವನಿಂದ ಪ್ರತೀಕ್ಷಿಸುವುದೆಂಬ ವಿಚಾರ ಉಪವಾಸಿಗನ ದೃಷ್ಟಿಯಲ್ಲಿರಬೇಕು. ಅಷ್ಟೇ ಅಲ್ಲ, ಏಕಾಂತವಾಸ ಮತ್ತು ಭೌತಿಕತೆಯಿಂದ ಅಗಲಿಕೆ ಲಭಿಸಲಿಕ್ಕಾಗಿ ದೇವಸ್ಮರಣೆಯಲ್ಲಿ ಹೆಚ್ಚು ಹೆಚ್ಚು ಲೀನವಾಗಬೇಕು. ಕೇವಲ ಶರೀರಕ್ಕೆ ಪೋಷಣೆ ನೀಡುವ ಆಹಾರವನ್ನು ಬಿಟ್ಟು ಆತ್ಮದ ತೃಪ್ತಿಗೂ ಸಂಪುಷ್ಟಿಗೂ ಉಪಯುಕ್ತವಾದ ಆಹಾರ ಸ್ವೀಕರಿಸುವುದು ಉಪವಾಸದ ಉದ್ದೇಶ. ಒಂದು ಕಟ್ಟಳೆ ಮುಗಿಸುವುದೆಂಬ ರೀತಿಯಲ್ಲಿ ಅಲ್ಲದೆ ಯಾರು ಅಲ್ಲಾಹನಿಗೋಸ್ಕರ ಉಪವಾಸ ಮಾಡುತ್ತಾನೋ ಆತನು ಆಧ್ಯಾತ್ಮಿಕಾಹಾರ ಲಭಿಸಲಿಕ್ಕಾಗಿ ಅಲ್ಲಾಹನನ್ನು ಸ್ತುತಿಸುವುದರಲ್ಲೂ ಅವನನ್ನು ಪ್ರಕೀರ್ತಿಸುವುದರಲ್ಲೂ ಅವನ ಏಕತ್ವ ಕೀರ್ತನೆಯಲ್ಲೂ ಮಗ್ನನಾಗಬೇಕಾಗಿದೆ."

(ಮಲ್‌ಫೂಝಾತ್ – ಸಂಪುಟ 9 ಪುಟ 123, ಮುದ್ರಣ 1984)

**ಹಝ್ರತ್ ಮಿರ್ಝಾ ಗುಲಾಂ ಅಹ್ಮದ್**

ಅಹ್ಮದಿಯಾ ಜಮಾಅತಿನ ಸ್ಥಾಪಕರು.

# ಮುಹಮ್ಮದ್ ಪೈಗಂಬರರ(ಸ) ನುಡಿಮುತ್ತುಗಳು

- ಅಲ್ಲಾಹನು ಹೇಳಿದ್ದಾನೆ: ಉಪವಾಸ ಹೊರತು ಮನುಷ್ಯನ ಇತರೆಲ್ಲ ಕರ್ಮಗಳು ಅವನಿಗೋಸ್ಕರವಾಗಿದೆ. ಉಪವಾಸ ನನಗೆ. ನಾನು ಅದಕ್ಕೆ ಪ್ರತಿಫಲ ನೀಡುವೆನು. ಕೆಡುಕನ್ನು ತಡೆಯುವ ಒಂದು ಗುರಾಣಿಯಾಗಿದೆ ಉಪವಾಸ. ಉಪವಾಸಿಗನು ತಪ್ಪು ಮಾಡಬಾರದು. ಜಗಳ ಮಾಡಬಾರದು. ಯಾರಾದರೂ ಅವನನ್ನು ಬೈಯ್ದರೆ ಅಥವಾ ಅವನೊಡನೆ ಜಗಳಾಡಲು ಬಂದರೆ ನಾನು ಉಪವಾಸಿಗ ಎಂದು ಅವನು (ಎರಡು ಸಲ ) ಹೇಳಲಿ. (ಬುಖಾರಿ, ಮುಸ್ಲಿಂ)

- ಉಪವಾಸಿಗನಿಗೆ ಎರಡು ಆನಂದಗಳಿವೆ. ಒಂದು, ಉಪವಾಸ ಮುಕ್ತಾಯಗೊಳಿಸುವಾಗ. ಇನ್ನೊಂದು, ತನ್ನ ಪ್ರಭುವನ್ನು ಭೇಟಿಯಾಗುವಾಗ. .(ಬುಖಾರಿ, ಮುಸ್ಲಿಂ)

- ವಿಶ್ವಾಸದಿಂದ ಮತ್ತು ಪ್ರತಿಫಲೇಚ್ಛೆಯಿಂದ ಯಾರಾದರೂ ರಮಝಾನ್ ವ್ರತವನ್ನು ಅನುಷ್ಠಿಸಿದರೆ ಆತನ ಹಿಂದಿನ ಪಾಪಗಳು ಕ್ಷಮಿಸಲ್ಪಡುವುವು. (ಬುಖಾರಿ)

- ವಿಶ್ವಾಸದಿಂದ ಮತ್ತು ಪ್ರತಿಫಲೇಚ್ಛೆಯಿಂದ ಯಾರಾದರೂ ರಮಝಾನ್ ರಾತ್ರಿಯಲ್ಲಿ (ಸುನ್ನತ್) ನಮಾಝ್ ಮಾಡಿದರೆ, ಆತನ ಹಿಂದಿನ ಪಾಪಗಳು ಕ್ಷಮಿಸಲ್ಪಡುವುವು. (ಬುಖಾರಿ)

- ವಿಶ್ವಾಸದಿಂದ ಮತ್ತು ಪ್ರತಿಫಲೇಚ್ಛೆಯಿಂದ ಯಾರಾದರೂ ಲೈಲತುಲ್ ಖದರ್‌ನಲ್ಲಿ (ನಿರ್ಣಾಯಕ ರಾತ್ರಿಯಲ್ಲಿ) ನಮಾಝ್ ಮಾಡಿದರೆ, ಆತನ ಹಿಂದಿನ ಪಾಪಗಳು ಕ್ಷಮಿಸಲ್ಪಡುವುವು. (ಬುಖಾರಿ)

- ನೀವು ಸಹ್‌ರಿ ಉಣ್ಣಬೇಕು. ನಿಶ್ಚಯವಾಗಿಯೂ ಸಹ್‌ರಿ ಉಣ್ಣುವುದರಲ್ಲಿ ಅನುಗ್ರಹವಿದೆ. (ಬುಖಾರಿ, ಮುಸ್ಲಿಂ)

- ಸಮಯವಾದರೆ ಅವಸರದಲ್ಲಿ ಉಪವಾಸ ಮುಕ್ತಾಯಗೊಳಿಸುವಾಗಲೆಲ್ಲ ಜನರು ಕ್ಷೇಮದಲ್ಲಿರುವರು. (ಬುಖಾರಿ, ಮುಸ್ಲಿಂ)

- ಅಲ್ಲಾಹು ತಿಳಿಸಿದ್ದಾನೆ: ಅಸ್ತಮಾನದ ನಂತರ ಅವಸರದಲ್ಲಿ ಉಪವಾಸವನ್ನು ಮುಕ್ತಾಯಗೊಳಿಸುವವನು ನನ್ನ ದಾಸರ ಪೈಕಿ ನನಗೆ ಅತ್ಯಂತ ಮೆಚ್ಚುಗೆಯವನು. (ತಿರ್ಮಿದಿ)

- ನಿಮ್ಮಲ್ಲಿ ಯಾರಾದರೂ ಉಪವಾಸ ಮುಕ್ತಾಯಗೊಳಿಸುವಾಗ ಉತ್ತುತ್ತೆ (ಖರ್ಜೂರ) ತಿನ್ನಲಿ. ಅದು ಸಿಗದಿದ್ದರೆ ನೀರನ್ನು ಕುಡಿಯಲಿ. ಖಂಡಿತವಾಗಿಯೂ ಅದು ಶುದ್ಧಿ ಮಾಡುವುದು. (ಅಬೂದಾವೂದ್, ತಿರ್ಮಿದಿ)

- ಯಾರಾದರೂ ಸುಳ್ಳು ಹೇಳುವುದು ಮತ್ತು ಅದಕ್ಕನುಸಾರ ವರ್ತಿಸುವುದನ್ನು ಬಿಟ್ಟು ಬಿಡುವುದಿಲ್ಲವಾದರೆ ಅವನು ಆಹಾರ ಪಾನೀಯಗಳನ್ನು ಬಿಟ್ಟುಬಿಡುವುದರಲ್ಲಿ ಅಲ್ಲಾಹನಿಗೆ ಏನೂ ಆಸಕ್ತಿ ಇಲ್ಲ. (ಬುಖಾರಿ)

- ಯಾರು ರಮಝಾನ್‌ನಲ್ಲಿ ಉಪವಾಸಮಾಡಿ, ಆ ಬಳಿಕ ಶವ್ವಾಲ್‌ನಲ್ಲಿ ಆರು ಉಪವಾಸ ಮಾಡುತ್ತಾನೋ, ಆತನಿಗೆ ವರ್ಷವಿಡೀ ಉಪವಾಸ ಮಾಡಿದವನಿಗೆ ಸಮಾನವಾದ ಪ್ರತಿಫಲ ಲಭಿಸುವುದು. (ಅಂದರೆ ಒಂದು ಉಪವಾಸಕ್ಕೆ ಹತ್ತು ಪಾಲು ಪ್ರತಿಫಲ ಲಭಿಸುವುದು. ಹಾಗೆ 36 ದಿವಸಗಳಿಗೆ 360 ದಿವಸಗಳಷ್ಟು ಪ್ರತಿಫಲ ಲಭಿಸುವುದು.) ( ಮುಸ್ಲಿಂ)

- ಪ್ರತಿಫಲಕ್ಕೋಸ್ಕರ ಎಲ್ಲ ಮಾಸದಲ್ಲಿ ಮೂರು ಉಪವಾಸ ಅನುಷ್ಠಿಸಲು ಇಚ್ಛಿಸುವುದಾದರೆ, ಚಂದ್ರ ಮಾಸದ 13, 14, 15 ದಿವಸಗಳಲ್ಲಿ ಉಪವಾಸಮಾಡಿರಿ. (ತಿರ್ಮಿದಿ)

# ಇಸ್ಲಾಮ್ ಶಾಂತಿ ಮತ್ತು ಕರುಣೆಯ ಧರ್ಮ



ಯುನೈಟೆಡ್ ಕಿಂಗ್‌ಡಮ್‌ನಲ್ಲಿ ಅಹ್ಮದಿಯಾ ಮುಸ್ಲಿಮ್ ಜಮಾಅತ್ ಸ್ಥಾಪಿತವಾಗಿ ಒಂದು ನೂರು ವರ್ಷಗಳು ತುಂಬಿದ ಸಮಾರಂಭಾಚರಣೆಯ ಅಂಗವಾಗಿ, ಜಾಗತಿಕ ಅಹ್ಮದಿಯಾ ಮುಸ್ಲಿಮ್ ಜಮಾಅತಿನ ಸರ್ವೋಚ್ಚ ನೇತಾರ ಮತ್ತು ಪಂಚಮ ಖಲೀಫರಾದ ಹಝ್ರತ್ ಮಿರ್ಝಾ ಮಸ್‌ರೂರ್ ಅಹ್ಮದ್ ಅವರು ಲಂಡನಿನ ಹೌಸ್ ಆಫ್ ಪಾರ್ಲಿಮೆಂಟ್‌ನಲ್ಲಿ 2013 ಜೂನ್ 11ರಂದು ಭಾಷಣ ಮಾಡಿದರು.

ಈ ಶತವಾರ್ಷಿಕ ಸಮಾರಂಭ ಸಭೆಯಲ್ಲಿ 30 ಪಾರ್ಲಿಮೆಂಟ್ ಸದಸ್ಯರೂ 12 ಹೌಸ್ ಆಫ್ ಲಾರ್ಡ್ಸ್ ಸದಸ್ಯರೂ 6 ಕ್ಯಾಬಿನೆಟ್ ಸಚಿವರೂ ಬೇರೆ ಇಬ್ಬರು ಸಚಿವರೂ ಸೇರಿ 68 ಗಣ್ಯರು ಭಾಗವಹಿಸಿದ್ದರು. ಬಿ.ಬಿ.ಸಿ., ಸ್ಕೈಟಿವಿ, ಐಟಿವಿ ಸಹಿತ ಹಲವಾರು ವಾರ್ತಾ ಮಾಧ್ಯಮ ಪ್ರತಿನಿಧಿಗಳೂ ಹಾಜರಿದ್ದರು.

ಎಡ್ ಡೇವಿ ಎಂ.ಪಿ. (ಸೆಕ್ರಿಟರಿ ಆಫ್ ಸ್ಟೇಟ್ ಫೋರ್ ಎನರ್ಜಿ ಆ್ಯಂಡ್ ಕ್ಲೈಮೇಟ್ ಚೇಂಜ್), ನಿಕ್ ಕ್ಲೆಗ್ಗ್ ಎಂ.ಪಿ. (ಡಿಪ್ಯುಟಿ ಪ್ರೈಮ್ ಮಿನಿಸ್ಟರ್), ತೆರೇಸಾ ಮೇ ಎಂ.ಪಿ. (ಹೋಂ ಸೆಕ್ರಿಟರಿ), ಡಗ್ಲಾಸ್ ಅಲೆಕ್ಸಾಂಡರ್ ಎಂ.ಪಿ. (ಶಾಡೋ ಫಾರಿನ್ ಸೆಕ್ರಿಟರಿ), ಕೇತ್ ವಾಝ್ ಎಂ.ಪಿ. (ಚೇರ್‌ಮನ್ ಆಫ್ ಹೋಂ ಅಫೇರ್ಸ್ ಸೆಲೆಕ್ಟ್ ಕಮಿಟಿ), ಸಿಯೋಭೈನ್ ಮೆಕ್‌ಡೊನೋ ಎಂ.ಪಿ. (ಮಿಟ್‌ಚಾಮ್ ಆ್ಯಂಡ್ ಮೋರ್ಡೆನ್ ) ಮೊದಲಾದವರು ಉಪಸ್ಥಿತರಿದ್ದರು.

ರೈಟ್ ಆನರೇಬಲ್ ಎಡ್ ಡೇವಿ (ಎನರ್ಜಿ ಆ್ಯಂಡ್ ಕ್ಲೈಮೇಟ್ ಚೇಂಜ್ ಸಚಿವ) ಹೀಗೆಂದರು:

"ಈ ದಿನ ಅಹ್ಮದಿಯಾ ಮುಸ್ಲಿಮ್ ಸಂಘಟನೆಗೆ ನಾವು ಆತಿಥೇಯರಾದುದು ನಮಗೆ ದೊರೆತ ವಿಶೇಷ ಗೌರವವಾಗಿದೆ. ಹಝ್ರತ್ ಮಿರ್ಝಾ ಮಸ್‌ರೂರ್ ಅಹ್ಮದ್‌ರವರು ಜಾಗತಿಕ ಶಾಂತಿ ಸ್ಥಾಪನೆಗೋಸ್ಕರ ಮಾಡುವ ಆಶ್ಚರ್ಯಕರ ಕಾರ್ಯಗಳ ಬಗ್ಗೆ ನಮಗೆ ಚೆನ್ನಾಗಿ ತಿಳಿದಿದೆ. ಅವರೊಂದಿಗೆ ಅಹ್ಮದಿಯಾ ಜಮಾಅತಿನ ಸದಸ್ಯರೂ ಕಾರ್ಯನಿರತರಾಗಿದ್ದಾರೆ. ದೇಶಭಕ್ತರೂ ಕಠಿಣ ಪರಿಶ್ರಮಿಗಳೂ ಆಗಿರುವ ನಿಮಗೆಲ್ಲರಿಗೂ ಕೃತಜ್ಞತೆ ಅರ್ಪಿಸಲು ಇಷ್ಟೆಲ್ಲ ಪಾರ್ಲಿಮೆಂಟ್ ಸದಸ್ಯರು ಇಲ್ಲಿಗೆ ಬಂದು ಜೊತೆಗೂಡಿರುವುದು ಅತ್ಯಂತ ಅನುಯೋಜ್ಯವಾದುದಾಗಿದೆ."

ಡಿಪ್ಯುಟಿ ಪ್ರೈಮ್ ಮಿನಿಸ್ಟರ್ ರೈಟ್ ಆನರೇಬಲ್ ನಿಕ್ ಕ್ಲೆಗ್ಗ್ ಹೀಗೆ ಹೇಳಿದರು: "ಲೋಕದ ಮಿಲಿಯಗಟ್ಟಲೆ ಜನರಿಗೆ ಅಹ್ಮದಿಯಾ ಸಂಘಟನೆ ನಿರಂತರವಾಗಿ ತಲುಪಿಸುತ್ತಿರುವ ಮೌಲ್ಯಾಧಾರಿತ ಮುಖ್ಯ ಸಂದೇಶ ಮತ್ತು ಮನೋಭಾವ ಶಾಂತಿ, ಪ್ರೀತಿ ಮತ್ತು ಸೌಹಾರ್ದವಾಗಿದ್ದು ಎಲ್ಲ ಕಾಲಘಟ್ಟಗಳಲ್ಲೂ ಎಲ್ಲ ಸಮುದಾಯಗಳಲ್ಲೂ ಬಾಳುವಂತಹ ಶಕ್ತಿಶಾಲಿ ಸಂದೇಶ ಇದಾಗಿದೆ......... ನಮ್ಮ ರಾಜಕೀಯ, ಧಾರ್ಮಿಕ ಹಿನ್ನೆಲೆ ಹೇಗಿದ್ದರೂ ನಿಮ್ಮ ಸಂಘಟನೆ ಈ ದೇಶದಲ್ಲಿ ಕಳೆದ ಒಂದು ನೂರಕ್ಕಿಂತ ಹೆಚ್ಚು ವರ್ಷ ಕಾರ್ಯಪ್ರವೃತ್ತವಾದುದರ ಬಗ್ಗೆ ನಾವು ಸಂಭ್ರಮಿಸುತ್ತೇವೆ. ಶಾಂತಿ, ಪ್ರೀತಿ ಮತ್ತು ಸೌಹಾರ್ದದ ಸಂದೇಶವನ್ನು ಸಮಾಧಾನಪೂರ್ವಕವಾಗಿಯೂ ನಿರಂತರವಾಗಿಯೂ ಗೌರವಪೂರ್ಣವಾಗಿಯೂ ಹರಡುತ್ತಾ ತಲಪಿಸುತ್ತಾ ಇದ್ದುದಕ್ಕಾಗಿ ನಿಮ್ಮನ್ನು ಪ್ರಶಂಶಿಸುತ್ತೇವೆ."

ರೈಟ್ ಆನರೇಬಲ್ ಡಗ್ಲಸ್ ಅಲೆಕ್ಸಾಂಡರ್, ಶ್ಯಾಡೋ ಫೋರಿನ್ ಸೆಕ್ರೆಟರಿ ಹೀಗೆಂದರು:

"ಹೆಚ್ಚು ವೈವಿಧ್ಯತೆಗಳಿಂದ ತುಂಬಿದ ಮತ್ತು ಪಂಥಾಹ್ವಾನಗಳನ್ನು ಎದುರಿಸುತ್ತಿರುವ ಲೋಕಕ್ಕೆ ಸೌಹಾರ್ದ ಸಂದೇಶ ಹಿಂದೆಂದಿಗಿಂತಲೂ ಹೆಚ್ಚು ಆವಶ್ಯಕವಾಗಿದೆ. ನೀವು (ಹಝ್ರತ್ ಮಿರ್ಝಾ ಮಸ್‌ರೂರ್ ಅಹ್ಮದ್) ತೋರಿಸಿದ ನಾಯಕತ್ವದ ಬಗ್ಗೆ, ನಿಮ್ಮ ಸಂಘಟನೆಯವರ ಸಾಮೂಹಿಕ ಪ್ರವರ್ತನೆಗಳ ಬಗ್ಗೆ, ನೀವೆಲ್ಲರೂ ಮಾಡಿದ ಕೆಲಸಗಳ ಬಗ್ಗೆ, ನೀವು ಉಂಟುಮಾಡಿದ ಪರಿವರ್ತನೆಗಳ ಬಗ್ಗೆ, ನೀವು ಅಹ್ಮದಿಯಾ ಜಮಾಅತಿಗೋಸ್ಕರ ಮಾತ್ರವಲ್ಲ, ಎಲ್ಲರಿಗೋಸ್ಕರ ಮಾಡುವ ನಿಮ್ಮ ಸೇವೆಗಳ ಬಗ್ಗೆ, ನೀವು ಸಹನೆ, ಸೌಹಾರ್ದ ಮತ್ತು ಶಾಂತಿಗೋಸ್ಕರ ಶಕ್ತಿಶಾಲಿ ಕರೆ ನೀಡುವುದರ ಬಗ್ಗೆ ನಮ್ಮ ಮೆಚ್ಚಿಗೆಯನ್ನು ದಾಖಲಿಸಲು ಬಯಸುತ್ತೇವೆ. ಎಲ್ಲರೊಂದಿಗೆ ಪ್ರೀತಿ, ಯಾರೊಂದಿಗೂ ದ್ವೇಷವಿಲ್ಲ ಎಂಬ ತತ್ವೋಪದೇಶದಿಂದ ನಾವೆಲ್ಲರೂ ಲಾಭ ಪಡೆಯಬಹುದಾಗಿದೆ ಮತ್ತು ಅದರ ಮೂಲಕ ಮುಂದಿನ ವರ್ಷಗಳಲ್ಲಿ ತುಂಬಾ ಕಲಿತುಕೊಳ್ಳಲಿಕ್ಕಿದೆ."

ರೈಟ್ ಆನರೇಬಲ್ ತೆರೇಸ ಮೇ (ಗೃಹಕಾರ್ಯ ಮಂತ್ರಿ) ಹೀಗೆಂದರು:

"ಅತಿರೇಕವಾದಿಗಳನ್ನು ಅವರ ವಿಷಕರ ನಂಬಿಕೆಗಳಿಂದ ಹಿಮ್ಮೆಟ್ಟಿಸಲು ಇರುವ ಏಕ ಮಾತ್ರ ಮಾರ್ಗ ಶಾಂತಿಯುತ ಸಂಭಾಷಣೆ ಮೂಲಕವಾಗಿದೆ ಎಂದು ಹಝ್ರತ್ ಮಿರ್ಝಾ ಮಸ್‌ರೂರ್ ಅಹ್ಮದ್ ತೋರಿಸಿಕೊಟ್ಟಿದ್ದಾರೆ ಮತ್ತು ತೋರಿಸಿಕೊಡುತ್ತಾ ಇದ್ದಾರೆ. ಇದು ನೀವು ಲೋಕದಾದ್ಯಂತ ಹರಡುತ್ತಿರುವ ಸಂದೇಶವಾಗಿದೆ. ಈ ಸಂದೇಶವನ್ನು ನಾವು ಆಲಿಸಬೇಕು ಮತ್ತು ಅದರ ಬಗ್ಗೆ ಲಕ್ಷ್ಯ ನೀಡಬೇಕು. ಪಾಕಿಸ್ತಾನದಲ್ಲಿ ನಿಮ್ಮ ವಿರುದ್ಧವಾದ ಕಾರ್ಯಾಚರಣೆಗಳಿಗೆ ನೀವು ಗುರಿಯಾಗಿರುವಿರಿ ಎಂದು ನನಗೆ ಗೊತ್ತಿದೆ. ಅಲ್ಲಿ ಅಹ್ಮದಿಯರು ತಮ್ಮನ್ನು ಮುಸ್ಲಿಮರೆಂದು ಹೇಳುವುದು ಅಪರಾಧವಾಗಿದೆ. ಅಲ್ಲಿ ನೀವು ಕೆಲವು ಭಯಾನಕ ಆಕ್ರಮಣಗಳಿಗೆ ಗುರಿಯಾಗಿರುವಿರಿ. ಅತಿರೇಕವಾದವು ಎಲ್ಲಿದ್ದರೂ ಅದನ್ನು ಸದೆ ಬಡಿಯಲು ನಾನು ಬದ್ಧಳಾಗಿದ್ದೇನೆ.......

ಇನ್ನೊಂದು ನೂರು ವರ್ಷ ದಾಟಿಹೋಗುವಾಗ ಬ್ರಿಟನ್‌ನಲ್ಲಿ ಅಹ್ಮದಿಯಾ ಮುಸ್ಲಿಮ್ ಸಂಘಟನೆ ಇನ್ನೂರುವರ್ಷ ಕಾರ್ಯನಿರತವಾದುದರ ಬಗ್ಗೆ ಜನರು ಸಂಭ್ರಮಿಸುವರು ಎಂದು ನಾನು ಧೃಢವಾಗಿ ನಂಬುತ್ತೇನೆ. ನೀವು ಯುನೈಟೆಡ್ ಕಿಂಗ್‌ಡಮ್‌ಗೆ ನೀಡಿದ ಕೊಡುಗೆಗಳ ಬಗ್ಗೆ ಇಲ್ಲಿ ಮಾತ್ರವಲ್ಲ ನೀವು ಲೋಕದಾದ್ಯಂತ ನೀಡುವ ಸಂದೇಶದ ಬಗ್ಗೆ ನಾನು ನಿಮಗೆ ಕೃತಜ್ಞತೆ ಅರ್ಪಿಸುತ್ತೇನೆ."

# ಹಝ್ರತ್ ಖಲೀಫತುಲ್ ಮಸೀಹರ ಭಾಷಣ

ಬಿಸ್ಮಿಲ್ಲಾಹಿರ್ರಹ್ಮಾನಿರ್ರಹೀಮ್ - ಪರಮ ದಯಾವಂತನೂ ಕಾರುಣ್ಯನಿಧಿಯೂ ಆದ ಅಲ್ಲಾಹನ ನಾಮದಿಂದ.

ಎಲ್ಲ ಗಣ್ಯ ಅತಿಥಿಗಳಿಗೆ ಅಸ್ಸಲಾಮು ಅಲೈಕುಮ್ ವ ರಹ್ಮತುಲ್ಲಾಹಿ ವ ಬರಕಾತುಹೂ - ಅಲ್ಲಾಹನ ಶಾಂತಿ ಮತ್ತು ಅನುಗ್ರಹಗಳು ನಿಮ್ಮ ಮೇಲೆ ಸುರಿಯಲ್ಪಡಲಿ.

ಮೊತ್ತ ಮೊದಲು ನಾನು ಅಹ್ಮದಿಯಾ ಮುಸ್ಲಿಮ್ ಜಮಾಅತಿನ ಸ್ನೇಹಿತರಿಗೆ ಕೃತಜ್ಞತೆ ಅರ್ಪಿಸುತ್ತೇನೆ. ಅಹ್ಮದಿಯಾ ಮುಸ್ಲಿಮ್ ಜಮಾಅತ್ ಯುನೈಟೆಡ್ ಕಿಂಗ್‌ಡಮ್‌ನಲ್ಲಿ ಶತವಾರ್ಷಿಕ ಸಮಾರಂಭವನ್ನು ಆಚರಿಸುವ ಪ್ರಯುಕ್ತ ಈ ಜಮಾಅತಿನೊಂದಿಗೆ ತಮ್ಮ ಸ್ನೇಹ ಮತ್ತು ನಿಕಟ ಸಂಬಂಧವನ್ನು ಬಹಿರಂಗಗೊಳಿಸಲು ನಮ್ಮ ಸ್ನೇಹಿತರು ಈ ಸಮಾರಂಭವನ್ನು ಪಾರ್ಲಿಮೆಂಟ್ ಹೌಸ್‌ನಲ್ಲಿ ವ್ಯವಸ್ಥೆಗೊಳಿಸಿದ್ದಾರೆ. ಈ ಸಮಾರಂಭವನ್ನು ಯಶಸ್ವಿಯಾಗಿಯೂ ಪ್ರಯೋಜನಕರವಾಗಿಯೂ ಜರಗಿಸಲು ಇಲ್ಲಿಗೆ ಆಗಮಿಸಿರುವ ಎಲ್ಲ ಅತಿಥಿಗಳಿಗೆ ಸಹ ನಾನು ಕೃತಜ್ಞತೆ ಅರ್ಪಿಸುತ್ತೇನೆ. ನೀವು ನಿಮ್ಮ ಇತರ ಯಾವುದೇ ಕಾರ್ಯಕ್ರಮದಲ್ಲಿ ಭಾಗವಹಿಸದೆ ಈ ಕಾರ್ಯಕ್ರಮಕ್ಕೆ ಆಸಕ್ತಿಯಿಂದ ಆಗಮಿಸಿರುವುದರಿಂದ ನಾನು ಸಂತೋಷಪಡುತ್ತೇನೆ. ನಾನು ನಿಮ್ಮ ಮನೋಭಾವಕ್ಕೆ ಕೃತಜ್ಞತೆ ಅರ್ಪಿಸುತ್ತೇನೆ ಮತ್ತು ಅದನ್ನು ಮೆಚ್ಚುಗೆಯಿಂದ ಕಾಣುತ್ತೇನೆ. ಈ ಸುಂದರ ಭವ್ಯ ಭವನದಲ್ಲಿ ಕೆಲಸ ಮಾಡುತ್ತಿರುವ ಜನರು ಮತ್ತು ಸರಕಾರಿ ವಿಭಾಗಗಳು ಈ ದೇಶಕ್ಕೂ ಈ ದೇಶದ ಜನತೆಗೂ ಸೇವೆ ಮಾಡಿ ತಮ್ಮ ಕರ್ತವ್ಯಗಳನ್ನು ನೇರವೇರಿಸಲಿ ಎಂದು ಪ್ರಾರ್ಥಿಸುತ್ತೇನೆ. ಅನ್ಯ ದೇಶಗಳೊಂದಿಗೆ ಉತ್ತಮ ಬಾಂಧವ್ಯ ಹೊಂದಲು, ನ್ಯಾಯಪಾಲಿಸಲು ಮತ್ತು ಎಲ್ಲ ಪಕ್ಷಗಳಿಗೆ ಪ್ರಯೋಜನಕರವಾದ ತೀರ್ಮಾನಗಳನ್ನು ಕೈಗೊಳ್ಳಲು ಅವರು ಉತ್ತಮವಾಗಿ ಪ್ರಯತ್ನಿಸುವವರಾಗಲಿ ಎಂದು ನಾನು ಶುಭಪ್ರತೀಕ್ಷೆ ಹೊಂದಿ ಪ್ರಾರ್ಥಿಸುತ್ತೇನೆ. ಇಂತಹ ಮನೋಭಾವವನ್ನು ಬೆಳೆಸಿದರೆ ಆದರಿಂದ ಉತ್ತಮ ಫಲಗಳು ಲಭಿಸುವುವು. ಪ್ರೀತಿ, ವಾತ್ಸಲ್ಯ ಮತ್ತು ಸಾಹೋದರ್ಯವೆಂಬುದೇ ಆ ಉತ್ತಮ ಫಲಗಳಾಗಿವೆ. ಅವುಗಳ ಮೂಲಕ ಲೋಕವು ಶಾಂತಿ ಮತ್ತು ಸಮೃದ್ಧಿಯ ಧಾಮವಾಗುವುದು.

ನನ್ನ ಈ ಅಭಿಲಾಷೆ ಮತ್ತು ಪ್ರಾರ್ಥನೆಯಲ್ಲಿ ಎಲ್ಲ ಅಹ್ಮದೀ ಮುಸ್ಲಿಮರು ಭಾಗಿಗಳಾಗಿದ್ದಾರೆ. ನಾವೆಲ್ಲರೂ ದೇಶಭಕ್ತರಾಗಿ ಮಾನವರೆಲ್ಲರ ಹಿತೈಷಿಗಳಾಗಬೇಕೆಂದು ದೃಢವಾಗಿ ನಂಬುತ್ತೇವೆ. ದೇಶ ಭಕ್ತಿಯು ಧಾರ್ಮಿಕ ವಿಶ್ವಾಸದ ಒಂದು ಭಾಗವಾಗಿದೆ ಎಂದು ಅಹ್ಮದೀ ಮುಸ್ಲಿಮರು ನಂಬುತ್ತಾರೆ. ಏಕೆಂದರೆ, ಹಝ್ರತ್ ಮುಹಮ್ಮದ್ ಪೈಗಂಬರರು(ಸ) ಇದರ ಬಗ್ಗೆ ಒತ್ತಿಹೇಳಿ ಆಜ್ಞಾಪಿಸಿದ್ದಾರೆ. ಆದುದರಿಂದ ನಾನು ಸ್ಪಷ್ಟಪಡಿಸಲು ಬಯಸುತ್ತೇನೆ. ಬ್ರಿಟಿಷ್ ಪ್ರಜೆಯಾದ ಅಹ್ಮದೀ ಮುಸ್ಲಿಮ್, ಆತನು ಇಲ್ಲಿ ಜನಿಸಿದವನಾಗಿದ್ದರೂ, ವಿದೇಶದಿಂದ ವಲಸೆ ಬಂದು ಇಲ್ಲಿನ ಪೌರತ್ವ ಗಳಿಸಿವವನಾಗಿದ್ದರೂ ಈ ದೇಶಕ್ಕೆ ಸಂಪೂರ್ಣವಾಗಿ ನಿಷ್ಠನಾಗಿರುತ್ತಾನೆ ಮತ್ತು ಈ ದೇಶವನ್ನು ಹೃತ್ಪೂರ್ವಕವಾಗಿ ಪ್ರೀತಿಸುತ್ತಾನೆ. ಈ ಮಹಾನ್ ದೇಶ

ಅಭಿವೃದ್ಧಿಯನ್ನೂ ಸಮೃದ್ಧಿಯನ್ನೂ ಗಳಿಸಬೇಕೆಂದು ಅವರೆಲ್ಲರೂ ಆಶಿಸುತ್ತಾರೆ. ಇತರ ದೇಶಗಳಿಂದ ವಲಸೆ ಬಂದು ಈ ದೇಶದಲ್ಲಿ ವಾಸಿಸುವವರು ಈ ದೇಶದ ಜನಸಂಖ್ಯೆಯ ಹದಿನಾಲ್ಕು ಹದಿನೈದು ಶತಮಾನಗಳಷ್ಟು ಎಂದು ಅಂದಾಜು ಮಾಡಲಾಗಿದೆ ಮತ್ತು ಇದು ಬಹಳ ಗಮನಾರ್ಹವಾಗಿದೆ. ಇಲ್ಲಿನ ಬ್ರಿಟಿಷ್ ಜನತೆಯ ವಿಶಾಲ ಹೃದಯ ಮತ್ತು ಸಹಿಷ್ಣುತಾ ಮನೋಭಾವವನ್ನು ಪ್ರಸ್ತಾಪಿಸಿ ಪ್ರಶಂಸಿಸದೆ ನಾನು ಮುಂದುವರಿಯಲಾರೆನು. ಅವರು ವಲಸೆಗಾರರನ್ನು ಈ ದೇಶದ ಪ್ರಜೆಗಳಾಗಿ ಅಂಗೀಕರಿಸಿ ಬ್ರಿಟಿಷ್ ಸಮಾಜದ ಭಾಗವಾಗಲು ಅನುಮತಿಸಿರುವುದು ಬ್ರಿಟಿಷ್ ಜನತೆಯ ಮಹತ್ತರವಾದ ಸದ್ಗುಣಗಳಾಗಿವೆ. ಈ ದೇಶಕ್ಕೆ ವಲಸೆ ಬಂದವರು ಈ ದೇಶದ ನಿಷ್ಠಾವಂತ ಪ್ರಜೆಗಳಾಗಬೇಕು ಮತ್ತು ಎಲ್ಲ ವಿಧಗಳ ಅಸ್ತವ್ಯಸ್ತತೆಯನ್ನೂ ಸಂಘರ್ಷವನ್ನೂ ನಿವಾರಿಸಲು ಸರಕಾರಕ್ಕೆ ಬೆಂಬಲ ನೀಡಬೇಕಾದುದು ಅವರ ನೈತಿಕ ಜವಾಬ್ದಾರಿಯಾಗಿದೆ. ಅಹ್ಮದಿಯಾ ಮುಸ್ಲಿಮ್ ಜಮಾಅತ್‌ಗೆ ಸೇರಿದವರು, ಅವರು ಯಾವ ದೇಶದಲ್ಲಿ ನೆಲೆಸಿದ್ದರೂ ಈ ತತ್ವಕ್ಕೆ ಅನುಸಾರವಾಗಿ ವರ್ತಿಸುತ್ತಾರೆ.

ನಿಮಗೆ ತಿಳಿದಿರುವಂತೆ ಈ ವರ್ಷ ಯುನೈಟೆಡ್ ಕಿಂಗ್‌ಡಮ್‌ನಲ್ಲಿ ಅಹ್ಮದಿಯಾ ಮುಸ್ಲಿಮ್ ಜಮಾಅತ್ ಸ್ಥಾಪನೆಯ ಶತವಾರ್ಷಿಕಾಚರಣೆಯನ್ನು ನಾವು ಮಾಡುತ್ತಿದ್ದೇವೆ. ಕಳೆದ ಒಂದು ನೂರು ವರ್ಷಗಳಲ್ಲಿ ಅಹ್ಮದಿಯಾ ಮುಸ್ಲಿಮ್ ಜಮಾಅತ್ ಹೀಗೆ ಸಾಬೀತುಗೊಳಿಸಿದೆ: ಈ ಜಮಾಅತಿನ ಸದಸ್ಯರು ಈ ದೇಶದ ನಿಷ್ಠಾವಂತ ನಾಗರಿಕರಾಗಿ ಜೀವಿಸಿ ಎಲ್ಲ ವಿಧಗಳ ಅತಿರೇಕವಾದ, ವಿದ್ರೋಹ ಮತ್ತು ಗಲಭೆ ಗೊಂದಲಗಳಿಂದ ತಮ್ಮನ್ನು ಮುಕ್ತರನ್ನಾಗಿ ಮಾಡಿದ್ದಾರೆ. ಈ ನಿಷ್ಠೆ ಮತ್ತು ದೇಶಪ್ರೇಮಕ್ಕೆ ಮೂಲಕಾರಣ ಅಹ್ಮದಿಯಾ ಮುಸ್ಲಿಮ್ ಜಮಾಅತ್ ನೈಜ ಇಸ್ಲಾಮೀ ಧರ್ಮವನ್ನು ಅನುಸರಿಸುವ ಸಮುದಾಯವಾಗಿದೆ. ನಾವು ಯಾವಾಗಲೂ ಇಸ್ಲಾಮ್ ಧರ್ಮದ ನೈಜ ಶಾಂತಿ ಪ್ರತಿಪಾದಕ ತತ್ವಗಳನ್ನು ಲೋಕದ ಜನರ ಮುಂದೆ ನಿರಂತರವಾಗಿ ಪ್ರಸ್ತಾಪಿಸುತ್ತಾ ಇದ್ದೇವೆ ಮತ್ತು ಆ ತತ್ವಗಳು ಇಸ್ಲಾಮ್ ಧರ್ಮದ ವಾಸ್ತವಿಕ ಧರ್ಮತತ್ವಗಳು ಎಂದು ಅಂಗೀಕರಿಸಲ್ಪಡಲು ಕಠಿಣ ಪರಿಶ್ರಮ ನಡೆಸುತ್ತಾ ಇರುತ್ತೇವೆ. ಈ ಪ್ರಸ್ತಾವನೆಯ ನಂತರ ನಾನು ನನ್ನ ಭಾಷಣದ ಮುಖ್ಯ ವಿಷಯದ ಕಡೆಗೆ ಬರುತ್ತೇನೆ.

ನಮ್ಮ ಜಮಾಅತ್ ಶಾಂತಿ, ಸೌಹಾರ್ದ ಮತ್ತು ಭಾವೈಕ್ಯತೆಯನ್ನು ಪ್ರತಿಪಾದಿಸುತ್ತಿದ್ದು ನಮ್ಮ ಆದರ್ಶ ತತ್ವ "ಎಲ್ಲರೊಂದಿಗೆ ಪ್ರೀತಿ, ಯಾರೊಂದಿಗೂ ದ್ವೇಷವಿಲ್ಲ" ಎಂದಾಗಿದೆ. ಮುಸ್ಲಿಮೇತರರಾದ ಕೆಲವರಿಗೆ ನಮ್ಮ ಬಗ್ಗೆ ತಿಳಿದಿದ್ದರೂ ಮತ್ತು ನಮ್ಮೊಂದಿಗೆ ನಿಕಟ ಸಂಬಂಧ ಇದ್ದರೂ ಅಹ್ಮದಿಯಾ ಮುಸ್ಲಿಮ್ ಜಮಾಅತ್ ತನ್ನ ಶಾಂತಿ ಸಂದೇಶ ಮತ್ತು ಭ್ರಾತೃತ್ವ ಮನೋಭಾವವನ್ನು ನೇರವಾಗಿ ಇಸ್ಲಾಮ್ ಧರ್ಮದೊಂದಿಗೆ ಜೋಡಿಸಿ ಹೇಳುವುದು ಅವರಿಗೆ ಆಶ್ಚರ್ಯಕರವಾಗುತ್ತದೆ. ಅವರ ಈ ಆಶ್ಚರ್ಯ ಮತ್ತು ಆಘಾತಕ್ಕೆ ಕಾರಣವೇನೆಂದರೆ, ಅಹ್ಮದಿಯೇತರರಾದ ತಥಾಕಥಿತ ಮುಸ್ಲಿಮ್ ವಿದ್ವಾಂಸರಲ್ಲಿ ಹಲವರು ಮತ್ತು ಸಂಸ್ಥೆಗಳು ಸಂಪೂರ್ಣವಾಗಿ ಬೇರೆ ರೀತಿಯಲ್ಲಿ ಮಾತನಾಡುತ್ತಾರೆ ಮತ್ತು ಬೇರೆಯೇ ಆದ ಒಂದು ಸಂದೇಶವನ್ನು ನೀಡುತ್ತಿದ್ದಾರೆ. ನಮ್ಮ ಮತ್ತು ಇತರ ಮುಸ್ಲಿಮರ ಮಧ್ಯೆ ಇರುವ ಭಿನ್ನಾಭಿಪ್ರಾಯಗಳ ಬಗ್ಗೆ ಹೀಗೆ ವಿವರಣೆ ನೀಡಬಹುದು: ಅಹ್ಮದೀ ಮುಸ್ಲಿಮರಾದ ನಾವು, ಈ ಕಾಲಘಟ್ಟದಲ್ಲಿ ಖಡ್ಗ ಮೂಲಕ ಜಿಹಾದ್ ನಡೆಸುವುದು ಸಂಪೂರ್ಣ ತಪ್ಪೆಂದು ನಂಬುತ್ತೇವೆ ಮತ್ತು ಅದನ್ನು ತಿರಸ್ಕರಿಸುತ್ತೇವೆ. ಆದರೆ ಬೇರೆ ಕೆಲವು ಮುಸ್ಲಿಮ್ ವಿದ್ವಾಂಸರು ಅದನ್ನು ಪ್ರತಿಪಾದಿಸುತ್ತಾರೆ ಮತ್ತು ಅನುಷ್ಠಾನಕ್ಕೆ ತರುತ್ತಿದ್ದಾರೆ. ಈ ವಿದ್ವಾಂಸರ ಈ ನಂಬಿಕೆಯ ಕಾರಣದಿಂದ ಅನೇಕ ಭೀಕರ ಸಂಘಟನೆಗಳು ಲೋಕದಲ್ಲಿ ವಿವಿಧ ದೇಶಗಳಲ್ಲಿ ಮುಸ್ಲಿಮರಲ್ಲಿ ತಲೆ ಎತ್ತಿವೆ. ಭೀಕರ ಸಂಘಟನೆಗಳು ಮಾತ್ರವಲ್ಲ, ಕೆಲವು ವ್ಯಕ್ತಿಗಳು ಸಹ ಈ ತಪ್ಪು ವಿಶ್ವಾಸಗಳ ಪ್ರಕಾರ ಕಾರ್ಯೋನ್ಮುಖರಾಗಿ ಭೀಕರ ಕೃತ್ಯಗಳನ್ನು ನಡೆಸುತ್ತಾರೆ. ಇತ್ತೀಚೆಗಿನ ಒಂದು ಉದಾಹರಣೆ, ಒಬ್ಬ ನಿರಪರಾಧಿ ಬ್ರಿಟಿಷ್ ಸೈನಿಕನನ್ನು ಲಂಡನ್‌ನಲ್ಲಿ ಕ್ರೂರವಾಗಿ ವಧಿಸಿದುದಾಗಿದೆ. ಈ ಆಕ್ರಮಣಕ್ಕೆ ಇಸ್ಲಾಮಿನ ನೈಜ ಧರ್ಮತತ್ವಗಳೊಂದಿಗೆ ಯಾವ ಸಂಬಂಧವೂ ಇರುವುದಿಲ್ಲ. ಇಸ್ಲಾಮ್ ಧರ್ಮತತ್ವಗಳು ಇಂತಹ ವರ್ತನೆಯನ್ನು ಬಲಯುತವಾಗಿ ಖಂಡಿಸುತ್ತವೆ. ಇಂತಹ ಕೆಟ್ಟ ಗೂಢ ಕಾರ್ಯಕ್ರಮಗಳು ಇಸ್ಲಾಮಿನ ನೈಜ ತತ್ವಗಳು ಮತ್ತು ತಪ್ಪಾಗಿ ಗ್ರಹಿಸಲ್ಪಟ್ಟ ತತ್ವಗಳ ಮಧ್ಯೆ ಇರುವ ವ್ಯತ್ಯಾಸವನ್ನು ಸ್ಪಷ್ಟಪಡಿಸುತ್ತವೆ. ಕೆಲವು ತಥಾಕಥಿತ ಮುಸ್ಲಿಮರು ತಮ್ಮ ದುರುದ್ದೇಶಗಳನ್ನು ಈಡೇರಿಸಲು ಈ ತಪ್ಪು ತತ್ವಗಳನ್ನು ಅನುಸರಿಸುತ್ತಾರೆ. ಸ್ಥಳೀಯ ಕೆಲವು ಗುಂಪುಗಳು ಈ ಘಟನೆ ಬಗ್ಗೆ ನೀಡಿದ ಪ್ರತಿಕ್ರಿಯೆ ಸರಿಯಾಗಿರಲಿಲ್ಲವೆಂದೂ ಅವರ ಪ್ರತಿಕ್ರಿಯೆ ಸಮಾಜದಲ್ಲಿ ಶಾಂತಿಭಂಗ ಉಂಟು ಮಾಡುವಂತಹದಾಗಿತ್ತೆಂದೂ ನಾನು ಹೇಳಲು ಬಯಸುತ್ತೇನೆ.

ನಾವು ಇಸ್ಲಾಮ್ ಧರ್ಮದ ಬಗ್ಗೆ ಏನನ್ನು ಪ್ರತಿಪಾದಿಸುತ್ತಿದ್ದೇವೋ ಅದೇ ನೈಜ ಇಸ್ಲಾಮ್ ಧರ್ಮತತ್ವಗಳು ಎಂದು ಸಾಬೀತುಗೊಳಿಸಬಲ್ಲ ಸಾಕ್ಷ್ಯಗಳೇನು? ಮೂಲಭೂತ ತತ್ವವೇನೆಂದರೆ, ಇಸ್ಲಾಮ್ ಧರ್ಮದ ವಿರುದ್ಧ ಯುದ್ಧಾಕ್ರಮಣ ನಡೆದಾಗ ಮಾತ್ರ ಖಡ್ಗ ಅಥವಾ ಬಲಪ್ರಯೋಗಕ್ಕೆ ಅನುಮತಿ ನೀಡಲಾಗಿದೆ. ಇಂದಿನ ಲೋಕದಲ್ಲಿ ಯಾವುದೇ ದೇಶ ಅಥವಾ ಯಾವುದೇ ಧರ್ಮ ಇಸ್ಲಾಮ್ ಧರ್ಮದ ವಿರುದ್ಧ ಯುದ್ಧ ನಡೆಸುತ್ತಾ ಇಲ್ಲ. ಆದುದರಿಂದ ಮುಸ್ಲಿಮರು ಧರ್ಮದ ಹೆಸರಿನಲ್ಲಿ ಅನ್ಯರ ವಿರುದ್ಧ ಆಕ್ರಮಣ ನಡೆಸುವುದನ್ನು ಸಮರ್ಥಿಸಲು ಸಾಧ್ಯವಿಲ್ಲ. ಏಕೆಂದರೆ ಅದು ಖುರ್‌ಆನಿನ ತತ್ವಗಳಿಗೆ ವಿರುದ್ಧವಾದ ವರ್ತನೆಯಾಗಿದೆ. ಇಸ್ಲಾಮ್ ವಿರುದ್ಧ ಖಡ್ಗ ಎತ್ತಿದವರ ವಿರುದ್ಧ ಮಾತ್ರ ಬಲಪ್ರಯೋಗಮಾಡಲು ಪವಿತ್ರ ಖುರ್‌ಆನ್ ಅನುಮತಿ ನೀಡಿದೆ. ಇನ್ನೊಂದು ಮುಖ್ಯ ಅಂಶವೇನೆಂದರೆ, ಒಬ್ಬ ಪ್ರಜೆ ತನ್ನ ದೇಶ ಅಥವಾ ತನ್ನ ದೇಶದ ಪ್ರಜೆಯ ವಿರುದ್ಧ ಏನಾದರೂ ಹಾನಿಯನ್ನುಂಟುಮಾಡುತ್ತಾನಾದರೆ ಅವನು ಇಸ್ಲಾಮ್ ಧರ್ಮ ತತ್ವಗಳಿಗೆ ವಿರುದ್ಧವಾಗಿ ವರ್ತಿಸುತ್ತಾನೆ. ಹಝ್ರತ್ ಮುಹಮ್ಮದ್ ಪೈಗಂಬರರು(ಸ) ಹೀಗೆ ಹೇಳಿರುವರು: ಒಬ್ಬ ನಿರಪರಾಧಿಯ ರಕ್ತವನ್ನು ಹರಿಸುವವನು ಮುಸ್ಲಿಮನಲ್ಲ. ಅಂತಹ ಜನರು ಬಲಹೀನ ವಿಶ್ವಾಸ ಹೊಂದಿದವರೂ ಪಾಪಿಗಳೂ ಆಗಿರುವರೆಂದು ಹಝ್ರತ್ ಪೈಗಂಬರರು(ಸ) ಗಣಿಸಿದ್ದರು.

ಇಸ್ಲಾಮಿನ ಧರ್ಮ ತತ್ವಗಳು ಎಷ್ಟು ತೇಜೋಮಯವಾಗಿವೆ ಮತ್ತು ಪರಿಶುದ್ಧವಾಗಿವೆ ಎಂಬುದರ ಬಗ್ಗೆ ಇನ್ನಷ್ಟು ವಿವರಣೆ ನೀಡಲು ಬಯಸುತ್ತೇನೆ. ಕೆಲವು ತಥಾಕಥಿತ ಮುಸ್ಲಿಮ್ ಗುಂಪುಗಳು ಪ್ರತಿಪಾದಿಸುವ ಇಸ್ಲಾಮ್, ನೈಜ ಇಸ್ಲಾಮ್ ಧರ್ಮ ತತ್ವಗಳೊಂದಿಗೆ ಸಂಬಂಧ ಹೊಂದಿಲ್ಲ ಎಂದು ವಿವರಿಸಲು ಬಯಸುತ್ತೇನೆ. ಅವರು

ತಮ್ಮ ಸ್ವಾರ್ಥ ಹಿತಾಸಕ್ತಿಗಳನ್ನು ಈಡೇರಿಸಲು ಮತ್ತು ತಮ್ಮ ದ್ವೇಷಭರಿತ ಚಟುವಟಿಕೆಗಳನ್ನು ಸಮರ್ಥಿಸಲು ಇಸ್ಲಾಮಿನ ಹೆಸರನ್ನು ದುರುಪಯೋಗಿಸುತ್ತಾರೆ.

ಇಸ್ಲಾಮ್ ಧಾರ್ಮಿಕ ಸಹಿಷ್ಣುತಾ ಮನೋಭಾವಕ್ಕೆ ಒತ್ತು ನೀಡಿದಷ್ಟು ಉನ್ನತ ಮಟ್ಟದ ತತ್ವೋಪದೇಶಗಳನ್ನು ಬೇರೆ ಎಲ್ಲಿಯೂ ಕಾಣಲು ಸಾಧ್ಯವಾಗದು. ಅನ್ಯ ಜನರು ಭಾವಿಸುವುದೇನೆಂದರೆ, ಅನ್ಯ ಧರ್ಮಗಳನ್ನು ಸುಳ್ಳು ಎಂದು ಸಾಬೀತುಪಡಿಸುವ ತನಕ ತಮ್ಮ ಧರ್ಮದ ಸತ್ಯತೆಯನ್ನು ಸಾಬೀತುಪಡಿಸಲು ಸಾಧ್ಯವಿಲ್ಲ. ಆದರೆ ಇಸ್ಲಾಮ್ ಈ ವಿಷಯದ ಬಗ್ಗೆ ಬಹಳ ವಿಭಿನ್ನವಾದೊಂದು ನಿಲುವನ್ನು ಹೊಂದಿದೆ. ಇಸ್ಲಾಮ್ ಹೀಗೆ ಪ್ರತಿಪಾದಿಸುತ್ತದೆ: ಇಸ್ಲಾಮ್ ಲೋಕದ ಎಲ್ಲ ಜನರಿಗೆ ಕಳುಹಿಸಲ್ಪಟ್ಟ ಸತ್ಯ ಧರ್ಮವಾಗಿದೆಯಾದರೂ ಲೋಕದ ಎಲ್ಲ ಜನಾಂಗಗಳಿಗೆ ಅಲ್ಲಾಹನ ಪ್ರವಾದಿಗಳು ಕಳುಹಿಸಲ್ಪಟ್ಟಿದ್ದರು. ಇದನ್ನು ಪವಿತ್ರ ಖುರ್‌ಆನ್‌ನಲ್ಲಿ ಸ್ಪಷ್ಟವಾಗಿ ಹೇಳಲಾಗಿದೆ. ಎಲ್ಲ ಪ್ರವಾದಿಗಳನ್ನು ಪ್ರೀತಿ ಮತ್ತು ವಾತ್ಸಲ್ಯದ ಉಪದೇಶಗಳನ್ನು ನೀಡಲು ತಾನು ಕಳುಹಿಸಿರುವುದಾಗಿಯೂ ಎಲ್ಲ ಸತ್ಯವಂತರಾದ ಮುಸ್ಲಿಮರು ಅವರನ್ನು ನಂಬಬೇಕೆಂದೂ ಪವಿತ್ರ ಖುರ್‌ಆನ್‌ನಲ್ಲಿ ಅಲ್ಲಾಹನು ಹೇಳಿರುವನು. ಪ್ರತಿಯೊಂದು ಧರ್ಮವನ್ನೂ ಪ್ರತಿಯೊಂದು ಜನಾಂಗವನ್ನೂ ಪವಿತ್ರ ಖುರ್‌ಆನ್ ಬಹಿರಂಗವಾಗಿಯೂ ಹೃತ್ಪೂರ್ವಕವಾಗಿಯೂ ಪ್ರಶಂಸಿಸುವ ಹಾಗೆ ಬೇರೆ ಯಾವ ಧರ್ಮವೂ ಪ್ರಶಂಸಿಸುವುದಿಲ್ಲ. ಪ್ರವಾದಿಗಳು ಎಲ್ಲ ಜನಾಂಗಗಳಿಗೆ ಕಳುಹಿಸಲ್ಪಟ್ಟಿದ್ದಾರೆಂದು ನಂಬುವ ಮುಸ್ಲಿಮರು ಅವರನ್ನು ಸುಳ್ಳುಗಾರರೆಂದು ಪರಿಗಣಿಸಲು ಎಂದೂ ಸಾಧ್ಯವಿಲ್ಲ. ಆದುದರಿಂದ ಯಾವುದೇ ಪ್ರವಾದಿಯನ್ನು ಗೌರವ ರಹಿತವಾಗಿ ಕಾಣಲು, ಅವರನ್ನು ಅಪಹಾಸ್ಯ ಮಾಡಲು, ನಿಂದಿಸಲು ಯಾವುದೇ ಮುಸ್ಲಿಮನಿಗೆ ಸಾಧ್ಯವಿಲ್ಲ. ಯಾವುದೇ ಧರ್ಮದ ಅನುಯಾಯಿಗಳ ಭಾವನೆಗಳಿಗೆ ನೋವನ್ನುಂಟುಮಾಡಲು ಕೂಡ ಮುಸ್ಲಿಮರಿಗೆ ಸಾಧ್ಯವಿಲ್ಲ.

ಆದರೆ ದುಃಖಕರವಾಗಿರುವುದೇನೆಂದರೆ, ಕೆಲವು ಮುಸ್ಲಿಮೇತರರ ನಿಲುವು ಅದಕ್ಕೆ ವಿರುದ್ಧವಾಗಿದೆ. ಹಝ್ರತ್ ಮುಹಮ್ಮದ್ ಪೈಗಂಬರರನ್ನು(ಸ) ನಿಂದಿಸಲು ಮತ್ತು ಅವರ ಮೇಲೆ ಸುಳ್ಳು ಆರೋಪಗಳನ್ನು ಹೊರಿಸಲು ಅವರು ಸಿಗುವ ಸಂದರ್ಭಗಳನ್ನೆಲ್ಲ ಬಳಸದೆ ಬಿಡುವುದಿಲ್ಲ. ಈ ಕಾರಣದಿಂದ ಅವರು ಮುಸ್ಲಿಮರ ಭಾವನೆಗಳನ್ನು ತೀವ್ರವಾಗಿ ನೋಯಿಸುತ್ತಾರೆ. ನಾವು ಧಾರ್ಮಿಕ ಸಹಿಷ್ಣುತೆ ಮತ್ತು ಪರಸ್ಪರ ಹೊಂದಾಣಿಕೆಗಳನ್ನು ಸತ್ಯವಾಗಿಯೂ ಬಯಸುವುದು ನಾವು ಹೊಂದಿರುವ ನಂಬಿಕೆಗಳ ಕಾರಣದಿಂದಾಗಿದೆ. ಆದರೆ ದುರದೃಷ್ಟಕರವಾಗಿ ಕೆಲವರು ಮುಸ್ಲಿಮರ ಭಾವನೆಗಳೊಂದಿಗೆ ಆಟವಾಡುವಾಗ ಕೆಲವು ತಥಾಕಥಿತ ಮುಸ್ಲಿಮರು ಸಂಪೂರ್ಣವಾಗಿ ತಪ್ಪು ಮತ್ತು ಬೇಜವಾಬ್ದಾರಿಯಿಂದ ವರ್ತಿಸಲು ಉತ್ತೇಜಿಸಲ್ಪಡುತ್ತಾರೆ. ಅವರ ಪ್ರತಿಕ್ರಿಯೆಯ ವಿಧಾನಕ್ಕೆ ನೈಜ ಇಸ್ಲಾಮ್ ಧರ್ಮದೊಂದಿಗೆ ಯಾವ ಸಂಬಂಧವೂ ಇರುವುದಿಲ್ಲ. ಆದರೆ ಅಹ್ಮದೀ ಮುಸ್ಲಿಮರನ್ನು ಯಾವ ರೀತಿಯಲ್ಲಿ ಪ್ರಚೋದಿಸಿದರೂ ಅವರು ಅಂತಹ ಋಣಾತ್ಮಕ ಪ್ರತಿಕ್ರಿಯೆ ನೀಡಲಾರರು. ಹಝ್ರತ್ ಪೈಗಂಬರರ(ಸ) ಮತ್ತು ಪವಿತ್ರ ಖುರ್‌ಆನ್ ವಿರುದ್ಧ ಮಾಡಲಾಗುವ ಇನ್ನೊಂದು ತೀವ್ರ ದೋಷಾರೋಪ ಅವರು ಅತಿರೇಕವಾದವನ್ನು ಪ್ರತಿಪಾದಿಸುತ್ತಾರೆಂದೂ ಇಸ್ಲಾಮಿನ ಪ್ರಚಾರಕ್ಕೆ ಬಲಪ್ರಯೋಗವನ್ನು ಉಪದೇಶಿಸುತ್ತಾರೆಂದೂ ಆಗಿದೆ. ಈ ದೋಷಾರೋಪದ ಸತ್ಯಾಸತ್ಯತೆಯನ್ನು ತಿಳಿಯಲು ನಾವು ಪವಿತ್ರ ಖುರ್‌ಆನ್ ವಚನಗಳನ್ನು ಪರಿಶೀಲಿಸುವ. ಸರ್ವಶಕ್ತನಾದ ಅಲ್ಲಾಹನು ಪವಿತ್ರ ಖುರ್‌ಆನಿನಲ್ಲಿ ಹೀಗೆ ಹೇಳಿದ್ದಾನೆ:

**"ನಿನ್ನ ಪ್ರಭು ಇಚ್ಛಿಸಿದ್ದರೆ ಭೂಲೋಕದಲ್ಲಿರುವ ಎಲ್ಲರೂ ವಿಶ್ವಾಸ ಹೊಂದಿರುತ್ತಿದ್ದರು. (ಆದರೆ ಅವನು ನಿರ್ಬಂಧಿಸುವುದಿಲ್ಲ.) ಹಾಗಿರುವಾಗ ಜನರು ವಿಶ್ವಾಸಿಗಳಾಗುವಂತೆ ನೀನು ಬಲವಂತಪಡಿಸುವಿಯೋ?"** **(10:100)**

ಈ ವಚನ ಸ್ಪಷ್ಟವಾಗಿ ಹೇಳುವುದೇನೆಂದರೆ, ಸರ್ವಶಕ್ತನಾದ ದೇವನು ಇಚ್ಛಿಸುತ್ತಿದ್ದರೆ ಎಲ್ಲ ಜನರನ್ನು ಒಂದೇ ಧರ್ಮವನ್ನು ಅನುಸರಿಸಲು ಬಲಾತ್ಕಾರ ಮಾಡಲು ಸಾಧ್ಯವಿತ್ತು. ಆದರೆ ಜನರಿಗೆ ನಂಬಲು ಮತ್ತು ನಂಬದಿರಲು ಸ್ವಾತಂತ್ರ್ಯವನ್ನು ದೇವನು ನೀಡಿರುತ್ತಾನೆ. ಆದುದರಿಂದ ದೇವನು ಮಾನವರಿಗೆ ಈ ಸ್ವಾತಂತ್ರ್ಯವನ್ನು ನೀಡಿರುವಾಗ ಹಝ್ರತ್ ಮುಹಮ್ಮದ್ ಪೈಗಂಬರ್(ಸ) ಆಗಲಿ ಅವರ ಯಾವುದೇ ಅನುಯಾಯಿಯಾಗಲಿ ಯಾರನ್ನಾದರೂ ಮುಸ್ಲಿಮನಾಗಲು ಬಲಾತ್ಕಾರ ಮಾಡುವುದು ಹೇಗೆ ತಾನೆ ಸಾಧ್ಯ? ಸರ್ವಶಕ್ತನಾದ ಅಲ್ಲಾಹನು ಪವಿತ್ರ ಖುರ್‌ಆನಿನ ಇನ್ನೊಂದು ವಚನದಲ್ಲಿ ಹೀಗೆ ಹೇಳಿದ್ದಾನೆ:

**"ಇದು ನಿಮ್ಮ ಪ್ರಭುವಿನ ಕಡೆಯಿಂದಿರುವ ಸತ್ಯವಾಗಿದೆ. ಆದುದರಿಂದ ಯಾರು ಇಚ್ಛಿಸುತ್ತಾನೋ ಅವನು ನಂಬಲಿ. ಯಾರು ಇಚ್ಛಿಸುತ್ತಾನೋ ಅವನು ನಿರಾಕರಿಸಲಿ."** **(18:30)**

ಇದು ಇಸ್ಲಾಮ್ ಪ್ರತಿಪಾದಿಸುವ ಸತ್ಯವಾದ ತತ್ವವಾಗಿದೆ. ಇದು ಇಸ್ಲಾಮಿನ ಸತ್ಯವಾದ ಉಪದೇಶವಾಗಿದೆ. ಒಬ್ಬ ಮನುಷ್ಯನ ಹೃದಯ ಇಚ್ಛಿಸುವುದಾದರೆ ಇಸ್ಲಾಮ್ ಧರ್ಮವನ್ನು ಸ್ವೀಕರಿಸಬಹುದು. ಹೃದಯಗಳು ಒಪ್ಪದವರು ಇಸ್ಲಾಮನ್ನು ತಿರಸ್ಕರಿಸಲು ಸ್ವತಂತ್ರರಾಗಿದ್ದಾರೆ. ಇಸ್ಲಾಮ್ ಧರ್ಮವು ಬಲಾತ್ಕಾರಕ್ಕೆ ಮತ್ತು ಅತಿರೇಕವಾದಕ್ಕೆ ಸಂಪೂರ್ಣ ವಿರುದ್ಧವಾಗಿದೆ. ಅದು ಶಾಂತಿಯನ್ನೂ ಸೌಹಾರ್ದವನ್ನೂ ಸಮಾಜದ ಎಲ್ಲ ಹಂತಗಳಲ್ಲೂ ಪ್ರತಿಪಾದಿಸುತ್ತದೆ. ಹಿಂಸೆ ಮತ್ತು ಬಲಾತ್ಕಾರವನ್ನು ಉಪದೇಶಿಸುವುದು ಇಸ್ಲಾಮ್ ಧರ್ಮಕ್ಕೆ ಅಸಾಧ್ಯವಾದುದಾಗಿದೆ. ಏಕೆಂದರೆ "ಇಸ್ಲಾಮ್" ಎಂಬ ಪದದ ಅರ್ಥ ಶಾಂತಿಯಿಂದ ಜೀವಿಸುವುದು ಮತ್ತು ಇತರರಿಗೆ ಶಾಂತಿ ನೀಡುವುದು ಎಂದಾಗಿದೆ. ಹೀಗಿದ್ದರೂ ನಮ್ಮ ಧಾರ್ಮಿಕ ಭಾವನೆಗಳನ್ನು ಅಪಹಾಸ್ಯ ಮಾಡುವಾಗ ನಮಗೆ ಬಹಳ ನೋವು ಮತ್ತು ಯಾತನೆ ಉಂಟಾಗುತ್ತದೆ. ಹಝ್ರತ್ ಮುಹಮ್ಮದ್ ಪೈಗಂಬರ್(ಸ) ವಿರುದ್ಧ ಅಪಮಾನಕರವಾಗಿ ಹೇಳಿದ ಯಾವುದೇ ಮಾತು ಹೃದಯವನ್ನು ಚುಚ್ಚಿ ಗಾಯ ಉಂಟುಮಾಡುತ್ತದೆ. ದೇವನನ್ನು ಪ್ರೀತಿಸಲು ಮತ್ತು ಅವನ ಸೃಷ್ಟಿಗಳನ್ನು ಪ್ರೀತಿಸಲು ನಮಗೆ ಕಲಿಸಿದುದು ಹಝ್ರತ್ ಮುಹಮ್ಮದ್ ಪೈಗಂಬರ್(ಸ) ಆಗಿದ್ದಾರೆ. ಎಲ್ಲ ಮಾನವರನ್ನು ಮತ್ತು ಎಲ್ಲ ಧರ್ಮಗಳನ್ನು ಗೌರವಿಸುವ ಮನೋಭಾವವನ್ನು ನಮ್ಮ ಮನಸ್ಸುಗಳಲ್ಲಿ ಸ್ಥಾಪಿಸಿದವರು ಹಝ್ರತ್ ಪೈಗಂಬರ್(ಸ) ಆಗಿದ್ದಾರೆ. ಇಸ್ಲಾಮ್ ಧರ್ಮ ಶಾಂತಿ ಪ್ರತಿಪಾದಿಸುವ ಧರ್ಮ ಎಂಬುದಕ್ಕೆ ಹಝ್ರತ್ ಪೈಗಂಬರರ ವಿರೋಧಿಗಳು ಹಝ್ರತ್ ಪೈಗಂಬರರ ಆಹ್ವಾನಕ್ಕೆ ನೀಡಿದ ಉತ್ತರಕ್ಕಿಂತ ಹಿರಿದಾದ ಸಾಕ್ಷ್ಯ ಬೇರೆ ಇಲ್ಲ. ಹಝ್ರತ್ ಪೈಗಂಬರರು(ಸ) ವಿರೋಧಿಗಳನ್ನು ಇಸ್ಲಾಮಿಗೆ ಆಹ್ವಾನಿಸಿ ಕ್ರೌರ್ಯವನ್ನೂ ದುಷ್ಕೃತ್ಯಗಳನ್ನೂ ನಿರಂತರವಾಗಿ ನಡೆಸಲು ಆವಶ್ಯಪಡುತ್ತಾರೆ ಎಂದು ವಿರೋಧಿಗಳು ಹೇಳಲಿಲ್ಲ. ವಿರೋಧಿಗಳು

ಹೇಳಿದುದು ಏನೆಂದರೆ : "ನಾವು ಹಝ್ರತ್ ಪೈಗಂಬರರ ಶಾಂತಿ ಸಂದೇಶವನ್ನು ಅಂಗೀಕರಿಸಿದರೆ ನಮ್ಮ ಸಂಪತ್ತು ಮತ್ತು ಸ್ಥಾನಮಾನಗಳಿಗೆ ಬೆದರಿಕೆ ಉಂಟಾಗುವುದು ಮತ್ತು ನಿಷ್ಕರುಣಿಗಳಾದ ಜನರು ಅವುಗಳನ್ನು ಕಸಿದುಕೊಳ್ಳುವರು. ಏಕೆಂದರೆ ಹಝ್ರತ್ ಪೈಗಂಬರರು(ಸ) ಶಾಂತಿ ಮತ್ತು ಸೌಹಾರ್ದವನ್ನು ಮಾತ್ರ ಒತ್ತಿ ಹೇಳುತ್ತಾರೆ." ಆ ಜನರು ಹೀಗೆ ಸಹ ಹೇಳಿದರು : "ನಾವು ಇಸ್ಲಾಮನ್ನು ಸ್ವೀಕರಿಸಿ, ಶಾಂತಿಯನ್ನು ಅವಲಂಬಿಸಿದರೆ ಸುತ್ತು ಮುತ್ತಲು ಇರುವ ಗೋತ್ರಗಳ ಜನರು ಇದರಿಂದ ಲಾಭ ಪಡೆದು ನಮ್ಮನ್ನು ನಾಶ ಮಾಡುವರು." ಸಂಕ್ಷಿಪ್ತವಾಗಿ ಹೇಳುವುದಾದರೆ, ಇಸ್ಲಾಮ್ ಹಿಂಸಾಚಾರವನ್ನು ಪ್ರತಿಪಾದಿಸುತ್ತಿದ್ದುದಾದರೆ ಮತ್ತು ಮುಸ್ಲಿಮರು ಖಡ್ಗ ಹಿರಿದು ಯುದ್ಧಮಾಡಬೇಕೆಂದು ಉಪದೇಶಿಸಿದ್ದರೆ ಅವಿಶ್ವಾಸಿಗಳು ಮೇಲೆ ವಿವರಿಸಿದ ರೀತಿಯಲ್ಲಿ ತಮ್ಮ ನಿಲುವನ್ನು ಪ್ರತಿಪಾದಿಸುತ್ತಿರಲಿಲ್ಲ. "ನಾವು ಇಸ್ಲಾಮನ್ನು ಸ್ವೀಕರಿಸದೆ ಇರುವುದು, ಇಸ್ಲಾಮಿನ ಶಾಂತಿ ಸಂದೇಶವನ್ನು ಅನುಸರಿಸಿದರೆ ಲೌಕಿಕವಾದಿಗಳಾದ ಜನರಿಂದ ನಾವು ನಾಶಗೊಳಿಸಲ್ಪಡುವೆವು ಎಂಬ ಭಯದ ಕಾರಣದಿಂದಾಗಿದೆ" ಎಂದು ಅವಿಶ್ವಾಸಿಗಳು ಹೇಳುತ್ತಿರಲಿಲ್ಲ.

ಪವಿತ್ರ ಖುರ್‌ಆನ್, ಸರ್ವಶಕ್ತನಾದ ದೇವನ ಒಂದು ಗುಣ "ಸಲಾಮ್" ಎಂದು ಹೇಳಿದೆ. ಇದರ ಅರ್ಥ ದೇವನು "ಶಾಂತಿಯ ಉದ್ಭವ ಸ್ಥಾನ" ಎಂದಾಗಿದೆ. ದೇವನು ವಾಸ್ತವಿಕವಾಗಿಯೂ ಶಾಂತಿಯ ಉಗಮ ಸ್ಥಾನವಾದುದರಿಂದ ಅವನ ಶಾಂತಿ ಅವನ ಎಲ್ಲ ಸೃಷ್ಟಿಗಳನ್ನೂ ಎಲ್ಲ ಮಾನವರನ್ನೂ ಆವರಿಸಬೇಕಾಗಿದೆ. ಅದು ಕೇವಲ ವಿಶಿಷ್ಟವಾದೊಂದು ಗುಂಪಿಗೆ ಮಾತ್ರ ಸೀಮಿತವಾಗದು. ದೇವನ ಶಾಂತಿ ಕೆಲವು ಜನರನ್ನು ಮಾತ್ರ ಸಂರಕ್ಷಿಸಲು ಮಾತ್ರ ರೂಪಿಸಲ್ಪಟ್ಟದ್ದಾಗಿದ್ದರೆ ದೇವನನ್ನು ಸಕಲ ಲೋಕಗಳ ಪ್ರಭು ಎಂದು ಹೇಳಲು ಸಾಧ್ಯವಾಗದು. ಸರ್ವಶಕ್ತನಾದ ಅಲ್ಲಾಹನು ಪವಿತ್ರ ಖುರ್‌ಆನಿನಲ್ಲಿ ಈ ವಿಷಯದ ಬಗ್ಗೆ ಹೀಗೆ ಹೇಳಿದ್ದಾನೆ:

**'ಓ ಪ್ರಭೂ, ಈ ಜನರು ಸತ್ಯವನ್ನು ನಂಬುವುದಿಲ್ಲ' ಎಂಬ ಅವರ (ಪ್ರವಾದಿಯ) ಅಳಲಿಗೆ ನಾವು ಸಾಕ್ಷಿ.**
**(ನಾವು ಉತ್ತರಿಸಿದೆವು:) "ಅವರಿಂದ ವಿಮುಖನಾಗು ಮತ್ತು 'ಶಾಂತಿ' ಎಂದು ಮಾತ್ರ ಹೇಳು. ಅವರು ಬೇಗನೆ ಅರಿತುಕೊಳ್ಳುವರು."**
**(43:89, 90)**

ಪವಿತ್ರ ಖುರ್‌ಆನಿನ ಈ ವಚನಗಳು ಸ್ಪಷ್ಟಪಡಿಸುವುದೇನೆಂದರೆ, ಹಝ್ರತ್ ಪೈಗಂಬರರು(ಸ) ಶಾಂತಿಯ ಉದ್ಭವ ಸ್ಥಾನವಾದಂತಹ ಮತ್ತು ಕರುಣೆಯನ್ನು ಎಲ್ಲ ಮಾನವರಿಗೆ ನೀಡುವಂತಹ ಉಪದೇಶವನ್ನು ತಂದರು. ಹಝ್ರತ್ ಪೈಗಂಬರರ ವಿರೋಧಿಗಳು ಶಾಂತಿಯ ಸಂದೇಶವನ್ನು ತಿರಸ್ಕರಿಸಿದರು. ಮಾತ್ರವಲ್ಲ, ಅವರನ್ನು ಅಪಹಾಸ್ಯ ಮಾಡಿ ನಿಂದಿಸಿದರು. ಅವರು ಗಲಭೆಗೊಂದಲಗಳನ್ನೂ ಸಂಘರ್ಷವನ್ನೂ ಉಂಟುಮಾಡಿದರು. ಆಗ ಹಝ್ರತ್ ಪೈಗಂಬರರು(ಸ) ಹೀಗೆ ದೇವನೊಂದಿಗೆ ನಿವೇದಿಸಿದರು:

*ನಾನು ಜನರಿಗೆ ಶಾಂತಿ ನೀಡಲು ಇಚ್ಛಿಸುತ್ತೇನೆ. ಆದರೆ ಅವರು ನನಗೆ ಶಾಂತಿಯನ್ನು ನೀಡುವುದಿಲ್ಲ. ಅವರು ನನಗೆ ನೋವು ಮತ್ತು ಯಾತನೆ ನೀಡಲು ಪ್ರಯತ್ನಿಸುತ್ತಾರೆ.*

ಈ ನಿವೇದನೆಗೆ ಉತ್ತರವಾಗಿ ದೇವನು ಹೀಗೆ ಹೇಳಿದನು:

*ಅವರು ಮಾಡುವುದನ್ನು ನೀನು ನಿರ್ಲಕ್ಷಿಸು ಮತ್ತು ಅವರಿಂದ ದೂರಸರಿದು ಹೋಗು. ನಿನ್ನ ಏಕಮಾತ್ರ ಕೆಲಸ ಲೋಕದಲ್ಲಿ ಶಾಂತಿಯನ್ನು ಹರಡಿ ಅದನ್ನು ಸ್ಥಾಪಿಸುವುದಾಗಿದೆ. ನೀನು ಅವರ ದ್ವೇಷ ಮತ್ತು ಅತಿರೇಕ ವರ್ತನೆಗೆ ಉತ್ತರವಾಗಿ "ನಿಮ್ಮ ಮೇಲೆ ಶಾಂತಿ ಇರಲಿ" ಎಂದು ಹೇಳು ಮತ್ತು ನೀನು ಅವರಿಗೆ ಶಾಂತಿಯನ್ನು ತಂದಿರುವೆ ಎಂದು ಹೇಳು.*

ಹಝ್ರತ್ ಪೈಗಂಬರ್(ಸ) ತನ್ನ ಜೀವಿತವನ್ನು, ಸಂಪೂರ್ಣವಾಗಿ ಲೋಕದಲ್ಲಿ ಶಾಂತಿಯನ್ನು ಹರಡಲು ವಿನಿಯೋಗಿಸಿದರು. ಅದು ಅವರ ಆಗಮನದ ಭವ್ಯ ಉದ್ದೇಶವಾಗಿತ್ತು. ಹಝ್ರತ್ ಪೈಗಂಬರರು(ಸ) ಅತಿರೇಕವಾದದ ಮತ್ತು ಹಿಂಸೆಯ ಉಪದೇಶಗಳನ್ನು ತಂದಿರಲಿಲ್ಲ ಎಂದು ಲೋಕದ ಜನರು ನಿಶ್ಚಯವಾಗಿಯೂ ಮುಂದೆ ಮನವರಿಕೆ ಮಾಡಿಕೊಳ್ಳುವರು. ಹಝ್ರತ್ ಪೈಗಂಬರರು(ಸ) ಶಾಂತಿ, ಪ್ರೀತಿ ಮತ್ತು ದಯೆಯ ಉಪದೇಶ ತಂದಿದ್ದರು ಎಂದು ಜನರು ತಿಳಿದುಕೊಳ್ಳುವರು. ಈ ಶ್ರೇಷ್ಠ ಸಂದೇಶವಾಹಕರ ಅನುಯಾಯಿಗಳು ದೌರ್ಜನ್ಯಕ್ಕೆ ಮತ್ತು ಅನ್ಯಾಯಕ್ಕೆ ವಿರುದ್ಧವಾಗಿ ಇಂತಹ ಪ್ರೀತಿಭರಿತ ಪ್ರತಿಕ್ರಿಯೆ ನೀಡುವುದಾದರೆ ಇಸ್ಲಾಮಿನ ಭವ್ಯ ಉಪದೇಶಗಳ ವಿರುದ್ಧ ದೋಷಾರೋಪಮಾಡುವವರು ನಿಸ್ಸಂದೇಹವಾಗಿಯೂ ಮುಂದೆ ಅದರ ಸತ್ಯತೆ ಮತ್ತು ಸೌಂದರ್ಯದ ಬಗ್ಗೆ ತಿಳಿದುಕೊಳ್ಳುವರು.

ಅಹ್ಮದಿಯಾ ಮುಸ್ಲಿಮ್ ಜಮಾಅತ್ ಈ ತತ್ವಗಳನ್ನು ಅನುಸರಿಸಿ ಜೀವಿಸುತ್ತದೆ. ಪರಸ್ಪರ ಅರ್ಥಮಾಡಿಕೊಳ್ಳುವ, ಸಹಿಷ್ಣುತೆಯ ಮತ್ತು ಕರುಣೆಯ ಈ ಉಪದೇಶಗಳನ್ನು ಲೋಕದ ಮೂಲೆ ಮೂಲೆಗಳಿಗೆ ನಾವು ತಲುಪಿಸುತ್ತೇವೆ. ಅತ್ಯಂತ ಭೀಕರ ದೌರ್ಜನ್ಯಗಳಿಗೂ ಹಿಂಸಾಚಾರಗಳಿಗೂ ಮಕ್ಕದಲ್ಲಿ ಹಲವಾರು ವರ್ಷ ಗುರಿಯಾದ ನಂತರ ವಲಸೆ ಹೋಗಿ ಪುನಃ ಮಕ್ಕವನ್ನು ಜಯಶಾಲಿಯಾಗಿ ಪ್ರವೇಶಿಸಿದಾಗ ಹಝ್ರತ್ ಮುಹಮ್ಮದ್ ಪೈಗಂಬರರು(ಸ) ಅದ್ವಿತೀಯ ಚಾರಿತ್ರಿಕ ಸಂಭವವಾಗಿ ಪ್ರದರ್ಶಿಸಿದ ಕ್ಷಮೆ ಮತ್ತು ದಯೆಯ ಉದಾಹರಣೆಯನ್ನು ನಾವು ಅನುಸರಿಸುತ್ತೇವೆ. ಹಲವು ವರ್ಷಗಳ ಕಾಲ ಹಝ್ರತ್ ಪೈಗಂಬರರಿಗೆ(ಸ) ಮತ್ತು ಅವರ ಅನುಯಾಯಿಗಳಿಗೆ ಆಹಾರ ಮತ್ತು ನೀರು ಸಹ ಲಭಿಸುವುದನ್ನು ವಿರೋಧಿಗಳು ತಡೆಗಟ್ಟಿದ್ದರು. ಅವರು ಅನೇಕ ದಿನ ಆಹಾರ ಮತ್ತು ನೀರಿನ ಕೊರತೆಯಿಂದ ಬಳಲಿದ್ದರು. ಹಝ್ರತ್ ಪೈಗಂಬರರ ಅನೇಕ ಅನುಯಾಯಿಗಳನ್ನು ಆಕ್ರಮಿಸಲಾಗಿತ್ತು. ಕೆಲವರನ್ನು ಬಹಳ ಊಹಾತೀತ ಅನಾಗರಿಕ ರೀತಿಯಲ್ಲಿ ಕೊಲ್ಲಲಾಯಿತು. ವೃದ್ಧರು, ಮಹಿಳೆಯರು ಮತ್ತು ಮಕ್ಕಳು ಸಹ ಹಿಂಸಾಚಾರಗಳಿಗೆ ತುತ್ತಾಗದೆ ಬಾಕಿಯಾಗಲಿಲ್ಲ. ಅವರೊಂದಿಗೆ ಅತ್ಯಂತ ಮೃಗೀಯವಾಗಿಯೂ ನಿರ್ದಯವಾಗಿಯೂ ವರ್ತಿಸಲಾಯಿತು. ಹೀಗೆ ಸಂಭವಿಸಿದ್ದರೂ ಹಝ್ರತ್ ಪೈಗಂಬರರು(ಸ) ಜಯಶಾಲಿಯಾಗಿ ಮಕ್ಕಕ್ಕೆ ಮರಳಿದಾಗ ಪ್ರತೀಕಾರ ಮಾಡಲಿಲ್ಲ. ಅವರು ಹೀಗೆ ಘೋಷಿಸಿದರು:

*"ನಾನು ನಿಮ್ಮನ್ನೆಲ್ಲ ಕ್ಷಮಿಸಿರುವೆನು. ನಿಮಗೆ ಯಾವ ಶಿಕ್ಷೆಯನ್ನೂ ನೀಡುವುದಿಲ್ಲ. ನಾನು ಪ್ರೀತಿ ಮತ್ತು ಶಾಂತಿಯ ಸಂದೇಶವಾಹಕನಾಗಿದ್ದೇನೆ. ಅಲ್ಲಾಹನು 'ಶಾಂತಿಯ ಉದ್ಭವ ಸ್ಥಾನ' ವಾಗಿರುವನೆಂಬುದರ ಬಗ್ಗೆ ನನಗೆ ಚೆನ್ನಾಗಿ ತಿಳಿದಿದೆ. ಅವನು ಏಕನಾಗಿದ್ದಾನೆ. ಅವನು ಶಾಂತಿಯನ್ನು ದಯಪಾಲಿಸುವವನಾಗಿದ್ದಾನೆ.*

ನೀವು ಹಿಂದೆ ಮಾಡಿದ ಅಕ್ರಮಗಳನ್ನು ನಾನು ಕ್ಷಮಿಸುತ್ತೇನೆ. ನಾನು ನಿಮಗೆ ಶಾಂತಿ ಮತ್ತು ಭದ್ರತೆಯ ಖಾತರಿ ನೀಡುತ್ತೇನೆ. ನೀವು ಮಕ್ಕದಲ್ಲಿ ನಿರ್ಭಯರಾಗಿ ನಿಮ್ಮ ಧರ್ಮವನ್ನು ಅವಲಂಬಿಸಿ ಜೀವಿಸಬಹುದು. ಯಾರನ್ನೂ ಯಾವುದೇ ರೀತಿ ಬಲಾತ್ಕಾರಕ್ಕೆ ಗುರಿಪಡಿಸಲಿಕ್ಕಿಲ್ಲ."

ಕೆಲವು ಕಠಿಣ ಶತ್ರುಗಳಾದ ಅವಿಶ್ವಾಸಿಗಳು ಶಿಕ್ಷೆಗೆ ಭಯಪಟ್ಟು ಮಕ್ಕದಿಂದ ಓಡಿ ಹೋಗಿದ್ದರು. ತಾವು ಮುಸ್ಲಿಮರ ವಿರುದ್ಧ ಮಿತಿ ಮೀರಿ ದೌರ್ಜನ್ಯ ಮಾಡಿದುದಾಗಿ ಅವರು ಮನವರಿಕೆ ಮಾಡಿಕೊಂಡಿದ್ದರು. ಆದರೆ ಹಝ್‌ರತ್ ಪೈಗಂಬರರು(ಸ) ತೋರಿಸಿದ ಅದ್ವಿತೀಯ ಕ್ಷಮೆ ಮತ್ತು ಕರುಣೆಯನ್ನು ಕಂಡಾಗ ಮಕ್ಕದಿಂದ ಓಡಿ ಹೋದ ಅವಿಶ್ವಾಸಿಗಳ ಸಂಬಂಧಿಕರು, ಓಡಿ ಹೋದವರು ಮರಳಿ ಬರಬೇಕೆಂಬ ಸಂದೇಶವನ್ನು ಕಳುಹಿಸಿದರು. ಹಝ್‌ರತ್ ಪೈಗಂಬರರು(ಸ) ಶಾಂತಿ ಮತ್ತು ಸುರಕ್ಷೆಯ ಖಾತರಿ ನೀಡಿರುವರೆಂದು ತಿಳಿದುಕೊಂಡು, ಓಡಿ ಹೋದವರು ಮಕ್ಕಕ್ಕೆ ಮರಳಿ ಬಂದರು. ಇಸ್ಲಾಮಿನ ಕಠಿಣ ಶತ್ರುಗಳಾಗಿದ್ದ ಅವಿಶ್ವಾಸಿಗಳು ಹಝ್‌ರತ್ ಪೈಗಂಬರರ(ಸ) ಕ್ಷಮೆಯನ್ನೂ ಕರುಣೆಯನ್ನೂ ಸ್ವತಃ ಕಂಡಾಗ ತಮ್ಮ ಸ್ವಂತ ಇಷ್ಟದ ಪ್ರಕಾರ ಇಸ್ಲಾಮ್ ಧರ್ಮಕ್ಕೆ ಸೇರಿದರು.

ನಾನು ನಿಮ್ಮ ಮುಂದೆ ವಿವರಿಸಿದುದು ದಾಖಲಿಸಲ್ಪಟ್ಟ ಚರಿತ್ರೆಯ ಸತ್ಯಗಳಾಗಿವೆ. ಮುಸ್ಲಿಮೇತರರಾದ ಬಹುತೇಕ ಚರಿತ್ರೆಗಾರರು ಮತ್ತು ಪೌರಸ್ತ್ಯ ಸಂಸ್ಕೃತಿ ಶಾಸ್ತ್ರಜ್ಞರು ಈ ಘಟನೆಯ ಸತ್ಯತೆಯನ್ನು ಪ್ರಮಾಣೀಕರಿಸಿದ್ದಾರೆ. ಇವು ಇಸ್ಲಾಮಿನ ನೈಜ ತತ್ವಗಳಾಗಿವೆ. ಇದು ಹಝ್‌ರತ್ ಪೈಗಂಬರರ(ಸ) ಉದಾತ್ತ ನಡೆವಳಿಕೆಂಯ ಉದಾಹರಣೆಯಾಗಿದೆ. ಆದುದರಿಂದ ಇಸ್ಲಾಮ್ ಮತ್ತು ಹಝ್‌ರತ್ ಪೈಗಂಬರರ(ಸ) ಬಗ್ಗೆ ಹಿಂಸೆಯನ್ನು ಆರೋಪಿಸುವುದು ಮತ್ತು ದೋಷಾರೋಪಮಾಡುವುದು ಅತ್ಯಂತ ಕ್ರೂರ ಅನ್ಯಾಯವಾಗಿದೆ. ಇಂತಹ ಸುಳ್ಳು ಆರೋಪಗಳನ್ನು ಮಾಡಿದಾಗಲೆಲ್ಲ ನಮಗೆ ಬಹಳ ನೋವು ಉಂಟಾಗುತ್ತದೆ.

ನಾನು ಇನ್ನೊಮ್ಮೆ ಹೇಳಲು ಬಯಸುತ್ತೇನೆ: ಇಸ್ಲಾಮ್ ಧರ್ಮದ ಯಥಾರ್ಥ ಶಾಂತಿ ತತ್ವಗಳಿಗೆ ಅನುಸಾರವಾಗಿ ಅಹ್ಮದಿಯಾ ಮುಸ್ಲಿಮ್ ಜಮಾಅತ್ ಜೀವಿಸುತ್ತದೆ. ದ್ವೇಷಭರಿತ ದುಷ್ಕೃತ್ಯಗಳನ್ನು ಮಾಡುವ ಭೀಕರವಾದಿ ಸಂಘಟನೆಗಳಿಗೆ ಮತ್ತು ವ್ಯಕ್ತಿಗಳಿಗೆ ನೈಜ ಇಸ್ಲಾಮ್ ಧರ್ಮದೊಂದಿಗೆ ಯಾವ ಸಂಬಂಧವೂ ಇಲ್ಲ.

ವ್ಯಕ್ತಿಗಳು ಮತ್ತು ಸಂಘಟನೆಗಳು ಸ್ವಾರ್ಥಭರಿತರಾಗಿ ನಡೆಸುವ ದ್ವೇಷಭರಿತ ಕೆಟ್ಟ ಕೆಲಸಗಳನ್ನು ಯಾವುದೇ ಧರ್ಮದೊಂದಿಗೆ ಅನ್ವಯಿಸಿ ಹೇಳಬಾರದೆಂಬುದು ನ್ಯಾಯೋಚಿತವಾಗಿದೆ. ಇಂತಹ ದುಷ್ಟ ಕೃತ್ಯಗಳನ್ನು ನೆವನವಾಗಿಟ್ಟುಕೊಂಡು ಯಾವುದೇ ಧರ್ಮವನ್ನೂ ಅದರ ಸ್ಥಾಪಕರನ್ನೂ ಆಕ್ಷೇಪಿಸಬಾರದು. ಜಾಗತಿಕ ಶಾಂತಿಯನ್ನು ಸ್ಥಾಪಿಸಲು ಎಲ್ಲ ಜನರು ಪರಸ್ಪರ ಗೌರವಿಸಬೇಕಾದುದು ಮತ್ತು ಎಲ್ಲ ಧರ್ಮಗಳನ್ನು ಗೌರವಿಸಬೇಕಾದುದು ಈಗ ಅತ್ಯಂತ ಆವಶ್ಯಕವಾಗಿದೆ. ಇದಕ್ಕೆ ಬದಲಾಗಿ ವರ್ತಿಸಿದರೆ ಅದರ ಪರಿಣಾಮ ಭಯಾನಕವಾಗುವುದು.

ಲೋಕವು ಇಂದು ಜಾಗತಿಕ ಗ್ರಾಮವಾಗಿದೆ. ಪರಸ್ಪರ ಗೌರವ ನೀಡದಿದ್ದರೆ ಮತ್ತು ಶಾಂತಿ ಸ್ಥಾಪನೆಗೆ ಪರಸ್ಪರ ಸಹಕಾರ ನೀಡದಿದ್ದರೆ ಅದರ ಪರಿಣಾಮ ಯಾವುದೇ ಪ್ರದೇಶ, ನಗರ ಅಥವಾ ದೇಶಕ್ಕೆ ಸೀಮಿತವಾಗಲಾರದು.

ಅದರ ದುಷ್ಪರಿಣಾಮದಿಂದ ಕೊನೆಗೆ ಲೋಕವನ್ನೇ ನಾಶಕ್ಕೆ ಒಯ್ಯುವುದು. ಇದರ ಮೊದಲು ನಡೆದ ಎರಡು ಜಾಗತಿಕ ಮಹಾಯುದ್ಧಗಳ ಭೀಕರ ನಾಶದ ಬಗ್ಗೆ ನಮಗೆ ಚೆನ್ನಾಗಿ

# ಯುನೈಟೆಡ್ ಕಿಂಗ್‌ಡಮ್ ಪ್ರಧಾನಮಂತ್ರಿಯ ಸಂದೇಶ

ಯು.ಕೆ. ಅಹ್ಮದಿಯಾ ಮುಸ್ಲಿಮ್ ಸಂಘಟನೆಯನ್ನು ಅದರ ಶತವಾರ್ಷಿಕ ಸಮಾರಂಭದ ಸಂದರ್ಭದಲ್ಲಿ ಅಭಿನಂದಿಸುತ್ತೇನೆ. ಲೋಕದ ಎಲ್ಲ ಮೂಲೆಗಳಿಂದ ಆಗಮಿಸಿದ ಜನರಿಗೆ ಬ್ರಿಟನ್ ನಿಜವಾದ ಮನೆಯಾಗಿದೆ ಎಂಬುದಕ್ಕೆ ನಿಮ್ಮ ಸಂಘಟನೆ ಒಂದು ಜೀವಂತ ಮಾದರಿಯಾಗಿದೆ. ಲಂಡನಿನ ಪ್ರಥಮ ಮಸ್‌ಜಿದನ್ನು 1924 ರಲ್ಲಿ ನಿರ್ಮಿಸಿದ ನೀವು, ದೇಶದಾದ್ಯಂತ ಶಾಂತಿಯ ಪ್ರಚಾರ ನಡೆಸುವ ನಿಮ್ಮ ಅಭಿಯಾನ ಮೂಲಕ ನೀವು ಸಾಧಿಸಿದುದು ಅನೇಕ. ಕಳೆದ ವರ್ಷ ನೀವು ನಮ್ಮೊಂದಿಗೆ ಘನವೆತ್ತ ಮಹಾರಾಣಿಯವರ ವಜ್ರ ಜೂಬಿಲಿ ಸಮಾರಂಭದಲ್ಲಿ ಮತ್ತು ಒಲಿಂಪಿಕ್ಸ್‌ನಲ್ಲಿ ಬ್ರಿಟನ್ ಗಳಿಸಿದ ಅದ್ಭುತ ವಿಜಯದ ಸಮಾರಂಭದಲ್ಲಿ ಭಾಗವಹಿಸಿದಿರಿ. ಇಂತಹ ಕಾರ್ಯಕ್ರಮಗಳು ಮತ್ತು ನಿಮ್ಮಂತಹ ಸಮುದಾಯಗಳು ಬ್ರಿಟನಿನ ಶ್ರೇಷ್ಠತೆಯನ್ನು ಲೋಕಕ್ಕೆ ತೋರಿಸಿಕೊಡುತ್ತವೆ. ನಿಮ್ಮ ಔದಾರ್ಯಪೂರ್ಣ ಸೇವೆಗಳು, ವೃದ್ಧರಿಗೂ ಯುವ ಜನರಿಗೂ ಮಾಡಿದ ಸೇವೆಗಳು, ಸಾವಿರಾರು ಗಿಡಗಳನ್ನು ಪ್ರತಿವರ್ಷ ನೆಟ್ಟು ನೀವು ಪರಿಸರಕ್ಕೆ ಮಾಡಿದ ಸೇವೆಗಳು, ವಸತಿಹೀನರಿಗೆ ಆಹಾರನೀಡುವ ಸೇವೆ, ರಕ್ತದಾನ ನೀಡುವ ಸೇವೆ ನಿಮ್ಮ ಬಗ್ಗೆ ಬ್ರಿಟನ್ ಹೆಮ್ಮೆಪಡಬಹುದಾದ ಹಲವು ಕಾರಣಗಳಲ್ಲಿ ಕೆಲವು ಆಗಿವೆ.

ಇದು ನೈಜ ವಿಶ್ವಾಸವು ಕಾರ್ಯನಿರತವಾದುದರ ಉದಾಹರಣೆಯಾಗಿದೆ. ನಿಮ್ಮ ಸಮುದಾಯ ಭಯಂಕರ ಹಿಂಸಾಚಾರಗಳಿಗೆ ಗುರಿಯಾಗಿದೆ ಎಂದು ನನಗೆ ಗೊತ್ತಿದೆ. ಲಂಡನಿನಲ್ಲಿ ವಾಸಿಸುತ್ತಿರುವ ನಿಮ್ಮ ಜಾಗತಿಕ ನೇತಾರ ಹಝ್‌ರತ್ ಮಿರ್ಝಾ ಮಸ್‌ರೂರ್ ಅಹ್ಮದ್ ಶಾಂತಿದೂತನೆಂದು ನನಗೆ ತಿಳಿದಿದೆ. ಈಗ ಬಹಳ ಕಷ್ಟಗಳ ಕಾಲವಾಗಿದೆ. ಆದರೆ ನೀವು ಮಾಡುತ್ತಿರುವ ಪರಿಶ್ರಮಗಳು ಅನುಕರಣೀಯವಾಗಿವೆ. ನಿಮ್ಮ ಉತ್ತಮ ಕೆಲಸಗಳು, ನಿಮ್ಮ ಶಾಂತಿ ಸಂದೇಶ ಮತ್ತು "ಎಲ್ಲರೊಂದಿಗೆ ಪ್ರೀತಿ, ಯಾರೊಂದಿಗೂ ದ್ವೇಷವಿಲ್ಲ" ಎಂಬ ನಿಮ್ಮ ಸಿದ್ಧಾಂತ ಬ್ರಿಟನ್‌ನಲ್ಲಿಯೂ ಲೋಕದಾದ್ಯಂತವೂ ಅಭಿವೃದ್ಧಿಗಳಿಸುವುದೆಂದು ನಾನು ಆಶಿಸುತ್ತೇನೆ. ಯುನೈಟೆಡ್ ಕಿಂಗ್‌ಡಮ್‌ನ ಅಹ್ಮದೀ ಮುಸ್ಲಿಮರಿಗೆ ಅವರ ಶತವಾರ್ಷಿಕ ಸಮಾರಂಭದ ವರ್ಷದಲ್ಲಿ ಅಭಿನಂದನೆಗಳು.

**ರೈಟ್ ಆನರೇಬಲ್ ಡೇವಿಡ್ ಕ್ಯಾಮರೂನ್**

ಪ್ರೈಮ್ ಮಿನಿಸ್ಟರ್ ಆಫ್ ಯುನೈಟೆಡ್ ಕಿಂಗ್‌ಡಮ್

# ಸೃಷ್ಟಿಕರ್ತನ ನಾಲ್ಕು ಮುಖ್ಯ ಗುಣವಿಶೇಷಗಳು

* ಹಝ್‌ರತ್ ಮಿರ್ಝಾ ಮಸ್‌ರೂರ್ ಅಹ್ಮದ್,
ಜಾಗತಿಕ ಅಹ್ಮದಿಯಾ ಮುಸ್ಲಿಮ್ ಜಮಾಅತ್‌ನ ಪಂಚಮ ಖಲೀಫ.



ಜರ್ಮನಿಯಲ್ಲಿ ಪ್ರತಿವರ್ಷ ಜರಗುತ್ತಿರುವ ಅಹ್ಮದಿಯಾ ಮುಸ್ಲಿಮ್ ಜಮಾಅತಿನ ವಾರ್ಷಿಕ ಸಮ್ಮೇಳನದ ದ್ವಿತೀಯ ದಿನದಂದು ಮುಸ್ಲಿಮೇತರರನ್ನು ಸಂಬೋಧಿಸಿ ಜಾಗತಿಕ ಅಹ್ಮದಿಯಾ ಮುಸ್ಲಿಮ್ ಜಮಾಅತಿನ ಜಾಗತಿಕ ಸರ್ವೋಚ್ಚ ನೇತಾರರಾದ ಹಝ್‌ರತ್‌ಮಿರ್ಝಾ ಮಸ್‌ರೂರ್ ಅಹ್ಮದ್ ಅವರು ಭಾಷಣ ಮಾಡುವ ಸಂಪ್ರದಾಯವಿದೆ. 2013ಜೂನ್ ದಿನಾಂಕ 29ರಂದು ಜರಗಿದ ಸಭೆಯಲ್ಲಿ ಒಂದು ಸಾವಿರಕ್ಕಿಂತಲೂ ಹೆಚ್ಚು ಅಹ್ಮದಿಯೇತರರಾದ ಅತಿಥಿಗಳು ಭಾಗವಹಿಸಿದ್ದರು. ಅವರಲ್ಲಿ ರಾಜಕಾರಣಿಗಳು, ಅಧ್ಯಾಪಕರು, ವಿಶ್ವವಿದ್ಯಾಲಯಗಳ ಪ್ರೊಫೆಸರರು, ವಿಶ್ವವಿದ್ಯಾಲಯದಲ್ಲಿ ಕಲಿಯುತ್ತಿರುವ ವಿದ್ಯಾರ್ಥಿಗಳು, ನ್ಯಾಯವಾದಿಗಳು ಮತ್ತು ಸಮಾಜದ ವಿವಿಧ ವರ್ಗಗಳಿಗೆ ಸೇರಿದ ಪುರುಷರೂ ಮಹಿಳೆಯರೂ ಸೇರಿದ್ದರು. ಮುಖ್ಯ ಭಾಷಣಕ್ಕೆ ಮುಂಚಿತವಾಗಿ ಜರ್ಮನಿಯ ಪಾರ್ಲಿಮೆಂಟ್ ಸದಸ್ಯರಾದ ಮಿಸ್ಟರ್ ಕಿಲಿಕ್, ಮೆಸಿಡೋನಿಯದ ಪಾರ್ಲಿಮೆಂಟ್ ಸದಸ್ಯ ಡಾಕ್ಟರ್ ಪಾಚೆಂಸ್ಕೀ, ಹೈಡಲ್ ಬರ್ಗ್ ನಗರದ ಮೇಯರ್ ಡಾಕ್ಟರ್ ವೆರ್ಝ್‌ನರ್ ಸಂಕ್ಷಿಪ್ತ ಭಾಷಣಗಳನ್ನು ಮಾಡಿದರು. ತನ್ನ ದೇಶದ ರಾಷ್ಟ್ರೀಯ ಧ್ವಜವನ್ನೂ ಒಂದು ಶೀಲ್ಡನ್ನೂ ಡಾಕ್ಟರ್ ಪಾಚೆಂಸ್ಕೀ ಹಝ್‌ರತ್

(ಹಿಂದಿನ ಪುಟದಿಂದ)

ತಿಳಿದಿದೆ. ಕೆಲವು ದೇಶಗಳ ವರ್ತನೆಗಳ ಕಾರಣದಿಂದ ಇನ್ನೊಂದು ಮಹಾಯುದ್ಧದ ಚಿಹ್ನೆಗಳು ದಿಗಂತದಲ್ಲಿ ಕಾಣಿಸುತ್ತಿದೆ.

ಮಹಾಯುದ್ಧವೇನಾದರೂ ಪ್ರಾರಂಭವಾದರೆ ಪಶ್ಚಿಮದ ದೇಶಗಳು ಸಹ ಅದರ ದೂರವ್ಯಾಪಕ ವಿನಾಶಕರ ಪರಿಣಾಮಗಳಿಂದ ಬಾಧಿತವಾಗುವುವು. ನಾವು ನಮ್ಮನ್ನು ಇಂತಹ ವಿನಾಶದಿಂದ ರಕ್ಷಿಸಬೇಕು. ನಾವು ನಮ್ಮ ಮುಂದಿನ ಪೀಳಿಗೆಗಳನ್ನು ಯುದ್ಧದ ವಿನಾಶಕರವೂ ದಾರುಣವೂ ಆಗಿರುವ ಪರಿಣಾಮಗಳಿಂದ ರಕ್ಷಿಸಬೇಕು. ಅಣು ಅಸ್ತ್ರ ಬಳಸುವ ಯುದ್ಧವು ಅತ್ಯಂತ ಭಯಂಕರವಾಗುವುದು. ಲೋಕವು ಮುಂದೆ ಸಾಗುತ್ತಿರುವ ರೀತಿಯನ್ನು ನೋಡುವಾಗ, ಅಣು ಅಸ್ತ್ರ ಬಳಸಲ್ಪಡುವ ಯುದ್ಧವು ಸಂಭವಿಸುವ ಅಪಾಯವಿದೆ. ಇಂತಹ ಭಯಾನಕ ಪರಿಣಾಮವನ್ನು ತಡೆಗಟ್ಟಲು ನಾವು ನ್ಯಾಯ, ಭಾವೈಕ್ಯತೆ, ಪ್ರಾಮಾಣಿಕತೆಯನ್ನು ಅವಲಂಬಿಸಬೇಕು. ದ್ವೇಷವನ್ನು ಹರಡಿ ಲೋಕದ ಶಾಂತಿಯನ್ನು ಕೆಡಿಸುವ ಗುಂಪುಗಳನ್ನು ತಡೆಯಲು ನಾವು ಒಗ್ಗೂಡಬೇಕು.

ನಾನು ಭರವಸೆಪಡುತ್ತೇನೆ ಮತ್ತು ಪ್ರಾರ್ಥಿಸುತ್ತೇನೆ: ಮಹಾಶಕ್ತಿ ರಾಷ್ಟ್ರಗಳು ತಮ್ಮ ಜವಾಬ್ದಾರಿಗಳನ್ನು ಅತ್ಯಂತ ಉತ್ತಮವಾಗಿಯೂ ನ್ಯಾಯೋಚಿತವಾಗಿಯೂ ಈಡೇರಿಸಲು ಸರ್ವಶಕ್ತನಾದ ದೇವನು ಅನುಗ್ರಹಿಸುವವನಾಗಲಿ – ಆಮೀನ್ (ಅಲ್ಲಾಹನು ಈ ಪ್ರಾರ್ಥನೆಯನ್ನು ಸ್ವೀಕರಿಸಲಿ). ನೀವು ಸಮಯಾವಕಾಶ ಮಾಡಿಕೊಂಡು. ಇಲ್ಲಿಗೆ ಆಗಮಿಸಿದುದಕ್ಕೋಸ್ಕರ ನಿಮಗೆ ಇನ್ನೊಮ್ಮೆ ಕೃತಜ್ಞತೆ ಅರ್ಪಿಸುತ್ತೇನೆ. ಅಲ್ಲಾಹನು ನಿಮಗೆಲ್ಲರಿಗೂ ಅನುಗ್ರಹನೀಡಲಿ. ನಿಮಗೆ ತುಂಬಾ ಕೃತಜ್ಞತೆಗಳು. ❖

ಖಲೀಫರವರಿಗೆ ಪಾರಿತೋಷಿಕವಾಗಿ ಅರ್ಪಿಸಿದರು. ಸಾಂಪ್ರದಾಯಿಕ ಪ್ರಾರ್ಥನೆಗಳನ್ನು ಮಾಡಿದ ನಂತರ ಹಝ್ರತ್ ಖಲೀಫರು ಹೀಗೆ ಹೇಳಿದರು:

ಎಲ್ಲ ಅತಿಥಿಗಳಿಗೆ ಅಸ್ಸಲಾಮು ಅಲೈಕುಮ್ ವ ರಹ್ಮತುಲ್ಲಾಹಿ ವ ಬರಕಾತುಹೂ – ಅಲ್ಲಾಹನ ಶಾಂತಿ ಮತ್ತು ಅನುಗ್ರಹ ನಿಮ್ಮೆಲ್ಲರ ಮೇಲೆ ಇರಲಿ.

ನಮ್ಮ ವಾರ್ಷಿಕ ಸಮ್ಮೇಳನಕ್ಕೆ ಆಗಮಿಸಿ ಭಾಗವಹಿಸಿದ ಎಲ್ಲ ಅತಿಥಿಗಳಿಗೆ ನಾನು ಮೊದಲನೆಯವಾಗಿ ಕೃತಜ್ಞತೆ ಅರ್ಪಿಸುತ್ತೇನೆ. ಅಹ್ಮದಿಯೇತರರಾದ ನಮ್ಮ ಸ್ನೇಹಿತರನ್ನು ನಮ್ಮ ವಾರ್ಷಿಕ ಸಮ್ಮೇಳನದ ಸಂದರ್ಭದಲ್ಲಿ ಸಂಬೋಧಿಸಿ ಭಾಷಣ ಮಾಡುವುದು ಜರ್ಮನಿಯ ವಾರ್ಷಿಕ ಸಮ್ಮೇಳನದ ಒಂದು ಸ್ಥಿರವಾದ ಸಂಪ್ರದಾಯವಾಗಿದೆ.

ಬಹುತೇಕ ಮುಸ್ಲಿಮೇತರರಾದ ನಿಮ್ಮನ್ನು ನಾನು ಸಂಬೋಧಿಸುತ್ತಿರುವುದರಿಂದ ಇಸ್ಲಾಮ್ ಧರ್ಮದಲ್ಲಿ ಸೃಷ್ಟಿಕರ್ತನಾದ ದೇವನ ಬಗ್ಗೆ ಇರುವ ನಂಬಿಕೆಗಳ ಬಗ್ಗೆ ವಿವರಿಸಲು ನಾನು ಬಯಸುತ್ತೇನೆ. ಈ ವಿಷಯದ ಬಗ್ಗೆ ತಳಸ್ಪರ್ಶಿಯಾಗಿ ವಿಶದೀಕರಿಸಲು ಈಗ ಸಾಕಷ್ಟು ಸಮಯವಿಲ್ಲದಿದ್ದರೂ ಸೃಷ್ಟಿಕರ್ತನಾದ ದೇವನ ಮುಖ್ಯ ಗುಣವಿಶೇಷಗಳ ಬಗ್ಗೆ ನೈಜ ಇಸ್ಲಾಮೀ ನಂಬಿಕೆಗಳನ್ನು ಸಂಕ್ಷಿಪ್ತವಾಗಿ ವಿಶದೀಕರಿಸಲು ಪ್ರಯತ್ನಿಸುವೆನು. ಈ ವಿಷಯವನ್ನು ನಾನು ಭಾಷಣಕ್ಕೆ ಆಯ್ಕೆ ಮಾಡಿರುವುದು ಏಕೆಂದರೆ, ಸೃಷ್ಟಿಕರ್ತನಾದ ದೇವನ ಬಗ್ಗೆ ಇಸ್ಲಾಮ್ ಧರ್ಮದ ತತ್ವೋಪದೇಶಗಳನ್ನು ಸ್ಪಷ್ಟವಾಗಿ ಮನವರಿಕೆ ಮಾಡಿಕೊಂಡರೆ ಇಸ್ಲಾಮಿನ ವಿರುದ್ಧ ಮುಸ್ಲಿಮೇತರರಿಗಿರುವ ಅನೇಕ ಸಂಶಯಗಳು ಮತ್ತು ಸಂದೇಹಗಳು ತಾನಾಗಿಯೇ ನಿವಾರಣೆಗೊಳ್ಳುವುವು.

ಇಂದು ಲೋಕದಲ್ಲಿ ಸಾಮಾನ್ಯವಾಗಿ ಸಾರ್ವತ್ರಿಕವಾಗಿ ಇಸ್ಲಾಮಿನ ಬಗ್ಗೆ ಇರುವ ತಪ್ಪು ಗ್ರಹಿಕೆ ಹೀಗಿದೆ: ಇಸ್ಲಾಮ್ ಧರ್ಮ ಪ್ರತಿಪಾದಿಸುವ ಏಕದೇವನು ಅತ್ಯಂತ ಕ್ರೂರಿ ಮತ್ತು ಗರ್ವಿಷ್ಠನಾಗಿರುವನು. ಅವನು ಬಲಾತ್ಕಾರವನ್ನು ಬೆಂಬಲಿಸುತ್ತಾನೆ. ಅವನ ಏಕಮಾತ್ರ ಕೆಲಸ ಜನರನ್ನು ಶಿಕ್ಷಿಸಿ ನರಕಕ್ಕೆ ಹಾಕುವುದಾಗಿದೆ. ಇಸ್ಲಾಮಿನ ದೇವನು ಪ್ರತಿಯೊಂದು ತಪ್ಪು ಅಥವಾ ಪಾಪಕ್ಕೆ ಅದು ಎಷ್ಟು ಚಿಕ್ಕದಾಗಿದ್ದರೂ ನಗಣ್ಯವಾಗಿದ್ದರೂ ಶಿಕ್ಷೆ ನೀಡದೆ ಬಿಟ್ಟುಬಿಡಲಾರನು. ಆದರೆ ವಾಸ್ತವವೇನೆಂದರೆ. ಇವೆಲ್ಲ ಅತ್ಯಂತ ತಪ್ಪು ಮತ್ತು ಅನ್ಯಾಯಭರಿತ ಆರೋಪಗಳಾಗಿವೆ.

ನಾವು ಆರಾಧಿಸುವ ದೇವನು ಎಲ್ಲ ಶಕ್ತಿ ಸಾಮರ್ಥ್ಯಗಳನ್ನು ಹೊಂದಿದವನೆಂದೂ ಪರಿಪೂರ್ಣ ಪರಮಾಧಿಕಾರ ಹೊಂದಿದವನೆಂದೂ ನಾವು ನಂಬುತ್ತೇವೆ. ಅವನು ಇಚ್ಛಿಸುವ ಪ್ರತಿಯೊಂದು ಕೆಲಸ ಮಾಡಲು ಅವನು ಸಾಮರ್ಥ್ಯ ಹೊಂದಿದವನೆಂದೂ ನಾವು ನಂಬುತ್ತೇವೆ. ಅದರೊಂದಿಗೆ, ಅವನು ಯಾವಾಗಲೂ ಕರುಣೆದೋರುವವನೆಂದು ಸಹ ನಾವು ನಂಬುತ್ತೇವೆ. ಪವಿತ್ರ ಖುರ್‌ಆನ್‌ನಲ್ಲಿ ಸರ್ವಶಕ್ತನಾದ ದೇವನು ಹೀಗೆ ಹೇಳಿದ್ದಾನೆ: "ನನ್ನ ಕರುಣೆಯು ಸರ್ವವನ್ನೂ ಆವರಿಸಿಕೊಂಡಿದೆ" (7:157).

ಪವಿತ್ರ ಖುರ್‌ಆನ್‌ನಲ್ಲಿ ದೇವನು ಹೀಗೆ ಸಹ ಹೇಳಿದ್ದಾನೆ: "ತಮ್ಮ ಸ್ವಂತ ಆತ್ಮಕ್ಕೆ ದ್ರೋಹವೆಸಗಿದ ನನ್ನದಾಸರೇ, ಅಲ್ಲಾಹನ ಕೃಪೆಯ ಬಗ್ಗೆ ನೀವು ನಿರಾಶರಾಗಬೇಡಿರಿ. ಖಂಡಿತವಾಗಿಯೂ ಅವನು ಅತ್ಯಂತ ಕ್ಷಮಾಶೀಲನೂ ಕಾರುಣ್ಯವಂತನೂ ಆಗಿದ್ದಾನೆ." (39:54)

ಅಲ್ಲಾಹನ ಅನುಗ್ರಹ ಮತ್ತು ಕರುಣೆ ಲೋಕದ ಜನರಿಗೆ ದೊರಕದೆ ಇರುತ್ತಿದ್ದರೆ ಅವರು ಮಾಡಿದ ಕೆಟ್ಟ ಕೆಲಸಗಳ ಪರಿಣಾಮವಾಗಿ ಮತ್ತು ಅವರು ಹಬ್ಬಿಸಿದ ಸುಳ್ಳು ದೋಷಾರೋಪಗಳ ಪರಿಣಾಮವಾಗಿ ಬಹಳ ದೊಡ್ಡ ಶಿಕ್ಷೆಗೆ ಗುರಿಯಾಗುತ್ತಿದ್ದರೆಂದು ಪವಿತ್ರ ಖುರ್‌ಆನಿನ ಇನ್ನೊಂದು ವಚನದಲ್ಲಿ ಅಲ್ಲಾಹನು ಹೇಳಿರುವನು. (ಅಧ್ಯಾಯ 24 ವಚನ 15).

ದೇವನು ಜನರ ಬಗ್ಗೆ ಇರುವ ತನ್ನ ಅಪರಿಮಿತ ಪ್ರೀತಿಯನ್ನು ಪವಿತ್ರ ಖುರ್‌ಆನಿನ ಇನ್ನೊಂದು ವಚನದಲ್ಲಿ ಹೀಗೆ ಸೂಚಿಸಿದ್ದಾನೆ: ಒಳ್ಳೆಯ ಕೆಲಸಗಳಿಗೆ ಪಾರಿತೋಷಕವು , ಮಾಡಿದ ಉತ್ತಮ ಕೆಲಸದ ಹತ್ತು ಪಟ್ಟು ನೀಡಲ್ಪಡುವುದು. ಕೆಟ್ಟ ಕೆಲಸದ ಶಿಕ್ಷೆ ,ಆ ಕೆಲಸಕ್ಕೆ ಸಮವಾಗಿ ಮಾತ್ರ ನೀಡಲಾಗುವುದು.

ನಾನು ನಿಮ್ಮ ಮುಂದೆ ಇರಿಸಿದ ಈ ಕೆಲವು ಉದಾಹರಣೆಗಳು ಇಸ್ಲಾಮ್ ಪ್ರತಿಪಾದಿಸುವ ದೇವನ ಸತ್ಯಸಂಧವಾದ ಚಿತ್ರವನ್ನು ನೀಡುತ್ತವೆ. ನಾನು ವಿವರಿಸಿದ ಉದಾಹರಣೆಗಳು ಕ್ರೂರನೂ ನಿಷ್ಕರುಣಿಯೂ ಆಗಿರುವ ದೇವನನ್ನು ಚಿತ್ರಿಸುತ್ತವೆಯೋ ಅಥವಾ ಹಿತೈಷಿಯೂ ಕರುಣಾಮಯನೂ ಪ್ರೀತಿಸುವವನೂ ಆಗಿರುವ ದೇವನ ಚಿತ್ರಣ ನೀಡುತ್ತಿವೆಯೋ? ವಾಸ್ತವಿಕವಾಗಿ ಪವಿತ್ರ ಖುರ್‌ಆನಿನಲ್ಲಿ ಅನೇಕ ವಚನಗಳ ಮೂಲಕ ನಾವು ಏಕದೇವನ ದಯೆ, ಕರುಣೆ ಮತ್ತು ಔದಾರ್ಯವನ್ನು ಮನವರಿಕೆ ಮಾಡಬಹುದಾಗಿದೆ. ನಾನು ಕೇವಲ ಕೆಲವು ಉದಾಹರಣೆಗಳನ್ನು ಮಾತ್ರ ನೀಡಿದ್ದೇನೆ.

ವಾಸ್ತವವೇನೆಂದರೆ, ಒಬ್ಬನು ಸತ್ಕರ್ಮ ಮಾಡುವುದಾದರೆ ಅಥವಾ ತದ್ವಿರುದ್ಧವಾಗಿ ಪಾಪಕೃತ್ಯಮಾಡುವುದಾದರೆ, ಅವನಿಗೆ ಪಾರಿತೋಷಿಕ ಅಥವಾ ಶಿಕ್ಷೆ ಅವನ ಕೆಲಸಕ್ಕೆ ಅನುಯೋಜ್ಯವಾಗಿ ಸಿಗುವುದು ಎಂದು ಇಸ್ಲಾಮ್ ವಿಧಿಸುತ್ತದೆ. ಒಬ್ಬನು ಒಂದು ಕೆಲಸ ಮಾಡಿದರೆ ಇನ್ನೊಬ್ಬನನ್ನು ಆ ಕೆಲಸಕ್ಕೆ ಹೊಣೆಗಾರನಾಗಿ ಮಾಡಲಾಗದು, ಒಬ್ಬನು ಮಾಡಿದ ಅಪರಾಧಕ್ಕೆ ಇನ್ನೊಬ್ಬನಿಗೆ ಶಿಕ್ಷೆ ನೀಡುವ, ಹೊಣೆಗಾರಿಕೆಯ ವರ್ಗಾವಣೆಯ ತತ್ವವನ್ನು ಲೌಕಿಕನ್ಯಾಯ ಸಂವಿಧಾನ ಕೂಡ ಅನುಮತಿಸಲಾರದು. ಹೀಗಿರುವಾಗ, ದೇವನು ರೂಪಿಸಿದ ನ್ಯಾಯ ಸಂವಿಧಾನ ವ್ಯವಸ್ಥೆಯಲ್ಲಿ ಒಬ್ಬನು ಮಾಡಿದ ಅಪರಾಧಕ್ಕೆ ಇನ್ನೊಬ್ಬನನ್ನು ಶಿಕ್ಷೆಗೆ ಗುರಿಪಡಿಸುವುದು ಹೇಗೆ ತಾನೆ ಸಾಧ್ಯವಾಗುವುದು? ದೇವನ ನ್ಯಾಯ ಪಾಲನೆ ಮತ್ತು ಜಾಣ್ಮೆ ಅದ್ವಿತೀಯವಾಗಿವೆ. ಮಾನವರ ಬುದ್ಧಿಶಕ್ತಿ, ಜಾಣ್ಮೆ ಮತ್ತು ನ್ಯಾಯ ವ್ಯವಸ್ಥೆಗಿಂತ ಅದು ಎಷ್ಟೋ ಉನ್ನತ ಮಟ್ಟದ್ದಾಗಿದೆ. ಹೀಗಿರುವಾಗ, ಮಾನವರ ಬುದ್ಧಿಶಕ್ತಿ ಮತ್ತು ನ್ಯಾಯ ಪಾಲನೆಗಳಿಗಿಂತ ಕೀಳುಮಟ್ಟದ ಬುದ್ಧಿ ರಹಿತ ಮತ್ತು ನ್ಯಾಯ ವಿರುದ್ಧ ತೀರ್ಮಾನಗಳನ್ನು ದೇವನು ಕೈಗೊಳ್ಳುವನೆಂದು ಭಾವಿಸುವುದಾದರೂ ಹೇಗೆ? ಒಬ್ಬನು ಮಾಡಿದ ಅಪರಾಧಕ್ಕೆ ಇನ್ನೊಬ್ಬನಿಗೆ ದೇವನು ಶಿಕ್ಷೆ ವಿಧಿಸಿದನು ಎಂದು ಯಾರಾದರೂ ಹೇಳುವುದಾದರೆ ಹಾಗೆ ನಿರಪರಾಧಿಗೆ ಶಿಕ್ಷೆ ವಿಧಿಸುವವನು ಕ್ರೂರಿಯೂ ಅನ್ಯಾಯ ಮಾಡುವವನೂ ಎಂದು ಹೇಳದಿರಲು ಹೀಗೆ ತಾನೆ ಸಾಧ್ಯ? ಹೀಗೆ ವರ್ತಿಸುವ ದೇವನು ಅನ್ಯಾಯದಿಂದಲೂ ಸೇಡಿನಿಂದಲೂ ಕ್ರಮ ಕೈಗೊಳ್ಳುವವನು ಎಂದು ಪರಿಗಣಿಸಬೇಕಾಗುತ್ತದೆ. ಆದರೆ ಇಸ್ಲಾಮ್ ಪ್ರತಿಪಾದಿಸುವ ದೇವನು ಎಲ್ಲ ರೀತಿಯ ಅನ್ಯಾಯದಿಂದಲೂ ಕ್ರೂರತೆಗಳಿಂದಲೂ ಮುಕ್ತನಾಗಿರುವನು. ತನ್ನ ಕರುಣೆ ಅತ್ಯಂತ ಹೆಚ್ಚು ವ್ಯಾಪಕವಾಗಿದೆ

ಎಂದೂ ಆ ಕಾರಣದಿಂದ ತಾನು ಅತ್ಯಂತ ಹೆಚ್ಚು ಕ್ಷಮಿಸುವವನೆಂದೂ ಅವನು ಹೇಳಿರುವನು.

ಇಸ್ಲಾಮ್ ಪ್ರತಿಪಾದಿಸುವ ದೇವನು ಸರ್ವವಸ್ತುಗಳ ಒಡೆಯನಾಗಿದ್ದಾನೆ. ಒಡೆಯನಿಗೆ ತನ್ನ ದಾಸರನ್ನು ಕ್ಷಮಿಸುವ ಅಧಿಕಾರವಿದೆ. ಈ ವಿಷಯ ಮನವರಿಕೆ ಮಾಡಿಕೊಂಡರೆ ಇಸ್ಲಾಮ್ ಪ್ರತಿಪಾದಿಸುವ ಏಕದೇವನಾದ ಅಲ್ಲಾಹನು ಏಕೆ ಜನರನ್ನು ಕ್ಷಮಿಸುತ್ತಾನೆ? ಅವನು ಮಾನವರನ್ನೆಲ್ಲ ತನ್ನ ಕರುಣೆಯಿಂದಲೂ ಕ್ಷಮೆ ನೀಡುವಿಕೆ ಮೂಲಕವೂ ಏಕೆ ಆವರಿಸುತ್ತಾನೆ? ಎಂಬ ಆಕ್ಷೇಪಗಳನ್ನು ಮಾಡಲು ಸಾಧ್ಯವಾಗದು. ನಾನು ಇಷ್ಟರವರೆಗೆ ನೀಡಿದ ವಿವರಣೆಗಳಿಂದ, ಕೆಲವು ಜನರು ಇಸ್ಲಾಮ್ ಪ್ರತಿಪಾದಿಸುವ ದೇವನ ಬಗ್ಗೆ ಸೂಚಿಸುವ ಆಕ್ಷೇಪಗಳು ತಪ್ಪು ಗ್ರಹಿಕೆಗಳ ಕಾರಣದಿಂದ ಎಂದು ಸ್ಪಷ್ಟವಾಗುವುದು. ಅಜ್ಞಾನದ ಕಾರಣದಿಂದ ಅಥವಾ ಇಸ್ಲಾಮನ್ನು ಅಪಕೀರ್ತಿಪಡಿಸುವ ದುರುದ್ದೇಶದಿಂದ ಇಂತಹ ಆಕ್ಷೇಪಗಳನ್ನು ಮಾಡಲಾಗುತ್ತದೆ.

ನಾನು ಇದರ ಮೊದಲು ಹೇಳಿದ ಹಾಗೆ ಇಸ್ಲಾಮ್ಗ ಪ್ರತಿಪಾದಿಸುವ ದೇವನ ಗುಣವಿಶೇಷಗಳ ಬಗ್ಗೆ ವಿವರಿಸುವೆನು. ಮುಸ್ಲಿಮರು ಪ್ರತಿದಿನ ಅನುಷ್ಠಿಸುವ ಕಡ್ಡಾಯ ನಮಾಝ್‌ಗಳಲ್ಲೂ ಇತರ ಐಚ್ಛಿಕ ನಮಾಝ್‌ಗಳಲ್ಲೂ ಪವಿತ್ರಖುರ್‌ಆನಿನ ಪ್ರಥಮ ಅಧ್ಯಾಯವನ್ನು ಪಠಿಸುತ್ತಾರೆ. ಅದರಲ್ಲಿ ದೇವನ ಪ್ರಮುಖ ನಾಲ್ಕು ಗುಣ ವಿಶೇಷಗಳನ್ನು ಪ್ರಸ್ತಾಪಿಸಲಾಗಿದೆ. ಈ ಪ್ರಮುಖ ಗುಣಗಳ ಬಗ್ಗೆ ತಳಸ್ಪರ್ಶಿಯಾಗಿ ವಿಶದೀಕರಿಸಲು ಈಗ ಸಾಧ್ಯವಾಗುವುದಿಲ್ಲವಾದರೂ ಅವುಗಳ ಬಗ್ಗೆ ಸಂಕ್ಷಿಪ್ತ ವಿವರಣೆ ನೀಡುವೆನು.

ಪವಿತ್ರ ಖುರ್‌ಆನಿನ ಪ್ರಥಮ ಅಧ್ಯಾಯದಲ್ಲಿ ದೇವನನ್ನು ಅಲ್ಲಾಹ್ ಎಂದು ಪ್ರಸ್ತಾಪಿಸಲಾಗಿದೆ. ಅಲ್ಲಾಹ್ ಎಂದರೆ ಅತ್ಯಂತ ಸರ್ವೋಚ್ಚನು ಎಂದು ಅರ್ಥ. ಎಲ್ಲ ಪರಿಪೂರ್ಣ ಗುಣಗಳನ್ನು ಹೊಂದಿರುವವನು, ಎಲ್ಲ ವಿಧ ನ್ಯೂನತೆಗಳಿಂದ ಮುಕ್ತನಾದವನು. ಮನುಷ್ಯನು ತನ್ನ ಕಲ್ಪನೆಯಲ್ಲಿ ಊಹಿಸಬಹುದಾದ ಎಲ್ಲ ಪರಿಪೂರ್ಣ ಉತ್ತಮ ಗುಣಗಳು ಅವನಲ್ಲಿವೆ. ಇವುಗಳಲ್ಲದೆ, ಮನುಷ್ಯನಿಗೆ ಊಹಿಸಲು ಸಾಧ್ಯವೇ ಇಲ್ಲದ ಅನೇಕ ಗುಣವಿಶೇಷಗಳು ದೇವನಿಗೆ ಇವೆ. ಅಲ್ಲಾಹ್ ಎಂಬ ಪದ ಎಲ್ಲ ಪರಿಪೂರ್ಣ ಗುಣಗಳಿಂದ ಭೂಷಿತನಾದ ದೇವನ ನಾಮ ಧೇಯವಾಗಿದೆ. ಅವನಿಗೆ ಯಾವ ನ್ಯೂನತೆಗಳೂ ಇರುವುದಿಲ್ಲ. ಅಲ್ಲಾಹನು ಪರಿಪೂರ್ಣ ಗುಣ ವಿಶೇಷಗಳನ್ನು ಹೊಂದಿರುವವನೆಂದು ನಾವು ವಾದಿಸುವುದು ಸತ್ಯವನ್ನು ಆಧಾರವಾಗಿಟ್ಟುಕೊಂಡಾಗಿದೆ.

ಪರಿಪೂರ್ಣತೆಗೆ ಎರಡು ಮೂಲಗುಣಗಳಿವೆ. ಒಂದು ವಸ್ತು ಪರಿಪೂರ್ಣತೆ ಹೊಂದಿವೆ ಎಂದು ಗಣಿಸುವುದಾದರೆ ಮೊದಲನೆಯದಾಗಿ, ಅದರ ಸೌಂದರ್ಯ ಪರಿಪೂರ್ಣವಾಗಿರಬೇಕು. ಯಾವುದೇ ಕಳಂಕ ಅದರಲ್ಲಿರಬಾರದು. ಎರಡನೆಯದಾಗಿ, ಯಾವುದಾದರೂ ವಸ್ತು ಅಥವಾ ವ್ಯಕ್ತಿ ಪರಿಪೂರ್ಣನಾಗಿದ್ದರೆ ಅವುಗಳಿಗೆ ಸಮಾನವಾಗಿ ಬೇರೆ ಯಾವುದೂ ಔದಾರ್ಯದಲ್ಲಿ ಮತ್ತು ಕರುಣೆ ತೋರಿಸುವುದರಲ್ಲಿ ಸಮಾನವಾಗಿರಬಾರದು. ಆಕಾಶಗಳಲ್ಲೂ ಭೂಮಿಯಲ್ಲೂ ಇರುವ ಎಲ್ಲ ಸೃಷ್ಟಿಗಳು ಎಷ್ಟು ಸೌಂದರ್ಯಭರಿತವೂ ವೈಭವಭರಿತವೂ ಆಗಿವೆ ಎಂದರೆ ಅವು ಸೃಷ್ಟಕರ್ತನ ಸೌಂದರ್ಯವನ್ನೂ ಅವನು ತನ್ನ ಸೃಷ್ಟಿಗಳಿಗೆ ತೋರಿಸಿದ ಔದಾರ್ಯವನ್ನೂ ಅವನ ಪರಿಪೂರ್ಣತೆಯನ್ನೂ ಸಾಕ್ಷ್ಯಪಡಿಸುತ್ತವೆ. ಮಾನವರಿಗೆ ಸೃಷ್ಟಿಕರ್ತನು ನೀಡಿರುವ ಪಾರಿತೋಷಕಗಳನ್ನೂ ಅನುಗ್ರಹಗಳನ್ನೂ ಅವಲೋಕಿಸುವಾಗ ನಮಗೆ ಅವನು ನೀಡಿದ ಕರುಣೆ ಮತ್ತು ಔದಾರ್ಯಗಳಿಗೆ ಕೃತಜ್ಞತೆ ಸೂಚಿಸಲು ನಾವು ಮುಂದಾಗುತ್ತೇವೆ.

ಅಲ್ಲಾಹನ ವೈಭವ, ಕರುಣೆ ಮತ್ತು ಸೌಂದರ್ಯಕ್ಕೆ ಸಮಾನವಾದುದು ಯಾವುದೂ ಇಲ್ಲ ಎಂದು ಪವಿತ್ರ ಖುರ್‌ಆನ್ ನಮ್ಮೊಂದಿಗೆ ಹೇಳುತ್ತದೆ.

ದೇವನ ಅತ್ಯಂತ ಮುಖ್ಯ ಗುಣವಿಶೇಷಗಳಲ್ಲಿ ಒಂದು, "ಸಕಲ ಲೋಕಗಳ ಪರಿಪಾಲಕ" ಎಂಬುದಾಗಿದೆ. ಇದರ ಅರ್ಥವೇನೆಂದರೆ, ಅವನು ಎಲ್ಲ ಸೃಷ್ಟಿಗಳ ಪಾಲನೆ ಪೋಷಣೆ ಮಾಡುತ್ತಾನೆ. ಅವನು ಯಾವುದೇ ರೀತಿಯ ತಾರತಮ್ಯ, ಭೇದಭಾವನೆ ಇಲ್ಲದೆ ವಿಶ್ವದ ಎಲ್ಲ ಜನರ ಆವಶ್ಯಕತೆಗಳನ್ನು ಈಡೇರಿಸಿ ಕೊಡುತ್ತಾನೆ. ಅವರ ಪಾಲನೆ ಪೋಷಣೆ ಮಾಡುತ್ತಾನೆ. ಇಸ್ಲಾಮ್ ಪ್ರತಿಪಾದಿಸುವ ದೇವನು ಸಮಗ್ರ ವಿಶ್ವದ ದೇವನಾಗಿದ್ದಾನೆ. ಅವನು ಮುಸ್ಲಿಮರ ದೇವನಾಗಿದ್ದಾನೆ. ಅವನು ಅವರಿಗೆ ಜೀವಿತದ ಸಾಮಗ್ರಿಗಳನ್ನು ಒದಗಿಸುತ್ತಾನೆ. ಅದೇ ರೀತಿ ಅವನು ಕ್ರೈಸ್ತರ, ಯಹೂದಿಯರ ದೇವನೂ ಆಗಿದ್ದಾನೆ. ಅವರಿಗೆಲ್ಲ ಲೋಕದಲ್ಲಿರುವ ಎಲ್ಲ ಆವಶ್ಯಕತೆಗಳನ್ನು ಅವನು ಒದಗಿಸಿಕೊಡುತ್ತಾನೆ. ಅವನು ಹಿಂದುಗಳ, ಸಿಖ್ಖರ ಮತ್ತು ಇತರ ಎಲ್ಲ ಧರ್ಮಗಳ ಜನರ ದೇವನಾಗಿದ್ದಾನೆ. ಅವನು ಅವರೆಲ್ಲರಿಗೂ ಜೀವಿತಾಧಾರ ವಸ್ತುಗಳನ್ನು ನೀಡುತ್ತಾನೆ. ವಾಸ್ತವಿಕವಾಗಿ, ದೇವನ ಅಸ್ತಿತ್ವದ ಬಗ್ಗೆ ನಂಬದವರಿಗೆ ಮತ್ತು ತಮಗೆ ದೊರೆತುದೆಲ್ಲವೂ ತಮ್ಮದೇ ಪರಿಶ್ರಮದ ಫಲವಾಗಿ ಅಥವಾ ವೈಜ್ಞಾನಿಕ ಸಂಶೋಧನೆಗಳ ಫಲವಾಗಿ ಎಂದು ನಂಬುವರಿಗೆ ಕೂಡ ಅವನು ಜೀವನಾಧಾರವನ್ನು ಒದಗಿಸಿಕೊಡುತ್ತಾನೆ. ವೈಜ್ಞಾನಿಕ ಪ್ರಗತಿಯನ್ನು ನಾವು ಗಳಿಸಿರುವುದು ಅಲ್ಲಾಹನ ಅನುಗ್ರಹದ ಮೂಲಕವೇ ಎಂದು ಪ್ರತಿಯೊಬ್ಬ ನಿಷ್ಠಾವಂತ ಮುಸ್ಲಿಮನು ನಂಬುತ್ತಾನೆ. ದೇವನು ಪ್ರಕೃತಿ ನಿಯಮಗಳನ್ನು ಹೇಗೆ ರೂಪಿಸಿರುವನೆಂದರೆ, ಅವುಗಳ ಬಗ್ಗೆ ಸಂಶೋಧನೆ ನಡೆಸಲು ಕಠಿಣ ಪರಿಶ್ರಮಪಡುವವರಿಗೆ ಅವರ ಪರಿಶ್ರಮಗಳಿಗೆ ತಕ್ಕುದಾದ ಪ್ರತಿಫಲ ನೀಡುತ್ತಾನೆ. ದೇವನ ನೈಸರ್ಗಿಕ ನಿಯಮಗಳ ಬಗ್ಗೆ ಯಾರು ಸಂಶೋಧನೆ ನಡೆಸಿದರೂ ಅದರ ಲಾಭವನ್ನು ಅವನು ಪಡೆಯುತ್ತಾನೆ. ದೇವನು ಮನುಷ್ಯರಲ್ಲಿ ಎಂತಹ ಶಕ್ತಿ ಸಾಮರ್ಥ್ಯಗಳನ್ನು ಇರಿಸಿರುವನೆಂದರೆ, ಅವರು ತಮ್ಮ ಶಕ್ತಿ ಸಾಮರ್ಥ್ಯಗಳನ್ನು ಬಳಸಿ ದೇವನ ಅನುಗ್ರಹಗಳನ್ನೂ ಸಮೃದ್ಧಿಯನ್ನೂ ಪಡೆಯಬಹುದಾಗಿದೆ.

ಇಸ್ಲಾಮ್ ಪ್ರತಿಪಾದಿಸುವ ದೇವನು ಹೀಗೆ ಹೇಳುತ್ತಾನೆ: ಮನುಷ್ಯರಿಗೋಸ್ಕರ ಅವನು ಆಹಾರ ಪಾನೀಯಗಳನ್ನು ಒದಗಿಸಿದ ಹಾಗೆ ರೋಗಗಳಿಂದ ಸಂರಕ್ಷಣೆ ನೀಡಲು ಮತ್ತು ರೋಗ ಚಿಕಿತ್ಸೆ ನಡೆಸಲು ಅವನು ಮದ್ದುಗಳನ್ನೂ ಒದಗಿಸಿದ್ದಾನೆ. ಕೆಲವು ರೋಗಗಳನ್ನು ಗುಣಪಡಿಸುವ ಶಕ್ತಿಯನ್ನು ಅವನು ಕೆಲವು ವಸ್ತುಗಳಲ್ಲಿ ಇರಿಸಿದ್ದಾನೆ. ಕೆಲವು ಸಲ ದೇವನೇ ಸ್ವತಃ ಇಂತಹ ರೋಗನಿವಾರಕಗಳ ಬಗ್ಗೆ ತಿಳಿಸಿಕೊಡುತ್ತಾನೆ. ಇಂತಹ ಸಂದರ್ಭಗಳಲ್ಲಿ "ಸಂಶೋಧನೆ ಮತ್ತು ಪರಿಶ್ರಮ"ದ ನಿಮಯಗಳು ಜಾರಿಗೊಳ್ಳುವುದಿಲ್ಲ. ದೇವನೇ ಸ್ವತಃ ಮಾರ್ಗದರ್ಶನ ನೀಡುತ್ತಾನೆ. ನಾನು ಒಂದು ಉದಾಹರಣೆ ನೀಡುತ್ತೇನೆ. ಇತ್ತೀಚೆಗೆ ಒಬ್ಬ ಅಹ್ಮದೀ ಮಹಿಳೆಗೆ ಗರ್ಭಕೋಶದ ಕ್ಯಾನ್ಸರ್

ಬಾಧಿಸಿದುದಾಗಿ ತಿಳಿಯಿತು. ಆಕೆಯ ರೋಗ ಉಲ್ಬಣಗೊಂಡಿದೆ ಎಂದೂ ಚಿಕಿತ್ಸೆ ಸಾಧ್ಯವಿಲ್ಲವೆಂದೂ ಡಾಕ್ಟರ್‌ಗಳು ಹೇಳಿದರು. ಆಕೆ ಇನ್ನು ಮುಂದೆ ಸ್ವಲ್ಪ ಕಾಲ ಮಾತ್ರ ಜೀವಿಸುವಳೆಂದೂ ಆಸ್ಪತ್ರೆಯಿಂದ ಮನೆಗೆ ತೆರಳಿ ಮೃತ್ಯುವನ್ನು ನಿರೀಕ್ಷಿಸಬೇಕೆಂದೂ ಹೇಳಿದರು. ಡಾಕ್ಟರ್‌ಗಳ ಭವಿಷ್ಯವಾಣಿಯನ್ನು ಅಲ್ಲಗಳೆದು, ದೇವನು ಆಕೆ ಮನೆಗೆ ತೆರಳಿದ ನಂತರ ಆಕೆಯ ರೋಗವನ್ನು ಗುಣಪಡಿಸಿದನು ಮತ್ತು ಆಕೆ ಜೀವಿಸುವಂತೆ ಮಾಡಿದನು. ಆಕೆ ರಾತ್ರಿ ನಿದ್ರಿಸುವಾಗ ಒಂದು ಕನಸನ್ನು ಕಂಡಳು. ಆಕೆ ವಾಸಿಸುತ್ತಿದ್ದ ಪ್ರದೇಶದಲ್ಲಿ ಬೆಳೆಯುತ್ತಿದ್ದ ಒಂದು ಗಿಡ ಮೂಲಿಕೆಯನ್ನು ಆಕೆ ಕನಸಲ್ಲಿ ಕಂಡಳು. ಆ ಗಿಡ ಮೂಲಿಕೆಯಿಂದ ಒಂದು ಶಬ್ದ ಆಕೆಗೆ ಹೀಗೆ ಕೇಳಿಸಿತು: "ನಾನು ನಿನ್ನ ರೋಗಕ್ಕೆ ಮದ್ದಾಗಿರುವೆನು. ನೀನು ನನ್ನನ್ನು ಬಳಸು." ಈ ಕನಸನ್ನು ಕಂಡ ನಂತರ ಆ ಮಹಿಳೆ ಆ ಗಿಡ ಮೂಲಿಕೆಯನ್ನು ಮದ್ದಾಗಿ ಉಪಯೋಗಿಸಿದಾಗ ಆಕೆಯ ರೋಗ ಸಂಪೂರ್ಣವಾಗಿ ಅಲ್ಲಾಹನ ಅನುಗ್ರಹದಿಂದ ಗುಣವಾಯಿತು. ಆಕೆಯ ಬಗ್ಗೆ ನಿರಾಶೆಯನ್ನು ಪ್ರಕಟಿಸಿದ ಡಾಕ್ಟರ್‌ಗಳಿಗೆ ಬಹಳ ಆಶ್ಚರ್ಯವಾಯಿತು. ಅವರು ಹೇಳಿದರು: "ಇದು ನಿಜವಾಗಿಯೂ ಒಂದು ಪವಾಡವಾಗಿದೆ." ಆ ಮಹಿಳೆ ಈ ವಿಷಯವನ್ನು ನಮ್ಮ ಅಹ್ಮದೀ ಡಾಕ್ಟರ್‌ಗಳಿಗೆ ತಿಳಿಸಿದಾಗ ಅವರು ಈ ಗಿಡ ಮೂಲಿಕೆಯನ್ನು ಗರ್ಭಕೋಶದ ಕ್ಯಾನ್ಸರ್‌ಗೆ ಮತ್ತು ಸ್ತನದ ಕ್ಯಾನ್ಸರ್‌ಗೆ ಚಿಕಿತ್ಸೆ ನೀಡಲು ಬಳಸುತ್ತಿದ್ದಾರೆ. ಅಲ್ಲಾಹನ ಅನುಗ್ರಹದಿಂದ ಈ ಮದ್ದಿನ ಉಪಯೋಗದಿಂದ ಉತ್ತಮ ಪರಿಣಾಮ ಲಭಿಸುತ್ತಿದೆ ಮತ್ತು ಅನೇಕ ಮಹಿಳೆಯರು ಈ ರೋಗದಿಂದ ಮುಕ್ತಿಯನ್ನು ಪಡೆದಿದ್ದಾರೆ. ಯುನೈಟೆಡ್ ಕಿಂಗ್‌ಡಮ್‌ನಲ್ಲಿ ಒಬ್ಬ ಅಹ್ಮದೀ ಡಾಕ್ಟರ್ ಈ ಗಿಡ ಮೂಲಿಕೆ ಬಗ್ಗೆ ಸಂಶೋಧನೆ ನಡೆಸುತ್ತಿದ್ದಾರೆ. ಅದರ ಪರಿಣಾಮ ಶುಭ ಪ್ರತೀಕ್ಷೆ ನೀಡುವಂತಹದ್ದಾಗಿದೆ.

ಸರ್ವಶಕ್ತನಾದ ದೇವನು ಹೀಗೆಲ್ಲ ಮಾನವರ ಪಾಲನೆ ಪೋಷಣೆ ಮಾಡುತ್ತಾನೆ ಮತ್ತು ತನ್ನ ಸೃಷ್ಟಿಗಳನ್ನು ಸಂರಕ್ಷಿಸುತ್ತಾನೆ. ಹಾಗೆಯೇ ಮನುಷ್ಯರೆಲ್ಲ ಪ್ರಯೋಜನ ಪಡೆಯುವ ಅಸಂಖ್ಯಾತ ವಸ್ತುಗಳಿವೆ. ನಾವು ಉಸಿರಾಡುವ ಗಾಳಿ, ನಾವು ಕುಡಿಯುವ ನೀರು, ನಮಗೆ ಒದಗಿಸಿರುವ ಬೆಳಕು, ರಾತ್ರಿ ಹಗಲು ಮೊದಲಾದುವು ಮಾತ್ರವಲ್ಲ ಬೇರೆ ಹಲವಾರು ಅನುಗ್ರಹಗಳನ್ನು ದೇವನು ಮಾನವರಿಗೆ ಮಾತ್ರವಲ್ಲ ಅವನ ಎಲ್ಲ ಸೃಷ್ಟಿಗಳಿಗೆ ದಯಪಾಲಿಸಿರುವನು.

ಪವಿತ್ರ ಖುರ್‌ಆನಿನ ಪ್ರಥಮ ಅಧ್ಯಾಯದಲ್ಲಿ ಸರ್ವಶಕ್ತನಾದ ದೇವನ ಬಗ್ಗೆ ಹೇಳಲಾದ ಪ್ರಥಮ ಗುಣವಿಶೇಷ ನಾನು ಮೇಲೆ ವಿವರಿಸಿದ ಹಾಗೆ ಇದೆ. ಇದರ ಬಗ್ಗೆ ಮನವರಿಕೆ ಮಾಡಿಕೊಂಡ ನಿಷ್ಠಾವಂತನಾದ ಮುಸ್ಲಿಮನು ಮಾನವರಿಗೆಲ್ಲ ಒದಗಿಸಿದ ಜೀವನಾಧಾರಗಳ ಬಗ್ಗೆ ಕೃತಜ್ಞತೆಯನ್ನು ಸಹಜವಾಗಿ ಸೂಚಿಸುತ್ತಾನಲ್ಲದೆ, ಇಸ್ಲಾಮ್ ಪ್ರತಿಪಾದಿಸುವ ದೇವನು ಎಲ್ಲ ಮನುಷ್ಯರ ದೇವನೆಂದೂ ಅವನು ಧರ್ಮಕ್ಕೆ ಯಾವುದೇ ಪರಿಗಣನೆ ನೀಡದೆ ಎಲ್ಲ ಮನುಷ್ಯರಿಗೆ ಜೀವನಾಧಾರ ಒದಗಿಸುತ್ತಾನೆಂದೂ ಸೂಕ್ಷ್ಮ ಜ್ಞಾನಗಳಿಸುತ್ತಾನೆ. ಎಲ್ಲ ಮನುಷ್ಯರೂ ಎಲ್ಲ ಜೀವಿಗಳೂ ದೇವನ ಸೃಷ್ಟಿಗಳೆಂದು ಮನವರಿಕೆ ಮಾಡಿಕೊಳ್ಳುತ್ತಾನೆ. ಇದೇ ಕಾರಣದಿಂದ ಎಲ್ಲ ಜನರ ಬಗ್ಗೆ ಕಾಳಜಿ ಹೊಂದುವುದು ಮತ್ತು ಎಲ್ಲ ಜನರೊಂದಿಗೆ ಕರುಣೆಯಿಂದ ವರ್ತಿಸುವುದು ಪ್ರತಿಯೊಬ್ಬ ಮುಸ್ಲಿಮನಿಗೆ ಕಡ್ಡಾಯವಾಗಿದೆ. ಮಾನವರಿಗೆ ಹೇಗೆ ಸೇವೆ ಸಲ್ಲಿಸಬಹುದು ಎಂಬುದರ ಬಗ್ಗೆ ಯಾವಾಗಲೂ ಗಮನಿಸಬೇಕಾಗಿದೆ.

ಸಕಲ ಲೋಕಗಳ ಪರಿಪಾಲಕನೆಂಬ ಸರ್ವಶಕ್ತನಾದ ದೇವನ ಗುಣವಿಶೇಷವನ್ನು ಮನವರಿಕೆ ಮಾಡಿಕೊಂಡ ನೈಜ ಮುಸ್ಲಿಮರು ದೇವನು ಎಲ್ಲ ಮನುಷ್ಯರಿಗೆ ಸೇರಿದವನು ಎಂಬ ತತ್ವದ ಪ್ರಕಾರ ವರ್ತಿಸುವವರಾಗಿದ್ದಾರೆಂದು ನೀವು ಕಾಣಬಹುದು. ಇದನ್ನು ಮನವರಿಕೆ ಮಾಡಿಕೊಂಡ ಮುಸ್ಲಿಮ್ ಪುರುಷ ಮತ್ತು ಮುಸ್ಲಿಮ್ ಮಹಿಳೆ ತಾನು ಮಾನವರೆಲ್ಲರಿಗೂ ಸೇವೆ ಸಲ್ಲಿಸಬೇಕೆಂದು ಮಾತ್ರವಲ್ಲ, ದೇವನ ಎಲ್ಲ ಸೃಷ್ಟಿಗಳಿಗೂ ಸೇವೆಸಲ್ಲಿಸುವುದು ತನ್ನ ಕರ್ತವ್ಯವೆಂದು ಕಂಡುಕೊಳ್ಳಬಹುದು. ಇದೇ ಕಾರಣದಿಂದ ನಾವು **LOVE FOR ALL, HATRED FOR NONE "ಎಲ್ಲರೊಂದಿಗೆ ಪ್ರೀತಿ, ಯಾರೊಂದಿಗೂ ದ್ವೇಷವಿಲ್ಲ"** ಎಂಬ ಘೋಷವಾಕ್ಯವನ್ನು ಹೇಳುತ್ತೇವೆ.

ದೇವನ ಇನ್ನೊಂದು ಮುಖ್ಯ ಗುಣವಿಶೇಷವನ್ನು ನಾನು ಸಂಕ್ಷಿಪ್ತವಾಗಿ ವಿವರಿಸುವೆನು. ಅರಬಿಯಲ್ಲಿ ಇದನ್ನು "ಅರ್ರಹ್ಮಾನ್" ಎಂದು ಹೆಸರಿಸಲಾಗಿದೆ. ಪರಮ ದಯಾವಂತನೆಂದು ಇದರ ಅರ್ಥ. ಮುಸ್ಲಿಮರು ಪ್ರಸ್ತಾಪಿಸುವ ಪರಮ ದಯಾವಂತನಾದ ದೇವನು ಯಾರು? ಎಂದು ಅವಿಶ್ವಾಸಿಗಳು ಪ್ರಶ್ನಿಸುವಾಗ ಅದಕ್ಕೆ ಉತ್ತರವಾಗಿ ಹೀಗೆ ಹೇಳಬೇಕೆಂದು ಪವಿತ್ರ ಖುರ್‌ಆನ್ ಹೇಳುತ್ತದೆ: ಪರಮ ದಯಾವಂತನಾದ ದೇವನು ಎಲ್ಲ ಅನುಗ್ರಹಗಳ ಉದ್ಭವ ಸ್ಥಾನವಾಗಿದ್ದಾನೆ. ಅವನು ವಿಶ್ವವನ್ನು ನಿರ್ಮಿಸಿದನು. ಅವನು ಅದರಲ್ಲಿ ಸೂರ್ಯ, ಚಂದ್ರ, ನಕ್ಷತ್ರಗಳನ್ನೂ ಇತರ ಆಕಾಶ ಕಾಯಗಳನ್ನೂ ಸೃಷ್ಟಿಸಿದನು. ಇವೆಲ್ಲವನ್ನು ಸೃಷ್ಟಿಸಿರುವುದು ಕೇವಲ ಮುಸ್ಲಿಮರಿಗೋಸ್ಕರವಲ್ಲ. ಎಲ್ಲ ಸೃಷ್ಟಿಗಳ ಉಪಯೋಗಕ್ಕಾಗಿ ಯಾವುದೇ ತಾರತಮ್ಯ ಭಾವನೆ ಇಲ್ಲದೆ ಸೃಷ್ಟಿಸಲಾಗಿದೆ. ಈ ವಿಷಯವನ್ನು ಮನವರಿಕೆ ಮಾಡಿಕೊಳ್ಳುವವರು ಪರಮ ದಯಾನಂತನಾದ ದೇವನನ್ನು ನಂಬುತ್ತಾರೆ. ಅವನ ಪರಮ ದಯಾಗುಣದ ವೈಶ್ಯಾಲ್ಯವನ್ನು ಅರಿತುಕೊಂಡು ಅವನಿಗೆ ಕೃತಜ್ಞರಾಗುತ್ತಾರೆ. ಅಂತಹ ಜನರು ವಿನೀತರಾಗಿ ಭೂಮಿಯಲ್ಲಿ ನಡೆಯುತ್ತಾರೆ ಮತ್ತು ಉತ್ತಮವಾಗಿಯೂ ದಯಾಭರಿತರಾಗಿಯೂ ಜೀವಿಸುತ್ತಾರೆ. ಅವರು ಯಾರಿಗೂ ಯಾವ ಹಾನಿಯನ್ನೂ ಉಂಟುಮಾಡಲಾರರು. ಯಾರಾದರೂ ಸಿಟ್ಟಿನಿಂದಲೂ ಉದ್ಧಟತನದಿಂದಲೂ ಅವರೆದುರಿಗೆ ಬಂದರೆ ಅವರು ಅದಕ್ಕೆ ಪ್ರೀತಿ ಮತ್ತು ಶಾಂತಿಯ ಉತ್ತರ ನೀಡುತ್ತಾರೆ. ಅವರು ಬೈಗಳಿಗೆ ಮತ್ತು ಶಾಪ ವಚನಗಳಿಗೆ ವಿರುದ್ಧವಾಗಿ ಪ್ರಾರ್ಥನೆಯ ಮೂಲಕ ಉತ್ತರ ನೀಡುತ್ತಾರೆ. ಅವರು ಪರಮ ದಯಾಮಯನಾದ ದೇವನ ಗುಣಗಳನ್ನು ತಮ್ಮಲ್ಲಿ ಅಳವಡಿಸಿಕೊಂಡು ಹೀಗೆ ವರ್ತಿಸುತ್ತಾರೆ. ಅವರು ಅನ್ಯರೆಲ್ಲರಿಗೆ ಉಪಕಾರ ನೀಡಲು ಉದ್ಯುಕ್ತರಾಗುತ್ತಾರೆ. ಅವರ ಹಿತ ಬಯಸುತ್ತಾರೆ. ದೇವನ ಕರುಣೆ ಮತ್ತು ಔದಾರ್ಯ ಬಹಳ ವಿಶಾಲವಾಗಿದೆ ಎಂದು ನಾನು ಇದರ ಮೊದಲು ವಿವರಿಸಿರುವೆನು. ಆದುದರಿಂದ ದೇವನನ್ನು ನಂಬುವವರು ಅನ್ಯರೊಂದಿಗೆ ಬಹಳ ಕರುಣೆಯಿಂದಲೂ ಔದಾರ್ಯದಿಂದಲೂ ವರ್ತಿಸುತ್ತಾರೆ. ನಿಶ್ಚಯವಾಗಿಯೂ ಪರಮ ದಯಾವಂತನ ಭಕ್ತರು ಹೀಗೆಯೇ ಆಗಬೇಕಾಗಿದೆ.

ಸೃಷ್ಟಿಕರ್ತನಾದ ದೇವನ ಮೂರನೆಯ ಗುಣವಿಶೇಷ "ಅರ್ರಹೀಮ್" ಎಂದಾಗಿದೆ. ಕಾರುಣ್ಯನಿಧಿ ಎಂದು ಇದರ ಅರ್ಥ.

ಅಲ್ಲಾಹನು ತನ್ನ ಅರ್‌ರ್‍ಹ್ಮಾನ್ ಎಂಬ ಗುಣವಿಶೇಷ ಪ್ರಕಾರ ಎಲ್ಲ ಜನರು ಸಮಾನವಾಗಿ ತನ್ನ ಅನುಗ್ರಹಗಳನ್ನು ಅನುಭವಿಸುವಂತೆ ಮಾಡುತ್ತಾನೆ. ಆದರೆ ಅರ್‌ರಹೀಮ್ ಎಂಬ ಗುಣವಿಶೇಷದ ಪ್ರಕಾರ ಪ್ರತಿಯೊಬ್ಬ ವ್ಯಕ್ತಿಗೆ ಅವನು ಮಾಡಿದ ಕೆಲಸಕ್ಕೆ ಅನುಯೋಜ್ಯವಾಗಿ ಪ್ರತಿಫಲ ನೀಡುತ್ತಾನೆ. ತನ್ನ ಆಜ್ಞೆಗಳನ್ನು ಪಾಲಿಸುವವನಿಗೆ ಅಲ್ಲಾಹನು ಉತ್ತಮ ಪ್ರತಿಫಲ ನೀಡುತ್ತಾನೆ. ಸಾತ್ವಿಕನಾಗಿ ವರ್ತಿಸುವವನಿಗೆ ಅವನ ಸದಾಚಾರಗಳಿಗೆ ಅನುಸಾರವಾಗಿ ಅತ್ಯುತ್ತಮ ಪ್ರತಿಫಲವನ್ನು ಅಲ್ಲಾಹನು ನೀಡುತ್ತಾನೆ. ಸಹಾನುಭೂತಿ ಮತ್ತು ಕರುಣೆಯನ್ನು ಹೊಂದಿದ ಅಲ್ಲಾಹನು ಕುಂದುಕೊರತೆಗಳನ್ನು ಕಡೆಗಣಿಸಿ ಮನುಷ್ಯನು ಮಾಡುವ ಸತ್ಕರ್ಮಗಳಿಗೆ ಉತ್ತಮ ಪ್ರತಿಫಲ ನೀಡುತ್ತಾನೆ. ದೇವನೊಂದಿಗೆ ಬಲಿಷ್ಠವಾದ ಸಂಬಂಧವನ್ನು ಹೊಂದಿದ ಮನುಷ್ಯನಿಗೆ ಅಲ್ಲಾಹನು ಪವಾಡ ಸದೃಶವಾಗಿ ಪಾರಿತೋಷಕಗಳನ್ನು ನೀಡುತ್ತಾನೆ ಮತ್ತು ಅವನ ಪ್ರಾರ್ಥನೆಗಳಿಗೆ ಉತ್ತರ ಕೊಟ್ಟು ಪವಾಡಗಳನ್ನು ಪ್ರಕಟಿಸುತ್ತಾನೆ. ಅಹ್ಮದೀ ಮುಸ್ಲಿಮರಾದ ನಾವು ದೇವನು ಪ್ರಕಟಿಸುವ ಪವಾಡಗಳನ್ನು ಕಾಣುತ್ತಾ ಇರುತ್ತೇವೆ. ಉದಾಹರಣೆಗೆ, ಅನೇಕ ಸಂದರ್ಭಗಳಲ್ಲಿ ಡಾಕ್ಟರ್‌ಗಳು ರೋಗಿಯ ರೋಗೋಪಶಮನದ ಬಗ್ಗೆ ನಿರಾಶರಾಗಿ ರೋಗಿ ಮೃತನಾಗಲಿರುವನೆಂದು ಹೇಳಿದಾಗ, ಅಹ್ಮದಿಯರು ದೇವನ ಮುಂದೆ ಸಾಷ್ಟಾಂಗ ಪ್ರಣಾಮಮಾಡಿ ಬೇಡಿಕೊಂಡಾಗ, ಕರುಣಾನಿಧಿಯಾದ ದೇವನು ರೋಗವನ್ನು ಗುಣಪಡಿಸಿರುವನು. ನಾನು ಇದರ ಮೊದಲು ಒಬ್ಬ ಅಹ್ಮದೀ ಮಹಿಳೆಯು ಕ್ಯಾನ್ಸರ್ ರೋಗದಿಂದ ಮುಕ್ತಳಾದ ಬಗ್ಗೆ ವಿವರಿಸಿರುವೆನು. ಇಂತಹ ಘಟನೆಗಳು ಸಂಭವಿಸಿದಾಗ ಡಾಕ್ಟರ್‌ಗಳು ಆಶ್ಚರ್ಯಚಕಿತರಾಗುತ್ತಾರೆ ಮತ್ತು ಅದೊಂದು ನಿಜವಾದ ಪವಾಡ ಎಂದು ಒಪ್ಪಿಕೊಳ್ಳುತ್ತಾರೆ. ಇಂತಹ ಪವಾಡಗಳನ್ನು ದೇವನು ಪ್ರಕಟಿಸುತ್ತಾನೆಂದು ನಾವು ನಂಬುತ್ತೇವೆ. ಇಂತಹ ಜೀವಂತ ದೇವನನ್ನು ಇಸ್ಲಾಮ್ ಜನರ ಮುಂದೆ ಪ್ರಕಟಿಸುತ್ತದೆ. ದೇವನ ಈ ಗುಣದ ಕಾರಣದಿಂದ ನಮ್ಮ ವಿಶ್ವಾಸ ದೃಢಗೊಳ್ಳುತ್ತದೆ. ನಮ್ಮ ಪ್ರಾರ್ಥನೆಗಳಿಗೆ ಉತ್ತರ ನೀಡಿ ದೇವನೇ ಅವನ ಅಸ್ತಿತ್ವದ ಬಗ್ಗೆ ನಮ್ಮ ವಿಶ್ವಾಸವನ್ನು ಬಲಪಡಿಸುತ್ತಾನೆ.

ಇಸ್ಲಾಮ್ ಧರ್ಮತತ್ವಗಳ ಪ್ರಕಾರ ಸೃಷ್ಟಿಕರ್ತನಾದ ದೇವನ ನಾಲ್ಕನೆಯ ಪ್ರಮುಖ ಗುಣವಿಶೇಷ ಅರಬಿಭಾಷೆಯಲ್ಲಿ "ಮಾಲಿಕ್ ಯೌಮಿದ್ದೀನ್" (ನ್ಯಾಯವಿಚಾರಣೆ ದಿನದ ಅಧಿಪತಿ) ಎಂದಾಗಿದೆ. ಅವನು ಶಿಕ್ಷೆ ಮತ್ತು ಬಹುಮಾನದ ತೀರ್ಪು ನೀಡಲು ಸಂಪೂರ್ಣ ಅಧಿಕಾರ ಹೊಂದಿದವನಾಗಿದ್ದಾನೆ. ಅವನು ಪರಲೋಕದಲ್ಲಿ ತೀರ್ಪು ನೀಡುವವನು ಮಾತ್ರವಲ್ಲ, ಅವನು ಇಹಲೋಕದಲ್ಲಿ ಸಹ ಶಿಕ್ಷೆ ಮತ್ತು ಬಹುಮಾನ ನೀಡುವವನಾಗಿದ್ದಾನೆ. ಮನುಷ್ಯರು ಇಹಲೋಕದಲ್ಲಿ ಮಾಡಿದ ಕೆಲಸಗಳ ಬಗ್ಗೆ ಪರಲೋಕದಲ್ಲಿ ಪ್ರಶ್ನಿಸಲ್ಪಡುವರು. ಅವರು ಮಾಡಿದ ಒಳ್ಳೆಯ ಕೆಲಸಗಳಿಗೋಸ್ಕರ ಅವರಿಗೆ ಬಹುಮಾನ ಸಿಗುವುದು. ಅವರು ಮಾಡಿದ ಕೆಟ್ಟಕೆಲಸಗಳ ಕಾರಣ ಅವರು ಶಿಕ್ಷಿಸಲ್ಪಡುವರು. ಲೌಕಿಕ ನ್ಯಾಯತೀರ್ಮಾನ ವ್ಯವಸ್ಥೆಯಲ್ಲಿ ಬಹುಮಾನ ಮತ್ತು ಶಿಕ್ಷೆ ಪರಿಪೂರ್ಣವಾಗಿ ಸಮಾನವಾಗಿ ನೀಡಲಾಗುತ್ತಿದೆ. ಆದರೆ ಇಸ್ಲಾಮ್ ಧರ್ಮ ತತ್ವದ ಪ್ರಕಾರ, ಸರ್ವಶಕ್ತನಾದ ದೇವನು ಎಲ್ಲ ವಿಷಯಗಳಲ್ಲಿ ಪರಮಾಧಿಕಾರ ಹೊಂದಿರುವುದರಿಂದ ಅವನು ಪ್ರತಿಯೊಂದು ಕೆಟ್ಟಕೆಲಸಕ್ಕೆ ಶಿಕ್ಷೆ ನೀಡಲೇ ಬೇಕೆಂಬ ತತ್ವಕ್ಕೆ ಬದ್ಧನಾಗಿರಬೇಕಾಗಿಲ್ಲ. ದೇವನು ಅಪರಿಮಿತ ದಯಾವಂತನೂ ಕರುಣಾನಿಧಿಯೂ ಆಗಿರುವುದರಿಂದ ಒಬ್ಬನು ಅನೇಕ ಪಾಪಗಳನ್ನು ಮಾಡಿದ್ದರೂ ಅವನು ಮಾಡಿದ ಒಂದು ಸತ್ಕರ್ಮದ ಕಾರಣದಿಂದ ಅವನ ಎಲ್ಲ ಪಾಪಕೃತ್ಯಗಳನ್ನು ಕ್ಷಮಿಸಬಹುದಾಗಿದೆ. ಇದರ ಬಗ್ಗೆ ಹಝ್ರತ್ ಮುಹಮ್ಮದ್ ಪೈಗಂಬರರು(ಸ) ಹೀಗೆ ಹೇಳಿದ್ದಾರೆ: ಒಬ್ಬನು 100 ಜನರನ್ನು :ಕೊಂದ ನಂತರ ತನ್ನ ಪಾಪಗಳ ಬಗ್ಗೆ ಪಶ್ಚಾತ್ತಾಪಗೊಂಡು, ಸರಿಯಾದ ರೀತಿಯಲ್ಲಿ ದೇವನನ್ನು ಬೇಡಿಕೊಳ್ಳುವ ಬಗ್ಗೆ ಪ್ರಯಾಣ ಬೆಳೆಸಿದನು. ಆದರೆ ಅವನು ತನ್ನ ಪ್ರಯಾಣದ ಮಧ್ಯೆ ಮೃತನಾದನು. ಅವನು ಪಶ್ಚಾತ್ತಾಪಗೊಂಡು ಪ್ರಾಯಶ್ಚಿತ್ತ ಮಾರ್ಗವನ್ನು ಹುಡುಕಲು ಹೊರಟ ಕಾರಣ ಸರ್ವಶಕ್ತನು ಅವನ ಪಾಪಕೃತ್ಯಗಳನ್ನು ಕ್ಷಮಿಸಿ ಸ್ವರ್ಗಕ್ಕೆ ಪ್ರವೇಶ ನೀಡಿದನು. ಈ ಸಂದರ್ಭದಲ್ಲಿ ಸರ್ವಶಕ್ತನ ಪರಮಾಧಿಕಾರ ಮತ್ತು ನ್ಯಾಯತೀರ್ಮಾನದ ಅಧಿಪತಿ ಆಗಿರುವಿಕೆ ಕಾರ್ಯಪ್ರವೃತ್ತವಾದುವು. ಇಹಲೋಕ ಜೀವಿತದಲ್ಲಿ ಮನುಷ್ಯನು, ಮಾಡುವ ಅನೇಕ ತಪ್ಪುಗಳನ್ನು ಸರ್ವಶಕ್ತನಾದ ದೇವನು ಕಡೆಗಣಿಸುತ್ತಾನೆ ಮತ್ತು ಅವುಗಳ ದೋಷಕರವಾದ ಪರಿಣಾಮಗಳಿಂದ ರಕ್ಷಿಸುತ್ತಾನೆ. ಸರ್ವಶಕ್ತನು ಅಪರಿಮಿತ ದಯಾವಂತನೂ ಕಾರುಣ್ಯನಿಧಿಯೂ ಆಗಿರುವ ಕಾರಣ ಮನುಷ್ಯನು ಮಾಡಿದ ತಪ್ಪುಗಳ ಕಾರಣ ಅವನಿಗೆ ಹಾನಿ ಉಂಟಾಗುವುದಕ್ಕೆ ಬದಲಾಗಿ ಅವನಿಗೆ ಅವುಗಳಿಂದ ಹಿತಕರವಾದ ಪರಿಣಾಮ ಉಂಟಾಗುವ ಹಾಗೆ ಸಹ ಕೆಲವು ಸಲ ಮಾಡುತ್ತಾನೆ. ಇದು ಮಾನವ ನಿರ್ಮಿತ ನಿಯಮಗಳು ಮತ್ತು ದೇವ ನಿರ್ಮಿತ ನಿಯಮಗಳ ವ್ಯತ್ಯಾಸವಾಗಿದೆ. ಮಾನವ ನಿರ್ಮಿತ ನಿಯಮಗಳ ಪ್ರಕಾರ ತಪ್ಪು ಕೆಲಸಗಳಿಗೆ ಅನಿವಾರ್ಯವಾಗಿ ಶಿಕ್ಷೆ ಲಭಿಸುತ್ತದೆ.

ಪವಿತ್ರ ಖುರ್‌ಆನ್‌ನಲ್ಲಿ ದೇವನು ಮೇಲೆ ವಿವರಿಸಿದ ನಾಲ್ಕು ಪ್ರಮುಖ ಗುಣವಿಶೇಷಗಳನ್ನು ತನ್ನ ಅಸ್ತಿತ್ವಕ್ಕೆ ಸಾಕ್ಷ್ಯವಾಗಿ ವಿವರಿಸಿದ್ದಾನೆ. ಇಂತಹ ಗುಣವಿಶೇಷಗಳನ್ನು ಹೊಂದಿರುವ ದೇವನನ್ನು ಆರಾಧಿಸಲು ನಮಗೆ ಆಜ್ಞಾಪಿಸಲಾಗಿದೆ. ಇಂತಹ ಗುಣವಿಶೇಷಗಳನ್ನು ಹೊಂದಿರುವ ದೇವನನ್ನು ನಿಷ್ಠೆಯಿಂದ ಆರಾಧಿಸಲು ತೊಡಗಿದರೆ ಹಾಗೆ ಆರಾಧಿಸುವವನು ದೇವನ ಅಸ್ತಿತ್ವದ ಬಗ್ಗೆ ಅದ್ಭುತ ದೃಷ್ಟಾಂತಗಳನ್ನು ಹೊಸ ರೀತಿಯಲ್ಲಿ ದರ್ಶಿಸುವನು.

ದೇವನ ಗುಣವಿಶೇಷಗಳನ್ನು ಮನುಷ್ಯರು ಸಹ ತಮ್ಮಲ್ಲಿ ಅಳವಡಿಸಿಕೊಳ್ಳಲು ಪರಿಶ್ರಮಿಸಬೇಕೆಂದು ಆಜ್ಞಾಪಿಸಲಾಗಿದೆ. ಹೀಗೆ ಮಾಡುವಾಗ ನಿಷ್ಠಾವಂತನಾದ ಮುಸ್ಲಿಮನು ದೇವನೊಂದಿಗೆ ನಿಕಟ ಸಂಬಂಧ ಸ್ಥಾಪಿಸುತ್ತಾನಲ್ಲದೆ ಅವನು ಲೋಕದಲ್ಲಿ ಶಾಂತಿ ಮತ್ತು ಸೌಹಾರ್ದ ಸ್ಥಾಪಿಸಲು ಸಹಕರಿಸುವವನೂ ಆಗುತ್ತಾನೆ.

ಇಸ್ಲಾಮ್ ಪ್ರತಿಪಾದಿಸುವ ದೇವನ ಬಗ್ಗೆ ನೀವು ತಕ್ಕಮಟ್ಟಿಗೆ ನನ್ನ ವಿವರಣೆಗಳ ಮೂಲಕ ಮನವರಿಕೆ ಮಾಡಿರಬಹುದೆಂದು ನಾನು ಪ್ರತೀಕ್ಷಿಸುತ್ತೇನೆ. ನೀವೆಲ್ಲರೂ ಇಲ್ಲಿಗೆ ಆಗಮಿಸಿ ನಮ್ಮೊಂದಿಗೆ ಸೇರಿದ ಕಾರಣ ನಿಮಗೆಲ್ಲರಿಗೂ ನಾನು ಹಾರ್ದಿಕ ಕೃತಜ್ಞತೆಗಳನ್ನು ಅರ್ಪಿಸುತ್ತೇನೆ. ಅಲ್ಲಾಹನು ನಿಮಗೆಲ್ಲರಿಗೂ ಅನುಗ್ರಹ ನೀಡುವವನಾಗಲಿ. ನಿಮಗೆ ಬಹಳ ಧನ್ಯವಾದಗಳು.

****

(ಭಾಷಾಂತರ : ಯಮ್. ಉಬೈದುಲ್ಲಾ.The Review of Religions, ಅಕ್ಟೋಬರ್ 2013 ಸಂಚಿಕೆಯಿಂದ)

# ಖತ್‌ಮೆನುಬುವ್ವತ್ (ಪ್ರವಾದಿತ್ವ ಪರಿಸಮಾಪ್ತಿ) ಮತ್ತು ಅಹ್ಮದಿಯಾ ಜಮಾಅತ್

ಅಹ್ಮದಿಯಾ ಜಮಾಅತ್ ಸ್ಥಾಪಿತವಾದ ಪ್ರಾರಂಭದ ಕಾಲದಲ್ಲಿ ಅಹ್ಮದಿಯೇತರ ವಿದ್ವಾಂಸರು ಹಝ್ರತ್ ಈಸಾ ಮಸೀಹ್ ಅಲೈಹಿಸ್ಸಲಾಮರು ಮೃತರಾದ ಬಗ್ಗೆ ಪ್ರತಿವಾದ ಮಾಡುತ್ತಿದ್ದರು. ಅಹ್ಮದಿಯಾ ಜಮಾಅತ್ ಸತ್ಯವೋ ಅಲ್ಲವೋ ಎಂಬುದು ಈ ವಿಷಯದ ಬಗ್ಗೆ ತೀರ್ಪನ್ನು ಅವಲಂಬಿಸಿದೆ ಎಂದು ಅವರು ಪ್ರತಿಪಾದಿಸುತ್ತಿದ್ದರು. ಪವಿತ್ರ ಖುರ್‌ಆನ್ ಮತ್ತು ಹದೀಸುಗಳ ಮೂಲಕ ಈ ವಿಷಯ ಸಾಬೀತಾಗುತ್ತದೆಯೋ ಇಲ್ಲವೋ ಎಂಬುದು ಚರ್ಚೆಯ ವಿಷಯವಾಗಿತ್ತು. ಆದರೆ ಈಗ ಈ ವಿಷಯ ಎಷ್ಟು ಸ್ಪಷ್ಟವಾಗಿದೆ ಎಂದರೆ ದೊಡ್ಡ ದೊಡ್ಡ ಅಹ್ಮದಿಯೇತರ ವಿದ್ವಾಂಸರು ಅಹ್ಮದಿಯಾ ಜಮಾಅತಿನ ಪ್ರತಿಪಾದನೆಯನ್ನು ಸರಿ ಎಂದು ಪವಿತ್ರ ಖುರ್‌ಆನ್ ಮತ್ತು ಹದೀಸುಗಳ ಬೆಳಕಿನಲ್ಲಿ ಮನವರಿಕೆ ಮಾಡಿಕೊಂಡು ಹಝ್ರತ್ ಈಸಾಮಸೀಹ್(ಅ) ಮೃತರಾಗಿರುವರೆಂದು ಒಪ್ಪಿಕೊಂಡಿದ್ದಾರೆ. ಉದಾಹರಣೆಗೆ, ಈಜಿಪ್ಟಿನ ಅಲ್ ಅಝ್‌ಹರ್ ವಿಶ್ವವಿದ್ಯಾಲಯದ ಮಜ್ಲಿಸೆ ಇಫ್ತಾ (ತೀರ್ಪು ನೀಡುವ ಮಂಡಳಿ) ಇದರ ಅತ್ಯಂತ ಹಿರಿಯ ಸದಸ್ಯರಾಗಿದ್ದ ಅಲ್ಲಾಮ ಮಹ್‌ಮೂದ್ ಶಲ್‌ತೂತ್ ಈ ವಿಷಯದ ಬಗ್ಗೆ ನೀಡಿದ ತೀರ್ಪು ಸಾಕಷ್ಟಾಗಿದೆ. ಹಝ್ರತ್ ಈಸಾ ಮಸೀಹ್(ಅ) ಮೃತರಾಗಿರುವರೆಂದು ಸಾಬೀತುಗೊಳಿಸಲು ಅಹ್ಮದಿಯಾ ಜಮಾಅತ್ ಪ್ರಸ್ತಾಪಿಸುತ್ತಿರುವ ಸಾಕ್ಷ್ಯಾಧಾರಗಳನ್ನು ಅವರು ಅಂಗೀಕರಿಸಿರುವರು.

ಹಿಂದೂಸ್ಥಾನದ ಅಹ್ಮದಿಯೇತರ ವಿದ್ವಾಂಸರು ಸಾಮಾನ್ಯವಾಗಿ ಅಹ್ಮದಿಯಾ ಜಮಾಅತ್‌ನೊಂದಿಗೆ ಈ ವಿಷಯಕ್ಕೆ ಸಂಬಂಧಿಸಿ ಚರ್ಚೆ ಮಾಡುವುದರಿಂದ ತಪ್ಪಿಸಿಕೊಳ್ಳಲು ಪ್ರಯತ್ನಿಸುತ್ತಾರೆ. ಅವರು ತಮ್ಮ ಅಭಿಮಾನವನ್ನು ಕಾಪಾಡಲು ಮತ್ತು ಜನರು ಅಹ್ಮದಿಯಾ ಜಮಾಅತ್ ಕಡೆಗೆ ಗಮನ ಕೊಡದಂತೆ ಮಾಡಲು ಸ್ಪಷ್ಟ ಶಬ್ದಗಳಲ್ಲಿ ಹಝ್ರತ್ ಈಸಾಮಸೀಹ್(ಅ) ನಿಧನ ಹೊಂದಿರುವರೆಂದು ಹೇಳಲು ಧೈರ್ಯ ಪಡುವುದಿಲ್ಲವಾದರೂ ಅವರು ಸಾಮಾನ್ಯವಾಗಿ ಈ ವಿಷಯದ ಬಗ್ಗೆ ಚರ್ಚಿಸುವುದರಿಂದ ದೂರಸರಿಯಲು "ಈ ವಿಷಯ ಮಿರ್ಝಾ ಸಾಹಿಬರ ಸತ್ಯತೆಯೊಂದಿಗೆ ಯಾವ ಸಂಬಂಧವನ್ನೂ ಹೊಂದಿಲ್ಲ" ಎಂದು ಹೇಳುತ್ತಾರೆ. ಈ ವಿಷಯದ ಬಗ್ಗೆ ಚರ್ಚಿಸಲು ಅವರಿಗೆ ಧೈರ್ಯವಿಲ್ಲವೆಂದು ಅವರ ಈ ಮಾತಿನಿಂದ ಸ್ಪಷ್ಟವಾಗುತ್ತಿದೆ. ವಾಸ್ತವಿಕವಾಗಿ ಈ ವಿಷಯವು ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರ ಸತ್ಯತೆಯೊಂದಿಗೆ ಹಿಂದೆ ಸಂಬಂಧ ಹೊಂದಿದ ಹಾಗೆಯೇ ಇಂದು ಸಹ ಅದೇ ರೀತಿಯ ಸಂಬಂಧ ಹೊಂದಿದೆ. ಹಝ್ರತ್ ಈಸಾ ಮಸೀಹ್(ಅ) ನಿಧನ ಹೊಂದಿದ ವಿಷಯಕ್ಕೆ ಸಂಬಂಧಿಸಿ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರೊಂದಿಗೆ ಲುಧಿಯಾನದಲ್ಲಿ ಮೌಲವಿ ಮುಹಮ್ಮದ್ ಹುಸ್ಸೈನ್ ಬಟಾಲವಿ ಮತ್ತು ದೆಹಲಿಯಲ್ಲಿ ಮೌಲವಿ ಮುಹಮ್ಮದ್ ಬಶೀರ್ ಭೋಪಾಲಿ ಬಹಳ ಗಂಭೀರವಾಗಿ ವಾದವಿವಾದ ನಡೆಸಿದುದು ಅಹ್ಮದಿಯಾ ಜಮಾಅತ್‌ನೊಂದಿಗೆ ಹಝ್ರತ್ ಈಸಾ ಮಸೀಹರ ಮೃತ್ಯುವಿನ ವಿಷಯ ಪ್ರಮುಖ ಸಂಬಂಧವನ್ನು ಹೊಂದಿದುದರ ಕಾರಣದಿಂದ ಆಗಿದೆ ಎಂಬುದು ಸ್ಪಷ್ಟವಾಗುತ್ತದೆ. ಆದರೆ ಈಗ ಈ ವಿಷಯಕ್ಕೆ ಸಂಬಂಧಿಸಿದ ಚರ್ಚೆಗಳಿಂದ ತಪ್ಪಿಸಿಕೊಳ್ಳಲು ಅಹ್ಮದಿಯೇತರ ವಿದ್ವಾಂಸರು ನೆವನಗಳನ್ನು ಮುಂದಿಡುತ್ತಿದ್ದಾರೆ. ವಾಸ್ತವಿಕ ವಿಷಯವೇನೆಂದರೆ, ಈ ವಿಷಯಕ್ಕೆ ಸಂಬಂಧಿಸಿದ ಚರ್ಚೆಗಳಲ್ಲಿ ಅಹ್ಮದಿಯೇತರ ವಿದ್ವಾಂಸರು ಸೋತು ಹೋಗಿ ತಮ್ಮ ನಿಲುವನ್ನು ಬದಲಾಯಿಸಿದ್ದಾರೆ. ಇದು ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರ ಮಹತ್ವಪೂರ್ಣ ವಿಜಯವೇ ಆಗಿದೆ.

ಹಝ್ರತ್ ಮಸೀಹ್ ಮೌಊದ್‌ರಿಗೆ(ಅ) ಅಲ್ಲಾಹನಿಂದ ಹೀಗೆ ಸಂದೇಶವಾಣಿ ಲಭಿಸಿತ್ತು:

"ನನಗೆ ಜಯಲಭಿಸಿದೆ. ನಾನು ಜಯಶಾಲಿಯಾದೆ." ಈ ಸಂದೇಶವಾಣಿ ಇತರ ಅನೇಕ ರೀತಿಗಳಲ್ಲಿ ಈಡೇರಿ ಅದರ ಸತ್ಯತೆಯನ್ನು ಬಹಿರಂಗಗೊಳಿಸಿದೆ. ಆದರೆ ಹಝ್ರತ್ ಈಸಾ ಮಸೀಹರ(ಅ) ನಿಧನಕ್ಕೆ ಸಂಬಂಧಿಸಿ ಇದು ಎಷ್ಟು ಸ್ಪಷ್ಟವಾಗಿ ಈಡೇರಿದೆ ಎಂದರೆ ಒಬ್ಬ ಸಾಮಾನ್ಯ ಜ್ಞಾನವುಳ್ಳ ಮನುಷ್ಯನು ಕೂಡ ಅದರ ಬಗ್ಗೆ ಆಶ್ಚರ್ಯಗೊಂಡು ಅದರಿಂದ ಮಾರ್ಗದರ್ಶನ ಗಳಿಸಬಹುದಾಗಿದೆ.

ಹಝ್ರತ್ ಈಸಾ ಮಸೀಹರ(ಅ) ಮೃತ್ಯುವಿಗೆ ಸಂಬಂಧಿಸಿದ ಕ್ಷೇತ್ರದಲ್ಲಿ ಸೋತು ಹೋದ ವಿದ್ವಾಂಸರು ಅಹ್ಮದಿಯಾ ಜಮಾಅತಿನ ವಿರುದ್ಧ ತಮ್ಮ ಅತ್ಯಂತ ಬಲಿಷ್ಠ ಆಕ್ರಮಣಕ್ಕೆ ಖತ್‌ಮೆನುಬುವ್ವತ್ ವಿಷಯವನ್ನು ಪ್ರಯೋಗಿಸುತ್ತಿದ್ದಾರೆ. ಅವರು ಈ ವಿಷಯಕ್ಕೆ ಸಂಬಂಧಿಸಿದ ಚರ್ಚೆಗಳಿಂದಲೂ ಓಡಿ ಹೋಗುವ ದಿನವು ಬರಲಿದೆ. ಏಕೆಂದರೆ, ಈ ವಿಷಯಕ್ಕೆ ಸಂಬಂಧಿಸಿದ ಚರ್ಚೆಗಳಲ್ಲಿ ಅಹ್ಮದಿಯಾ ಜಮಾಅತ್ ವಿರುದ್ಧ ಸುಳ್ಳು ಸುಳ್ಳಾದ ಆಪಾದನೆಗಳನ್ನು ಮಾಡುತ್ತಿದ್ದಾರೆ. ಅವರು ಆಪಾದಿಸುವ ನಂಬಿಕೆಗಳನ್ನು ಅಹ್ಮದಿಯಾ ಜಮಾಅತ್ ಹೊಂದಿಲ್ಲ. ಯಾವುದೇ ಜಮಾಅತ್ ಹೊಂದಿರುವ ನಂಬಿಕೆಗಳನ್ನು ಸುಳ್ಳು ಸುಳ್ಳಾಗಿ ಆಪಾದಿಸುತ್ತಾ ಇದ್ದರೆ ಆಪಾದಿಸುವವರು ಹೆಚ್ಚು ಕಾಲ ಜಯಶಾಲಿಗಳಾಗಲಾರರು.

ಖತ್‌ಮೆ ನುಬುವ್ವತ್‌ಗೆ ಸಂಬಂಧಿಸಿ ಅಹ್ಮದಿಯಾ ಜಮಾಅತಿನ ನಿಲುವಿನ ಬಗ್ಗೆ ಕೆಲವು ವಿಶದೀಕರಣಗಳನ್ನು ನೀಡಲು ಬಯಸುತ್ತೇವೆ. ಅಹ್ಮದಿಯಾ ಜಮಾಅತ್ ಪ್ರತಿಪಾದಿಸುವುದು ವಿಚಾರಬದ್ಧವೂ ಸತ್ಯವೂ ಆಗಿದೆ ಮತ್ತು ಕಳೆದ ಹದಿನಾಲ್ಕು ನೂರು ವರ್ಷಗಳಲ್ಲಿ ಮುಸ್ಲಿಮ್ ಸಮುದಾಯದ ಮಹಾ ವಿದ್ವಾಂಸರು ಇದೇ ನಿಲುವನ್ನು ಹೊಂದಿದ್ದಾರೆಂದು ಸ್ಪಷ್ಟವಾಗುತ್ತದೆ.

ಮೊದಲನೆಯದಾಗಿ ಮನವರಿಕೆ ಮಾಡಬೇಕಾದ ವಿಷಯವೇನೆಂದರೆ, ಇಸ್ಲಾಮ್ ಧರ್ಮದ ಪ್ರಕಾರ "ನಬಿ" ಎಂದರೆ ಅಲ್ಲಾಹನಿಂದ ಅತ್ಯಧಿಕವಾಗಿ ಸಂದೇಶವಾಣಿಗಳನ್ನು ಗಳಿಸುವವನು. ಪವಿತ್ರ ಖುರ್‌ಆನ್ ಪ್ರಕಾರ ನುಬುವ್ವತ್ (ಪ್ರವಾದಿತ್ವ) ಮೂರು ವಿಧಗಳಲ್ಲಿವೆ. ಮೊದಲನೆಯದು, ತಶ್‌ರೀಈ ನುಬುವ್ವತ್ ಎಂದರೆ ಶರೀಅತ್ ಮತ್ತು ಹೊಸ ಆಜ್ಞೆಗಳನ್ನು ಹೊಂದಿರುವುದು. ಎರಡನೆಯದು

ಗೈರ್ ತಶ್‌ರೀಈ ನುಬುವ್ವತ್. ಅದರೊಂದಿಗೆ ಹೊಸ ಶರೀಅತ್ ಮತ್ತು ಹೊಸ ಆಜ್ಞೆಗಳು ಇರುವುದಿಲ್ಲ. ಗೈರ್ ತಶ್‌ರೀಈ ನುಬುವ್ವತ್ ಪಡೆದ ನಬಿ ತನಗಿಂತ ಮೊದಲು ಆಗಮಿಸಿದ ತಶ್‌ರೀಈ ನಬಿಯನ್ನು ಅನುಸರಿಸುವ ಸೇವಕ ಆಗಿರುತ್ತಿದ್ದರು. ಅವರು ತಮಗಿಂತ ಮೊದಲು ಆಗಮಿಸಿದ ತಶ್‌ರೀಈ ನಬಿಯ ಶರೀಅತ್ ಪ್ರಕಾರ ತೀರ್ಪುನೀಡುತ್ತಿದ್ದರು. ಇದರ ಬಗ್ಗೆ ಪವಿತ್ರ ಖುರ್‌ಆನ್ ಹೀಗೆ ಹೇಳಿದೆ: **ಇನ್ನಾ ಅನ್‌ಝಲ್‌ನತ್ತೌರಾತ ಫೀಹಾ ಹುದನ್ ವನೂರುನ್. ಯಹ್‌ಕುಮು ಬಿಹನ್ನಬಿಯ್ಯೂನಲ್ಲಧೀನ ಅಸ್‌ಲಮೂ.**

"ಮಾರ್ಗದರ್ಶನ ಮತ್ತು ಪ್ರಕಾಶದಿಂದ ಕೂಡಿದ್ದ ತೌರಾತನ್ನು ನಾವು ದಿಟವಾಗಿಯೂ ಅವತೀರ್ಣಗೊಳಿಸಿದ್ದೆವು. ಅದನ್ನನುಸರಿಸಿ (ಅಲ್ಲಾಹನಿಗೆ) ವಿಧೇಯರಾದ ಪ್ರವಾದಿಗಳು ತೀರ್ಪು ನೀಡುತ್ತಿದ್ದರು." (5:45)

ಈ ವಚನದಿಂದ ತಿಳಿಯುವುದೇನೆಂದರೆ, ಹಝ್ರತ್ ಮೂಸಾ ಅಲೈಹಿಸ್ಸಲಾಮರ ನಂತರ ಆಗಮಿಸಿದ ಅನೇಕ ಪ್ರವಾದಿಗಳು ಯಾವುದೇ ಹೊಸ ಶರೀಅತ್ ತಂದಿರಲಿಲ್ಲ. ಅವರು ಹಝ್ರತ್ ಮೂಸಾ ಅಲೈಹಿಸ್ಸಲಾಮರು ತಂದ ತೌರಾತ್ ಗ್ರಂಥದ ಪ್ರಕಾರ ತೀರ್ಪು ನೀಡುತ್ತಿದ್ದರು.

ಮೇಲೆ ವಿವರಿಸಿದ ಎರಡು ರೀತಿಯ ನುಬುವ್ವತ್‌ಗಳು ಎಂದರೆ ತಶ್‌ರೀಈ ಮತ್ತು ಗೈರ್ ತಶ್‌ರೀಈ ನುಬುವ್ವತ್‌ಗಳು ಹಝ್ರತ್ ಮುಹಮ್ಮದ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಆಗಮನದ ಮೊದಲು ಅಲ್ಲಾಹನಿಂದ ನೇರವಾಗಿ ಮತ್ತು ಹಿಂದೆ ಆಗಮಿಸಿದ ಪ್ರವಾದಿಯ ಮೂಲಕವಲ್ಲದೆ ಲಭಿಸುತ್ತಿದ್ದುವು. ಆದರೆ ಹಝ್ರತ್ ಮುಹಮ್ಮದ್ ರಸೂಲ್ ಸಲ್ಲಲ್ಲಾಹು ಅಲೈಹಿ ವ ಸಲ್ಲಮರು ಖಾತಮುನ್ನಬಿಯ್ಯೀನ್ ಆಗಿರುವ ಕಾರಣ ಮೇಲೆ ವಿವರಿಸಿದ ಎರಡು ರೀತಿಯ ನುಬುವ್ವತ್‌ಗಳ ಬಾಗಿಲುಗಳು ಮುಚ್ಚಲ್ಪಟ್ಟವು ಮತ್ತು ಮೂರನೆಯ ಒಂದು ರೀತಿಯ ನುಬುವ್ವತಿನ ಬಾಗಿಲು ತೆರೆಯಲ್ಪಟ್ಟಿತು. ಅದು ಗೈರ್ ತಶ್‌ರೀಈ ಝಿಲ್ಲೀ ನುಬುವ್ವತ್ ಆಗಿದೆ. ಅದು ತಶ್‌ರೀಈ ನುಬುವ್ವತ್ ಮತ್ತು ನೇರವಾಗಿ ಅಲ್ಲಾಹನಿಂದ ದೊರಕುವ ನುಬುವ್ವತ್‌ಗಿಂತ ಭಿನ್ನವಾದುದಾಗಿದೆ. ಅದು ಗೈರ್ ತಶ್‌ರೀಈ (ಶರೀಅತ್ ರಹಿತ) ಆಗಿದೆ ಮತ್ತು ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿವಸಮರನ್ನು ಅನುಸರಿಸಿದ ಕಾರಣ ಲಭಿಸುವಂತಹ ನುಬುವ್ವತ್ ಆಗಿದೆ. ಇದೇ ರೀತಿಯ ನುಬುವ್ವತ್ ಬಗ್ಗೆ ಅಲ್ಲಾಹನು ಪವಿತ್ರ ಖುರ್‌ಆನ್‌ನಲ್ಲಿ ಹೀಗೆ ಹೇಳಿದ್ದಾನೆ: **ವ ಮನ್ ಯುತಿಇಲ್ಲಾಹ ವ ರ್ರಸೂಲ ಫಉಲಾಯಿಕ ಮಅಲ್ಲಧೀನ ಅನ್‌ಅಮಲ್ಲಾಹು ಅಲೈಹಿಮ್ ಮಿನನ್ನಬಿಯ್ಯೀನ, ವಸ್ಸಿದೀಖೀನ ವಶ್ಶುಹದಾಇ ವಸ್ಸಾಲಿಹೀನ ವ ಹಸುನ ಉಲಾಯಿಕ ರಫೀಖ.**

"ಯಾರಾದರೂ ಅಲ್ಲಾಹನಿಗೆ ವಿಧೇಯರಾಗಿ ಈ ಸಂದೇಶವಾಹಕನನ್ನು ಅನುಸರಿಸಿದರೆ, ಅವರು ಅಲ್ಲಾಹನು ಅನುಗ್ರಹಿಸಿದ ಪ್ರವಾದಿಗಳು, ಸತ್ಯಸಂಧರು, ಹುತಾತ್ಮರು ಮತ್ತು ಸಜ್ಜನರಲ್ಲಿ ಸೇರುವರು. ಅವರು ಅತ್ಯುತ್ತಮ ಸಂಗಾತಿಗಳಾಗಿದ್ದಾರೆ." (4:70)

ಪವಿತ್ರ ಖುರ್‌ಆನಿನ ಈ ವಚನ ಹೀಗೆ ಸ್ಪಷ್ಟಪಡಿಸುತ್ತದೆ: ಹಝ್ರತ್ ಮುಹಮ್ಮದ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಆಗಮಿಸಿದ ನಂತರ ಹಝ್ರತ್ ಪೈಗಂಬರರನ್ನು ಅನುಸರಿಸುವ ಮೂಲಕ ಅವರ ಅನುಸರಣೆಯ ಕಾರಣದಿಂದ ದೊರಕುವ ನುಬುವ್ವತ್ ಮಾತ್ರ ಜಾರಿಯಾಗುವುದು. ಅಲ್ಲಾಹನು ಪವಿತ್ರ ಖುರ್‌ಆನ್ ಮೂಲಕ ಶರೀಅತನ್ನು ಪರಿಪೂರ್ಣಗೊಳಿಸಿದ ಕಾರಣ ಹೊಸ ಶರೀಅತ್ ಅವತೀರ್ಣವಾಗಲಾರದು. ಅಲ್ಲಾಹನಿಂದ ನೇರವಾಗಿ ಲಭಿಸುತ್ತಿದ್ದ ಗೈರ್ ತಶ್‌ರೀಈ (ಶರೀಅತ್ ರಹಿತ) ನುಬುವ್ವತ್ ಸಹ ಕೊನೆಗೊಂಡಿದೆ. ಏಕೆಂದರೆ ಖಾತಮುನ್ನಬಿಯ್ಯೀನ್ ಆಗಮಿಸಿದ ನಂತರ ಅಂತಹ ನಬಿ ಆಗಮಿಸುವುದು ಸಾಧ್ಯವಿಲ್ಲ. ಹಝ್ರತ್ ಮುಹಮ್ಮದ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರನ್ನು ಅನುಸರಿಸುವ ಮೂಲಕ ಹೊರತು ನುಬುವ್ವತ್ ಲಭಿಸಲಾರದು. ಖತ್‌ಮೆನುಬುವ್ವತ್ ಎಂಬುದರ ವಾಸ್ತವಿಕ ಅರ್ಥ ಇದೇ ಆಗಿದೆ. ಎಲ್ಲ ಪ್ರವಾದಿಗಳ ಮತ್ತು ಸಂದೇಶವಾಹಕರ ಮೇಲೆ ಹಝ್ರತ್ ಮುಹಮ್ಮದ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಪದವಿಯ ಶ್ರೇಷ್ಠತೆ ಇದರಿಂದ ಪ್ರಕಟವಾಗುತ್ತದೆ.

ತಶ್‌ರೀಈ ನುಬುವ್ವತ್ ಬಗ್ಗೆ ನಮ್ಮ ಮತ್ತು ಅಹ್ಮದಿಯೇತರ ಸಹೋದರರ ಮಧ್ಯೆ ಒಮ್ಮತವಿದೆ. ಹಝ್ರತ್ ಮುಹಮ್ಮದ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಆಗಮನದ ನಂತರ ಯಾವುದೇ ತಶ್‌ರೀಈ ಪ್ರವಾದಿ ಬರಲಾರರೆಂದು ನಾವು ಮತ್ತು ಅವರು ಒಮ್ಮತಾಭಿಪ್ರಾಯ ಹೊಂದಿದ್ದೇವೆ. ಆದರೆ ಗೈರ್ ತಶ್‌ರೀಈ ಮತ್ತು ಝಿಲ್ಲೀ ನುಬುವ್ವತ್ ಬಗ್ಗೆ ನಮ್ಮ ಮಧ್ಯೆ ಭಿನ್ನಾಭಿಪ್ರಾಯಗಳಿವೆ. ಅವರ ಅಭಿಪ್ರಾಯದಲ್ಲಿ ಗೈರ್ ತಶ್‌ರೀಈ ನುಬುವ್ವತ್ ಜಾರಿಯಲ್ಲಿದೆ. ಏಕೆಂದರೆ ಗೈರ್ ತಶ್‌ರೀಈ ನಬಿಯಾಗಿರುವ ಹಝ್ರತ್ ಈಸಾ ಅಲೈಹಿಸ್ಸಲಾಮ್ ಮುಂದೆ ಯಾವಾಗಲಾದರೂ ಆಕಾಶದಿಂದ ಇಳಿದು ಬರುವರು ಎಂದು ಅವರು ಹೇಳುತ್ತಾರೆ. ಆದರೆ ನಮ್ಮ ಅಭಿಪ್ರಾಯ ಪ್ರಕಾರ, ತಶ್‌ರೀಈ ನುಬುವ್ವತ್‌ನಂತೆಯೇ ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವ ಸಲ್ಲಮರ ಮೂಲಕ ದೊರಕದ ಗೈರ್ ತಶ್‌ರೀಈ ನುಬುವ್ವತ್ ಸಹ ಕೊನೆಗೊಂಡಿದೆ. ಹಝ್ರತ್ ಮುಹಮ್ಮದ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ನಂತರ ತಶ್‌ರೀಈ ನಬಿ ಬರಲು ಸಾಧ್ಯವಿಲ್ಲದ ಹಾಗೆಯೇ ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಅನುಸರಣೆಯ ಮೂಲಕ ಹೊರತು ಗೈರ್ ತಶ್‌ರೀಈ ನಬಿ ಸಹ ಬರಲು ಸಾಧ್ಯವಿಲ್ಲ.

ಮೂರನೆಯ ಝಿಲ್ಲೀ ನುಬುವ್ವತ್‌ಗೆ ಎರಡು ಶರತ್ತುಗಳಿವೆ.

1. ಆಗಮಿಸುವ ಪ್ರವಾದಿ ಶರೀಅತ್ ರಹಿತನಾಗಿ ಆಗಮಿಸಬೇಕು.
2. ಹಝ್ರತ್ ಮುಹಮ್ಮದ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರನ್ನು ಅನುಸರಿಸುವ ಮೂಲಕ ಅವರ ಕಾರಣದಿಂದ ನಬಿಯಾಗಿ ಆಗಮಿಸಬೇಕು.

ಇದೇ ಕಾರಣದಿಂದ ನಾವು ಹಝ್ರತ್ ಈಸಾ ಮಸೀಹ್[ಅ] ಆಗಮಿಸುವರೆಂದು ನಂಬುವುದಿಲ್ಲ. ಏಕೆಂದರೆ ಅವರಿಗೆ ನುಬುವ್ವತ್ ಹಝ್ರತ್ ಮುಹಮ್ಮದ್ ರಸೂಲ್ ಸಲ್ಲಲ್ಲಾಹು ಅಲೈಹಿ ವ ಸಲ್ಲಮರನ್ನು ಅನುಸರಿಸಿದ ನಂತರ ಅವರ ಮೂಲಕ ಲಭಿಸಿದುದಲ್ಲ. ಅವರಿಗೆ ನುಬುವ್ವತ್ ಲಭಿಸಿದುದು ಹಝ್ರತ್ ಮುಹಮ್ಮದ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಆಗಮನಕ್ಕಿಂತ ಆರುನೂರು ವರ್ಷ ಮೊದಲು ಅಲ್ಲಾಹನಿಂದ ನೇರವಾಗಿ ಆಗಿದೆ. ಹಝ್ರತ್ ಮುಹಮ್ಮದ್ ರಸೂಲ್ ಸಲ್ಲಲ್ಲಾಹು ಅಲೈಹಿ ಮಸಲ್ಲಮರು ತನ್ನ ಸಮುದಾಯದಲ್ಲಿ ಆಗಮಿಸುವ ಒಬ್ಬ ಮಸೀಹರ ಬಗ್ಗೆ ಹೇಳಿದುದು ಹದೀಸುಗಳಲ್ಲಿ

ಉಲ್ಲೇಖಿಸಲ್ಪಟ್ಟಿದೆ. ಹದೀಸು ಗ್ರಂಥವಾದ ಮುಸ್ಲಿಮ್ ಪ್ರಕಾರ ಆಗಮಿಸಲಿರುವ ಮಸೀಹರನ್ನು ನಬಿಯುಲ್ಲಾಹ್ (ಅಲ್ಲಾಹನ ನಬಿ) ಎಂದು ಕರೆಯಲಾಗಿದೆ. ಹೀಗೆ ಆಗಮಿಸುವ ಮಸೀಹ್ ಹಿಂದೆ ಆಗಮಿಸಿದ ಹಝ್ರತ್ ಈಸಾ ಮಸೀಹ್ ಅಲೈಹಿಸ್ಸಲಾಮರಲ್ಲ. ಮುಸ್ಲಿಮ್ ಸಮುದಾಯದಲ್ಲಿಯೇ ಜನಿಸುವ ಒಬ್ಬ ಪರಿಪೂರ್ಣ ಮನುಷ್ಯನ ಆಗಮನವನ್ನು ಈ ಹದೀಸಿನಲ್ಲಿ ಸೂಚಿಸಲಾಗಿದೆ. ಅವರು ಮೇಲೆ ವಿವರಿಸಿದ ನುಬುವ್ವತ್‌ಗಳಲ್ಲಿ ಮೂರನೆಯ ರೀತಿಯ ನುಬುವ್ವತ್ ಗಳಿಸುವರು.

ಇದು ಆಶ್ಚರ್ಯಕರವಾದ ವಿಷಯುವಲ್ಲವೇ? ನಮ್ಮ ಅಹ್ಮದಿಯೇತರ ಸಹೋದರರು ಹೇಳುತ್ತಾರೆ – ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಆಗಮನದ ನಂತರ ಬೇರೆ ಯಾವುದೇ ಪ್ರವಾದಿ ಬರಲು ಸಾಧ್ಯವಿಲ್ಲ ಎಂದು. ಇನ್ನೊಂದು ಕಡೆ, ಮುಸ್ತಖಿಲ್ (ಸ್ವತಂತ್ರ) ನಬಿಯಾದ ಹಝ್ರತ್ ಈಸಾ ಮಸೀಹ್ ಪುನರಾಗಮಿಸುವರು ಎಂದು ನಂಬುತ್ತಾರೆ. ಹಝ್ರತ್ ಈಸಾ ಮಸೀಹರಿಗೆ ನುಬುವ್ವತ್ ಹಝ್ರತ್ ಮುಹಮ್ಮದ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಮೂಲಕವಲ್ಲ, ನೇರವಾಗಿ ದೊರೆತುದಾಗಿದೆ. ಇಂತಹ ವಿಶ್ವಾಸ ಹೊಂದಿದ ನಂತರ ಸಹ, ಇಂತಹ ವಿಶ್ವಾಸ ಹೊಂದುವುದರಿಂದ ಹಝ್ರತ್ ಮುಹಮ್ಮದ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಖತ್‌ಮೆ ನುಬುವ್ವತ್‌ಗೆ ಯಾವ ವ್ಯತ್ಯಾಸವೂ ಉಂಟಾಗಲಾರದು ಎಂದು ಅವರು ಹೇಳುತ್ತಾರೆ. ಆದರೆ ಹಝ್ರತ್ ಮುಹಮ್ಮದ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರನ್ನು ಅನುಸರಿಸುವ ಮೂಲಕ, ಅವರ ಕಾರಣದಿಂದ ಲಭಿಸುವ ನುಬುವ್ವತ್ ಹೊರತು ಬೇರೆ ಎಲ್ಲ ನುಬುವ್ವತ್ ಕೊನೆಗೊಂಡಿದೆ ಎಂದು ನಾವು ಹೇಳುವಾಗ ನಮ್ಮ ವಿರುದ್ಧ, "ಈ ಜನರು ಹಝ್ರತ್ ಮುಹಮ್ಮದ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಖತ್‌ಮೆ ನುಬುವ್ವತನ್ನು ನಿರಾಕರಿಸುವವರು" ಎಂದು ಆರೋಪಿಸುತ್ತಾರೆ. ಈ ಜನರು ದೇವ ಭಯದೊಂದಿಗೆ, ಯಾರ ನಂಬಿಕೆಗಳ ಕಾರಣದಿಂದ ಖತ್‌ಮೆ ನುಬುವ್ವತ್ ಖಂಡಿತವಾಗಿ ನಿರಾಕರಿಸಲ್ಪಡುತ್ತದೆ ಎಂದು ಯೋಚಿಸುತ್ತಿದ್ದರೆ ಎಷ್ಟು ಚೆನ್ನಾಗಿತ್ತು!

ದುಃಖಕರವಾದ ವಿಷಯವೇನೆಂದರೆ, ಈ ಜನರು ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರ ವಿರುದ್ಧ ಅವರು ಗೈರ್‌ತಶ್‌ರೀಈ ಸ್ವತಂತ್ರ ನುಬುವ್ವತ್ ವಾದಿ ಎಂದು ಕೆಲವು ಸಾರಿ ಆರೋಪಿಸುತ್ತಾರೆ ಮತ್ತು ಕೆಲವು ಸಾರಿ, ಅವರು ತಶ್‌ರೀಈ ನುಬುವ್ವತ್ ವಾದ ಮಾಡುವುದಾಗಿ ಆರೋಪಿಸುತ್ತಾರೆ. ಅಹ್ಮದಿಯಾ ಜಮಾಅತಿನ ವಿರೋಧಿಗಳು ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರ ವಿರುದ್ಧ ಆರೋಪಿಸುತ್ತಿರುವ ಎರಡು ರೀತಿಯ ನುಬುವ್ವತ್‌ಗಳಲ್ಲಿ ಯಾವುದಾದರೂ ಒಂದು ರೀತಿಯ ನುಬುವ್ವತಿನ ವಾದ ಎಂದೂ ಅವರು ಮಾಡಿರಲಿಲ್ಲ. ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರ ನಂಬಿಕೆ ಏನೆಂದರೆ, ಇಂತಹ ಎರಡು ತರದ ನುಬುವ್ವತ್‌ಗಳು ಹಝ್ರತ್ ಮುಹಮ್ಮದ್ ರಸೂಲ್ ಸಲ್ಲಲ್ಲಾಹು ಅಲೈಹಿವಸಲ್ಲಮರ ಆಗಮನದ ಮೊದಲು ಜಾರಿಯಲ್ಲಿದ್ದವು. ಹಝ್ರತ್ ಪೈಗಂಬರರ ಆಗಮನದ ನಂತರ ಅವುಗಳು ಕೊನೆಗೊಂಡುವು. ಯಾರಾದರೂ ಈ ಎರಡು ತರದ ನುಬುವ್ವತ್‌ಗಳಲ್ಲಿ ಯಾವುದಾದರೊಂದರ ವಾದ ಮಾಡುವುದಾದರೆ ಅವನು ಕಾಫಿರ್ (ಅವಿಶ್ವಾಸಿ) ಮತ್ತು ಇಸ್ಲಾಮಿ ವಲಯದಿಂದ ಹೊರಗಾದವನು ಆಗಿದ್ದಾನೆ. ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಹೀಗೆ ಹೇಳುತ್ತಾರೆ:

1. ಶರೀಅತ್ ರಹಿತ ನುಬುವ್ವತ್ ನೇರವಾಗಿ ಹಿಂದೆ ಲಭಿಸುತ್ತಾ ಇದ್ದುದು ಈಗ ಕೊನೆಗೊಂಡಿದೆ. ಆದರೆ ಹಝ್ರತ್ ಮುಹಮ್ಮದ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ದೀಪದಿಂದ ಬೆಳಕನ್ನು ಗಳಿಸಿ ಹಝ್ರತ್ ಮುಹಮ್ಮದ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಉಮ್ಮತಿಯಾಗಿ (ಸಮುದಾಯಕ್ಕೆ ಸೇರಿದವನಾಗಿ) ಅವರ ನುಬುವ್ವತ್ ಪ್ರಕಾಶವನ್ನು ಪರಿಪೂರ್ಣವಾಗಿ ಗಳಿಸಿದವನಿಗೆ ಈ ನುಬುವ್ವತ್ ತಡೆಗಟ್ಟಲ್ಪಟ್ಟಿಲ್ಲ.

2. ಹಝ್ರತ್ ಮುಹಮ್ಮದ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರಿಗೆ ಒಂದು ವಿಶಿಷ್ಟ ಅಭಿಮಾನ ನೀಡಲಾಗಿದೆ. ಅವರು ಖಾತಮುಲ್ ಅಂಬಿಯಾ (ಪ್ರವಾದಿಗಳ ಮುದ್ರೆ) ಆದುದು ನುಬುವ್ವತ್‌ಗೆ ಸಂಬಂಧಿಸಿದ ಎಲ್ಲ ಅನುಗ್ರಹಗಳು ಅವರಿಗೆ ಪರಿಪೂರ್ಣವಾಗಿ ನೀಡಲ್ಪಟ್ಟುದರಿಂದಾಗಿದೆ. ಅವರ ನಂತರ ಹೊಸ ಶರೀಅತ್ ತರುವ ಪ್ರವಾದಿ ಇಲ್ಲ ಮತ್ತು ಅವರ ಉಮ್ಮತ್‌ಗೆ (ಸಮುದಾಯಕ್ಕೆ) ಸೇರದ ಪ್ರವಾದಿಯೂ ಬರಲಾರ.

(ಝಮೀಮ ಚಶ್ಮೆ ಮಅರಿಫತ್ – ಪುಟ 9)

3. ಇಸ್ಲಾಮ್‌ನೊಂದಿಗೆ ಯಾವುದೇ ಸಂಬಂಧ ಹೊಂದದಂತಹ ನುಬುವ್ವತ್‌ನ ವಾದವನ್ನು ನಾನು ಮಾಡುತ್ತೇನೆಂದೂ ಪವಿತ್ರ ಖುರ್‌ಆನನ್ನು ಅನುಸರಿಸುವ ಆವಶ್ಯಕತೆ ಇಲ್ಲದ ನುಬುವ್ವತ್ ವಾದ ನಾನು ಮಾಡುತ್ತೇನೆಂದೂ ಬೇರೆಯೇ ಕಲಿಮ ಮತ್ತು ಖಿಬ್ಲವನ್ನು ಮಾಡಿರುವೆನೆಂದೂ ಇಸ್ಲಾಮಿನ ಶರೀಅತನ್ನು ರದ್ದುಗೊಳಿಸಿರುವೆನೆಂದೂ ಹಝ್ರತ್ ಮುಹಮ್ಮದ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರನ್ನು ಅನುಸರಿಸುವುದರಿಂದ ನಾನು ಹೊರಗೆ ಹೋಗಿರುವೆನೆಂದೂ ನನ್ನ ಮೇಲೆ ತಪ್ಪು ಆರೋಪ ಮಾಡುತ್ತಾರೆ. ಇಂತಹ ನುಬುವ್ವತಿನ ವಾದಮಾಡುವುದು ನನ್ನ ದೃಷ್ಟಿಯಲ್ಲಿ ಕುಫ್ರ್ (ಅವಿಶ್ವಾಸ) ಆಗಿದೆ.

(ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರು ಲಾಹೋರಿನ "ಅಖ್‌ಬಾರೆ ಆಮ್" ಪತ್ರಕ್ಕೆ ಬರೆದ ಕೊನೆಯ ಪತ್ರ– 26–5–1908ರಂದು ಪ್ರಕಟವಾದುದು.)

4. ನನ್ನ ನುಬುವ್ವತ್ ವಾದದ ಅರ್ಥ ನಾನು ಹಝ್ರತ್ ಮುಹಮ್ಮದ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ವಿರುದ್ಧ ನುಬುವ್ವತ್ ವಾದ ಮಾಡುತ್ತೇನೆಂದು ಅಲ್ಲ ಅಥವಾ ಯಾವುದಾದರೂ ಹೊಸ ಶರೀಅತ್ ತಂದಿರುವೆನು ಎಂದಲ್ಲ. ಹಝ್ರತ್ ಮುಹಮ್ಮದ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರನ್ನು ಅನುಸರಿಸಿದ ಕಾರಣದಿಂದ ನನಗೆ ಬಹಳ ಹೆಚ್ಚಾಗಿ ದೇವ ಸಂದೇಶವಾಣಿಗಳು ಲಭಿಸಿವೆ ಎಂದು ನನ್ನ ನುಬುವ್ವತಿನ ಅರ್ಥವಾಗಿದೆ.

(ತತಿಮ್ಮ ಹಖೀಖತುಲ್ ವಹೀ – ಪುಟ 68)

ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರ ಈ ಹೇಳಿಕೆಗಳಿಂದ ಈ ಕೆಳಗಿನ ವಿಷಯಗಳು ಸ್ಪಷ್ಟವಾಗುತ್ತವೆ:

1. ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರ ನುಬುವ್ವತ್ ಹೊಸ ಶರೀಅತ್ ಒಳಗೊಂಡ ನುಬುವ್ವತ್ ಆಗಲಿ,

ನೇರವಾಗಿ ಲಭಿಸಿದ ಶರೀಅತ್ ರಹಿತ ಮುಸ್ತಖಿಲ್ (ಸ್ವತಂತ್ರ ) ನುಬುವ್ವತ್ ಆಗಲಿ ಅಲ್ಲ. ಅವರ ನುಬುವ್ವತ್ ಶರೀಅತ್ ರಹಿತ ಝಿಲ್ಲೀ ಅಥವಾ ಉಮ್ಮತೀ ನುಬುವ್ವತ್ ಆಗಿದೆ.

2. ಹಝ್ರತ್ ಮುಹಮ್ಮದ್ ರಸೂಲ್ ಸಲ್ಲಲ್ಲಾಹು ಅಲೈಹಿ ವ ಸಲ್ಲಮರು ಖಾತಮುನ್ನಬಿಯ್ಯೀನ್ ಆಗಿರುವುದರ ಅರ್ಥ ನುಬುವ್ವತಿನ ಎಲ್ಲ ಅನುಗ್ರಹಗಳು ಅವರಲ್ಲಿ ಪರಿಪೂರ್ಣವಾಗಿ ಅಡಕವಾಗಿವೆ. ಹೊಸ ಶರೀಅತ್, ಹೊಸ ಕಲಿಮ, ಹೊಸ ಖಿಬ್ಲ ಪ್ರತಿಪಾದಿಸುವ ಅಥವಾ ನೇರವಾಗಿ ಪ್ರವಾದಿತ್ವ ಗಳಿಸುವ ಪ್ರವಾದಿ ಆಗಮಿಸಲು ಸಾಧ್ಯವಿಲ್ಲ. ಆದರೆ ಹಝ್ರತ್ ಮುಹಮ್ಮದ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಅನುಯಾಯಿಯಾಗಿ ಅವರ ಅನು ಸರಣೆಯಿಂದ ಅನುಗ್ರಹ ಗಳಿಸಿ ಉಮ್ಮತೀ ನಬಿಯಾಗಿ ಆಗಮಿಸಬಹುದು.

ಪವಿತ್ರ ಖುರ್‌ಆನ್, ಹದೀಸುಗಳಿಂದ ಮಾತ್ರವಲ್ಲ, ಹಿಂದಿನ ಕಾಲದ ಮಹಾನ್ ವಿದ್ವಾಂಸರ ಹೇಳಿಕೆಗಳಿಂದಲೂ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರು ಪ್ರಸ್ತಾಪಿಸಿದುದು ಸತ್ಯವೆಂದು ಸಾಬೀತಾಗುತ್ತದೆ. ಕೆಲವು ವಿದ್ವಾಂಸರ ಹೇಳಿಕೆಗಳು ಹೀಗಿವೆ:

1. ಹಝ್ರತ್ ಮೌಲಾನ ಅಬ್ದುಲ್ ಹಯ್ಯ್ ಸಾಹೇಬ್(ರಹ್) ಫರಂಗೀ ಮಹಲ್ಲೀ ಲಕ್ನವೀ ಹೀಗೆ ಬರೆದಿದ್ದಾರೆ:

"ಅಹ್ಲೆ ಸುನ್ನತ್‌ಗೆ ಸೇರಿದ ವಿದ್ವಾಂಸರು ಹೀಗೆ ವಿಶದೀಕರಿಸುತ್ತಾರೆ– ಹಝ್ರತ್ ಮುಹಮ್ಮದ್ ರಸೂಲ್ ಸಲ್ಲಲ್ಲಾಹು ಅಲೈಹಿ ವ ಸಲ್ಲಮರ ಕಾಲಘಟ್ಟದಲ್ಲಿ ಹೊಸ ಶರೀಅತ್‌ನೊಂದಿಗೆ ಯಾವ ಪ್ರವಾದಿಯೂ ಆಗಮಿಸಲು ಅಸಾಧ್ಯ. ಅವರ ನುಬುವ್ವತ್ ಪರಿಪೂರ್ಣವಾಗಿದೆ. ಅವರ ಕಾಲ ಘಟ್ಟದ ಪ್ರವಾದಿ ಮುಹಮ್ಮದೀಯ ಶರೀಅತನ್ನು ಅನುಸರಿಸುವವನಾಗುವರು. ಹಝ್ರತ್ ಮುಹಮ್ಮದ್ ಸಲ್ಲಲ್ಲಾ ಅಲೈಹಿವಸಲ್ಲಮರ ಆಗಮನ ಸಾರ್ವತ್ರಿಕವಾಗಿದೆ.

(ದಾಫಿಉಲ್ ವಸ್‌ವಾಸ್ ಫೀ ಅಸ್‌ರಿಬ್ಬಿ ಅಬ್ಬಾಸ್– ಪುಟ 3)

ಇದೇ ಪುಸ್ತಕದಲ್ಲಿ ಹೀಗೆ ಸಹ ಬರೆಯಲಾಗಿದೆ:

"ಹಝ್ರತ್ ಮುಹಮ್ಮದ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ನಂತರ ಅಥವಾ ಅವರ ಕಾಲದಲ್ಲಿ ಒಬ್ಬ ಪ್ರವಾದಿ ಆಗಮಿಸುವುದು ಅಸಂಭಾವ್ಯವಲ್ಲ. ಆದರೆ ಹೊಸ ಶರೀಅತ್‌ನೊಂದಿಗೆ ಬರುವುದು ನಿಷಿದ್ಧಗೊಳಿಸಲಾಗಿದೆ."

(ಮೇಲಿನ ಪುಸ್ತಕ ಪುಟ – 12)

2. ಹಝ್ರತ್ ಮೌಲಾನ ಮುಹಮ್ಮದ್ ಖಾಸಿಮ್ ನಾನೂತ್ವಿ(ರಹ್) (ದೇವ್‌ಬಂದ್ ಮದ್‌ರಸದ ಸ್ಥಾಪಕ) ಹೀಗೆ ಹೇಳುತ್ತಾರೆ: "ಹಝ್ರತ್ ಮುಹಮ್ಮದ್ ರಸೂಲ್ ಸಲ್ಲಲ್ಲಾಹು ಅಲೈಹಿ ವ ಸಲ್ಲಮ್ ಖಾತಮ್ ಆಗಿರುವರು ಎಂಬುದಕ್ಕೆ ಜನಸಾಮಾನ್ಯರು ನೀಡುವ ಅರ್ಥ ಏನೆಂದರೆ ಹಿಂದಿನ ಪ್ರವಾದಿಗಳ ಕಾಲ ಕಳೆದ ನಂತರ ಅವರ ಕಾಲ ಬಂತು ಎಂದೂ ಅವರು ಎಲ್ಲರಿಗಿಂತಲೂ ಕೊನೆಯ ಪ್ರವಾದಿ ಎಂದೂ ಆಗಿದೆ. ಆದರೆ ಬುದ್ಧಿಶಾಲಿಗಳಿಗೆ ತಿಳಿದಿರುವ ಸಂಗತಿ ಏನೆಂದರೆ, ಕಾಲ ಮುಂದೆ ಆಗಿರುವುದು ಅಥವಾ ಹಿಂದೆ ಆಗಿರುವುದು ಎಂಬುದರಲ್ಲಿ ಯಾವ ಶ್ರೇಷ್ಠತೆಯೂ ಇಲ್ಲ . ಹೀಗಿರುವಾಗ ವಲಾಕಿನ್ ರಸೂಲಲ್ಲಾಹಿ ವ ಖಾತಮನ್ನಬಿಯ್ಯೀನ್ ಎಂದು ಹೊಗಳಿಕೆಯ ರೂಪದಲ್ಲಿ ಹೇಳುವುದು ಹೇಗೆತಾನೆ ಸರಿಯಾಗಬಲ್ಲದು?"

(ತಹ್‌ಧೀರುನ್ನಾಸ್ – ಪುಟ 3)

ಇದೇ ಪುಸ್ತಕದ 28ನೇ ಪುಟದಲ್ಲಿ ಅವರು ಹೀಗೆ ಹೇಳುತ್ತಾರೆ: "ಹಝ್ರತ್ ಮುಹಮ್ಮದ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ನಂತರ ಯಾರಾದರೂ ಪ್ರವಾದಿ ಬರುವರೆಂದು ನಾವು ಭಾವಿಸುವುದಾದರೆ, ಅವರಿಂದ ಹಝ್ರತ್ ಮುಹಮ್ಮದ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಖಾತಮಿಯ್ಯತೆ ಮುಹಮ್ಮದೀಯಲ್ಲಿ ಯಾವುದೇ ವ್ಯತ್ಯಾಸ ಉಂಟಾಗುವುದಿಲ್ಲ."

3. ಹಝ್ರತ್ ಮಿರ್ಝಾ ಮಝ್‌ಹರ್ ಜಾನ್ ಜಾನಾನ್(ರಹ್) ಶಹೀದ್ ದೆಹ್ಲವಿ ಹೀಗೆ ಹೇಳಿದ್ದಾರೆ: "ನುಬುವ್ವತ್ ಬಿಲ್ ಇಸಾಲತ (ಶರೀಅತ್ ಸಹಿತ ನುಬುವ್ವತ್) ಹೊರತು ಬೇರೆ ಯಾವುದೇ ನುಬುವ್ವತ್ ಕೊನೆಗೊಂಡಿಲ್ಲ. ನುಬುವ್ವತ್ ಉದ್ಭವ ಸ್ಥಾನದಲ್ಲಿ ಜಿಪುಣತನ ಅನುಮತಿಸಲ್ಪಡುವುದಿಲ್ಲ."

(ಮಖಾಮಾತೆ ಮಝ್‌ಹರಿ – ಪುಟ 88)

4. ಹಝ್ರತ್ ಮೌಲಾನ ಶಾ ವಲಿಯುಲ್ಲಾಹ್(ರಹ್) ಮುಹದ್ದಿಸ್ ದೆಹ್ಲವಿ ಹೀಗೆ ಹೇಳುತ್ತಾರೆ:

ವ ಖುತಿಮ ಬಿಹನ್ನಬಿಯ್ಯೂನ ಅಯ್ ಲಾಯೂಜದು ಮನ್ ಯಅ್‌ಮುರುಹುಲ್ಲಾಹು ಸುಬ್‌ಹಾನಹೂ ಬಿತ್ತಶ್‌ರೀಇ ಅಲ್ಲನ್ನಾಸ್.

"ಹಝ್ರತ್ ಮುಹಮ್ಮದ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರಲ್ಲಿ ನುಬುವ್ವತ್ ಕೊನೆಗೊಂಡಿದೆ ಎಂದರೆ ಇನ್ನು ಮುಂದೆ ಶರೀಅತ್‌ನೊಂದಿಗೆ ಯಾರನ್ನೂ ಅಲ್ಲಾಹನು ಕಳುಹಿಸಲಾರನು ಎಂದು ಅರ್ಥ." (ತಫ್‌ಹೀಮಾತೆ ಇಲಾಹಿಯ್ಯ – ತಫ್‌ಹೀಮ್ 53).

5. ಹಝ್ರತ್ ಇಮಾಮ್ ಅಬ್ದುಲ್ ವಹ್ಹಾಬ್ ಶಅ್‌ರಾನೀ(ರಹ್) ಹೀಗೆ ಬರೆದಿದ್ದಾರೆ: ವಖೌಲುಹೂ ಸಲ್ಲಲ್ಲಾಹು ಅಲೈಹಿ ವಸಲ್ಲಮ ಲಾ ನಬಿಯ್ಯ ಬಅ್‌ದೀ ವಲಾ ರಸೂಲ ಅಲ್ ಮುರಾದ್ ಬಿಹೀ ಲಾ ಮುಶರ್ರಅ ಬಅ್‌ದೀ. "ಹಝ್ರತ್ ಮುಹಮ್ಮದ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮ್ ಲಾ ನಬಿಯ್ಯ ಬಅ್‌ದೀ ವಲಾ ರಸೂಲ – ನನ್ನ ಅನಂತರ ಪ್ರವಾದಿ ಇಲ್ಲ ಮತ್ತು ಸಂದೇಶವಾಹಕ ಇಲ್ಲ ಎಂದು ಹೇಳಿದುದರ ಅರ್ಥ ನನ್ನ ಅನಂತರ ಹೊಸ ಶರೀಅತ್ ತರುವ ಪ್ರವಾದಿ ಇಲ್ಲ ಎಂದಾಗಿದೆ." (ಅಲ್‌ಯವಾಖೀತು ವಲ್ ಜವಾಹಿರ್ – ಭಾಗ 2 ಪುಟ 42)

6. ಮಹಾ ಸಂತರಾಗಿದ್ದ ಹಝ್ರತ್ ಸಯ್ಯಿದ್ ಅಬ್ದುಲ್ ಕರೀಮ್ ಜೀಲಾನಿ(ರಹ್) ಹೀಗೆ ಬರೆದಿದ್ದಾರೆ: ಫನ್ ಖತಅ ಹುಕ್‌ಮುನುಬುವ್ವತಿತ್ತಶ್‌ರೀಈ ಬಅ್‌ದಹೂ ವಕಾನ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮ ಖಾತಮನ್ನಬಿಯ್ಯೀನ್.

"ಹಝ್ರತ್ ಮುಹಮ್ಮದ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮ್ ಖಾತಮುನ್ನಬಿಯ್ಯೀನ್ ಆಗಿರುವುದರಿಂದ ತಶ್‌ರೀಈ ನುಬುವ್ವತ್ ಬಗ್ಗೆ ಆಜ್ಞೆ ಕೊನೆಗೊಂಡಿದೆ."

(ಅಲ್ ಇನ್‌ಸಾನುಲ್ ಕಾಮಿಲ್ – ಬಾಬ್ 36)

7. ಶೇಖ್ ಮುಹ್‌ಯುದ್ದೀನ್ ಇಬ್ನು ಅರಬಿ ತನ್ನ "ಫುತೂಹಾತೆ ಮಕ್ಕಿಯ್ಯ" ಎಂಬ ಗ್ರಂಥದಲ್ಲಿ ವಿವಿಧ ಸ್ಥಳಗಳಲ್ಲಿ ಈ ವಿಷಯದ ಬಗ್ಗೆ ವಿಶದೀಕರಿಸಿದ್ದಾರೆ. ಅವರು ತನ್ನ ಪುಸ್ತಕದ ಸಂಪುಟ 2 ಪುಟ 73 ರಲ್ಲಿ ಹೀಗೆ ಬರೆದಿದ್ದಾರೆ:

ಇನ್ನನ್ನುಬುವ್ವತಲ್ಲತೀ ಇನ್‌ಖತಅತ್ ಬಿವುಜೂದಿ ರಸೂಲಿಲ್ಲಾಹಿ ಸಲ್ಲಲ್ಲಾಹು ಅಲೈಹಿ ವ ಸಲ್ಲಮ ಇನ್ನ ಮಾಹಿಯ ನುಬುವ್ವತುತ್ತ ಶ್‌ರೀಇ ಲಾ ಮಖಾಮುಹಾ ಫಲಾ ಶರ್‌ಉದ್ ಯಕೂನು ನಾಸಿಖನ್ ಲಿಶರ್‌ಇಹೀ ಸಲ್ಲಲ್ಲಾಹು ಅಲೈಹಿ ವ ಸಲ್ಲಮ ವಲಾ ಯಝೀದು ಫೀ ಶರ್‌ಇಹೀ ಹುಕ್‌ಮನ್ ವ ಹಾಧಾ ಮಅನಾ ಖಾಲಿಹೀ ಸಲ್ಲಲ್ಲಾಹು ಅಲೈಹಿ ವ ಸಲ್ಲಮ ಅನ್ನರ್ರಿಸಾಲತ ವನ್ನುಬುವ್ವತ ಖದಿನ್‌ಖತಅತ್ ಫಲಾ ರಸೂಲ ಬಅ್‌ದೀ ವಲಾ ನಬಿಯ್ಯ ಅಯ್ ಲಾ ನಬಿಯ್ಯ ಯಕೂನು ಅಲಾ ಶರ್‌ಇನ್ ಯುಖಾಲಿಫು ಶರ್‌ಈ ಬಲ್ ಇಧಾ ಕಾನ ಯಕೂನು ತಹ್‌ತ ಹುಕ್‌ಮಿ ಶರೀಅತೀ ವಲಾ ರಸೂಲ ಅಯ್ ಲಾ ರಸೂಲ ಬಅ್‌ದೀ ಇಲಾ ಅಹದಿನ್ ಮಿನ್ ಖಲ್‌ಖಿಲ್ಲಾಹಿ ಬಿಶರ್‌ಇನ್ ಯಉದ್‌ಊಹುವನ್ ಇಲೈಹಿ ಫಹಾದಾ ಹೂವಲ್ಲಧಿನ್‌ಖತಅ ವ ಸುದ್ದ ಬಾಬುಹೂ ಲಾ ಮಖಾಮುನ್ನುಬುವ್ವತಿ.

"ಹಝ್ರತ್ ಮುಹಮ್ಮದ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಆಗಮನದಿಂದ ಕೊನೆಗೊಂಡುದು ಶರೀಅತ್ ಒಳಗೊಂಡ ನುಬುವ್ವತ್ ಮಾತ್ರವಾಗಿದೆ. ನುಬುವ್ವತ್ ಪದವಿ ಕೊನೆಗೊಂಡಿಲ್ಲ. ಹಝ್ರತ್ ಮುಹಮ್ಮದ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಶರೀಅತನ್ನು ರದ್ದುಗೊಳಿಸುವ ಅಥವಾ ಅವರ ಶರೀಅತ್‌ಗೆ ಯಾವುದಾದರೂ ಆಜ್ಞೆ ಸೇರಿಸಿದ ಶರೀಅತ್ ಆಗಲಿ ಬರಲಾರದು. ನನ್ನ ಅನಂತರ ನುಬುವ್ವತ್ ಮತ್ತು ರಿಸಾಲತ್ ಕೊನೆಗೊಂಡಿದೆ ಮತ್ತು ನನ್ನ ಅನಂತರ ನಬಿ ಮತ್ತು ರಸೂಲ್ ಇಲ್ಲ ಎಂದು ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿವಸಲ್ಲಮರು ಹೇಳಿದುದರ ಅರ್ಥ ಹೀಗೆ: ನನ್ನ ಶರೀಅತ್‌ಗೆ ವಿರುದ್ಧವಾದ ಶರೀಅತ್‌ನೊಂದಿಗೆ ಪ್ರವಾದಿ ಬರಲಾರ. ಆದರೆ ನಬಿ ಆಗಮಿಸುವುದಾದರೆ ನನ್ನ ಶರೀ ಅತ್‌ಗೆ ಅಧೀನವಾಗಿ ಆಗಮಿಸುವರು. ಹೊಸ ಶರೀಅತ್ ಕಡೆಗೆ ಜನರನ್ನು ಆಹ್ವಾನಿಸುವ ಪ್ರವಾದಿ ಬರಲಾರ. ನುಬುವ್ವತ್ ಕೊನೆಗೊಂಡಿದೆ ಮತ್ತು ಅದರ ಬಾಗಿಲು ಮುಚ್ಚಲಾಗಿದೆ ಎಂದು ಹೇಳಿದುದರ ಅರ್ಥ ಇದೇ ಆಗಿದೆ. ಆದರೆ ನುಬುವ್ವತ್ ಸ್ಥಾನ ಯಾರಿಗೂ ಇನ್ನು ಮುಂದೆ ಲಭಿಸಲಾರದು ಎಂದು ಇದರ ಅರ್ಥವಲ್ಲ."

8. ಹಝ್ರತ್ ಆಯಿಶ ಸಿದ್ದೀಖ ರಝಿಯಲ್ಲಾಹು ಅನ್‌ಹಾ ಹೀಗೆ ಹೇಳುತ್ತಾರೆ: ಖೂಲೂ ಇನ್ನಹೂ ಖಾತಮುಲ್ ಅಂಬಿಯಾಇ ವಲಾ ತಖೂಲೂ ಲಾ ನಬಿಯ್ಯ ಬಅ್‌ದಹೂ.

"ಹಝ್ರತ್ ಮುಹಮ್ಮದ್ ರಸೂಲ್ ಸಲ್ಲಲ್ಲಾಹು ಅಲೈಹಿ ವ ಸಲ್ಲಮರು ಖಾತಮುಲ್ ಅಂಬಿಯಾ ಎಂದು ಹೇಳಿರಿ. ಆದರೆ ಹಝ್ರತ್ ಪೈಗಂಬರರ[ಸ] ನಂತರ ಪ್ರವಾದಿ ಇಲ್ಲ ಎಂದು ಹೇಳಬೇಡಿರಿ. (ದುರ್ರೆ ಮನ್‌ಸೂರ್ – ಭಾಗ 5 ಪುಟ 204. ತಕ್‌ಮಿಲ ಮಜಮಉಲ್ ಬಿಹಾರ್ – ಪುಟ 85.)

9. ಹಝ್ರತ್ ಇಮಾಮ್ ಮುಹಮ್ಮದ್ ತಾಹಿರ್ ಸಾಹೇಬ್ ಸಿಂಧೀ[ರಹ್] ತನ್ನ ಗ್ರಂಥವಾದ ತಕ್‌ಮಿಲ ಮಜ್‌ಮಉಲ್ ಬಿಹಾರ್ ಪುಟ 85 ರಲ್ಲಿ ಹಝ್ರತ್ ಅಯಿಶ ರಝಿಯಲ್ಲಾಹು ಅನ್ ಹಾರವರ, ಮೇಲೆ ಉಲ್ಲೇಖಿತ ಮಾತನ್ನು ಪ್ರಸ್ತಾಪಿಸಿ ಹೀಗೆ ಹೇಳುತ್ತಾರೆ: ಹಾಧಾ ನಾಝಿರನ್ ಇಲನ್ನುಝೂಲಿ ಈಸಾ ವ ಹಾಧಾ ಅಯ್‌ಳನ್ ಲಾ ಯುನಾಫೀ ಹದೀಸ ಲಾ ನಬಿಯ್ಯ ಬಅ್‌ದೀ ಲಿಅನ್ನಹೂ ಅರಾದ ಲಾ ನಬಿಯ್ಯ ಯನ್‌ಸಿಖು ಶರ್‌ಅಹೂ.

"ಉಮ್ಮುಲ್ ಮೂಮಿನೀನ್ ಹಝ್ರತ್ ಆಯಿಶ ರಝಿಯಲ್ಲಾಹು ಅನ್‌ಹಾ, ವಾಗ್ದತ್ತ ಮಸೀಹರು ನಬಿಯುಲ್ಲಾಹ್ (ಅಲ್ಲಾಹನ ಪ್ರವಾದಿ) ಆಗಿ ಬರುವುದನ್ನು ದೃಷ್ಟಿಯಲ್ಲಿ ಇರಿಸಿಕೊಂಡು ಈ ಮಾತುಗಳನ್ನು ಹೇಳಿರುವರು. ಅವರ ಹೇಳಿಕೆ ಲಾನಬಿಯ್ಯ ಬಅ್‌ದೀ ಎಂದು ಹಝ್ರತ್ ಮುಹಮ್ಮದ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಹೇಳಿದುದಕ್ಕೆ ವಿರುದ್ಧವಾಗಿಲ್ಲ. ಏಕೆಂದರೆ ಹಝ್ರತ್ ಮುಹಮ್ಮದ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಹೇಳಿದುದು ಅವರ ಶರೀಅತನ್ನು ರದ್ದುಗೊಳಿಸುವ ಪ್ರವಾದಿ ಬರಲಾರರು ಎಂಬ ಅರ್ಥದಲ್ಲಾಗಿದೆ.

10. ಪ್ರಸಿದ್ಧ ಹದೀಸು ಗ್ರಂಥವಾದ ಇಬ್ನು ಮಾಜದಲ್ಲಿ ವರದಿ: ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ತನ್ನ ಪುತ್ರ ಇಬ್ರಾಹೀಮ್ ನಿಧನ ಹೊಂದಿದಾಗ ಹೇಳಿದರು –

ಲೌಆಶ ಲಕಾನ ನಬಿಯ್ಯ.

"ಅವನು (ಇಬ್ರಾಹೀಮ್) ಜೀವಿಸಿರುತ್ತಿದ್ದರೆ ನಿಶ್ಚಯವಾಗಿಯೂ ನಬಿ (ಪ್ರವಾದಿ) ಆಗುತ್ತಿದ್ದನು."

ಈ ಹದೀಸ್ ಸತ್ಯವಾದ (ಸಹೀಹ್) ಹದೀಸ್ ಎಂದು ಸಾಬೀತುಗೊಳಿಸಿದ ನಂತರ ಪ್ರಸಿದ್ಧ ಹದೀಸ್ ಪಂಡಿತರಾದ ಮುಲ್ಲಾ ಅಲೀ ಖಾರಿ[ರಹ್] ತನ್ನ ಗ್ರಂಥವಾದ ಮೌಝೂಆತೆ ಕಬೀರ್ ಪುಟ 58, 59 ರಲ್ಲಿ ಹೀಗೆ ಬರೆದಿದ್ದಾರೆ: ಖುಲ್‌ತು ಮಅ ಹಾಧಾ ಲೌ ಆಶ ಇಬ್ರಾಹೀಮು ವ ಸಾರ ನಬಿಯ್ಯನ್ ವ ಕಧಾ ಲೌ ಸಾರ ಉಮರು ನಬಿಯ್ಯನ್ ಲಕಾನ ಮಿನ್ ಅತ್‌ಬಾಯಿಹೀ ಸಲ್ಲಲ್ಲಾಹು ಅಲೈಹಿ ವಸಲ್ಲಮ......ಫಲಾ ಯುನಾಖಿಝು ಖೌಲಹೂ ಖಾತನ್ನ ಬಿಯ್ಯೀನ ಇಧಿಲ್ ಮಅ್‌ನಾ ಅನ್ನಹೂ ಲಾ ಯಅ್‌ತೀ ನಬಿಯ್ಯುನ್ ಯನ್‌ಸಿಖು ಮಿಲ್ಲತಹೂ ವಲಮ್ ಯಕುನ್ ಮಿನ್ ಉಮ್ಮತಿಹೀ.

"ನಾನು ಹೇಳುವುದೇನೆಂದರೆ, ಇಬ್ರಾಹೀಮ್ ಜೀವಿಸಿ ನಬಿಯಾಗುತ್ತಿದ್ದರೆ, ಅದೇ ರೀತಿ ಹಝ್ರತ್ ಉಮರ್ ನಬಿಯಾಗುತ್ತಿದ್ದರೆ, ಅವರು ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರನ್ನು ಅನುಸರಿಸುವ ಪ್ರವಾದಿಗಳಾಗುತ್ತಿದ್ದರು.... ಇದು ಖಾತಮುನ್ನಬಿಯ್ಯೀನ್ ಎಂಬ ಪವಿತ್ರ ಖುರ್‌ಆನ್ ವಚನಕ್ಕೆ ವಿರುದ್ಧವಾದುದಲ್ಲ. ಖಾತಮುನ್ನಬಿಯ್ಯೀನ್ ಎಂದರೆ ಹಝ್ರತ್ ಮುಹಮ್ಮದ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಶರೀಅತನ್ನು ರದ್ದುಗೊಳಿಸುವ ಮತ್ತು ಅವರ ಉಮ್ಮತ್‌ಗೆ (ಸಮುದಾಯಕ್ಕೆ) ಸೇರದ ಪ್ರವಾದಿ ಬರಲಾರದೆಂದಾಗಿದೆ." (ಮೌಝೂಆತೆ ಕಬೀರ್)

ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರ ನುಬುವ್ವತ್ ವಾದಕ್ಕೆ ವಿರುದ್ಧವಾಗಿ ನಮ್ಮ ವಿರೋಧಿಗಳು ಸಾಮಾನ್ಯವಾಗಿ ಪವಿತ್ರ ಖುರ್‌ಆನಿನ ಖಾತಮುನ್ನಬಿಯ್ಯೀನ್ ಎಂಬ ವಚನವನ್ನು ಮತ್ತು ಲಾನಬಿಯ್ಯ ಬಅ್‌ದೀ ಎಂಬ ಹದೀಸನ್ನು ಉಲ್ಲೇಖಿಸುತ್ತಾರೆ. ಮೇಲೆ ನಾವು ಉಲ್ಲೇಖಿಸಿದ ಸಾಕ್ಷ್ಯಾಧಾರಗಳಿಂದ ಸ್ಪಷ್ಟವಾಗುವುದೇನೆಂದರೆ, ಹಝ್ರತ್ ಮುಹಮ್ಮದ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಆಗಮನದ ನಂತರ ತಶ್‌ರೀಈ (ಶರೀಅತ್‌ನೊಂದಿಗೆ ಕೂಡಿದ) ನುಬುವ್ವತ್ ಕೊನೆಗೊಂಡಿದೆ. ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರ ವಾದ ಸಹ ಹೀಗೆಯೇ ಆಗಿದೆ. ವಾಸ್ತವಿಕ ವಿಷಯವೇನೆಂದರೆ, ಹಝ್ರತ್

ಮುಹಮ್ಮದ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರನ್ನು ಅನುಸರಿಸುವ ಮೂಲಕ ದೊರೆಯಬಹುದಾದ ಗೈರ್ ತಶ್‌ರೀಈ (ಶರೀಅತ್ ರಹಿತ) ನುಬುವ್ವತ್ ಸಹ ಕೊನೆಗೊಂಡಿದೆ ಎಂಬುದರ ಬಗ್ಗೆ ಹಿಂದಿನ ಕಾಲದ ಮಹಾನ್ ವಿದ್ವಾಂಸರ ಪೈಕಿ ಒಬ್ಬ ವಿದ್ವಾಂಸನಾದರೂ ಹೇಳಿದ ಒಂದೇ ಒಂದು ಹೇಳಿಕೆ ಕೂಡ ನಮ್ಮ ವಿರೋಧಿಗಳಿಗೆ ಮುಂದಿರಿಸಲು ಸಾಧ್ಯವಿಲ್ಲ. ಹಝ್ರತ್ ಮುಹಮ್ಮದ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ವಾಗ್ದತ್ತ ಮಸೀಹರ ಆಗಮನದ ಶುಭವಾರ್ತೆ ನೀಡುತ್ತಾ ನಾಲ್ಕು ಸಾರಿ ನಬಿಯುಲ್ಲಾಹ್ (ಅಲ್ಲಾಹನ ನಬಿ) ಎಂದು ಹೇಳಿದ್ದಾರೆ. (ಮುಸ್ಲಿಮ್ ಹದೀಸ್ ಗ್ರಂಥ ಬಾಬ್ ನುಝೂಲೆ ಈಸಾ ನೋಡಿರಿ.)

ಈ ಎರಡು ವಿಧ ಹದೀಸುಗಳನ್ನು ಸಮನ್ವಯಗೊಳಿಸಿ ಹಿಂದಿನ ಕಾಲದ ವಿದ್ವಾಂಸರು ಹೀಗೆ ನಿಷ್ಕರ್ಷಿಸಿದರು:

ಹಝ್ರತ್ ಮುಹಮ್ಮದ್ ರಸೂಲ್ ಸಲ್ಲಲ್ಲಾಹು ಅಲೈಹಿ ವ ಸಲ್ಲಮರ ನಂತರ ನುಬುವ್ವತ್ ಕೊನೆಗೊಂಡಿದೆ ಎಂಬುದರ ಅರ್ಥ ಹಝ್ರತ್ ಮುಹಮ್ಮದ್ ರಸೂಲ್ ಸಲ್ಲಲ್ಲಾಹು ಅಲೈಹಿ ವ ಸಲ್ಲಮರು ಆಗಮಿಸಿದ ನಂತರ ತಶ್‌ರೀಈ (ಶರೀಅತ್ ತರುವ) ನುಬುವ್ವತ್ ಕೊನೆಗೊಂಡಿದೆ ಎಂದಾಗಿದೆ. ಆದರೆ ವಾಗ್ದತ್ತ ಮಸೀಹ್ ಹಝ್ರತ್ ಮುಹಮ್ಮದ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಶರೀಅತಿನ ಸೇವಕರಾದ ಕಾರಣ ಅವರ ನುಬುವ್ವತ್ ಪವಿತ್ರ ಖುರ್‌ಆನಿನ ಖಾತಮುನ್ನಬಿಯ್ಯೀನ್ ವಚನಕ್ಕೆ ವಿರುದ್ಧವಲ್ಲ ಮತ್ತು ಲಾ ನಬಿಯ್ಯ ಬಅ್‌ದೀ ಎಂಬ ಹದೀಸಿಗೂ ವಿರುದ್ಧವಲ್ಲ. ಇದೇ ವಿಶ್ವಾಸ ಹೊಂದಿರುವ ಕಾರಣ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರ ಮೇಲೆ ಕುಫ್ರ್ (ಅವಿಶ್ವಾಸ) ಫತ್ವ ಹೇರುವುದು ಸರಿಯಾದುದಾಗಿದ್ದರೆ ಇದೇ ವಿಶ್ವಾಸವನ್ನು ಪ್ರತಿಪಾದಿಸಿದ ಹಿಂದಿನ ಕಾಲದ ಹಿರಿಯ ವಿದ್ವಾಂಸರು ಸಹ ಈ ಫತ್ವದಿಂದ ಹೊರತಾಗಲಾರರು.

ಅಹ್ಮದಿಯಾ ಜಮಾಅತ್ ಹಝ್ರತ್ ಮುಹಮ್ಮದ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರನ್ನು ಖಾತಮುನ್ನಬಿಯ್ಯೀನ್ ಎಂದು ನಂಬುವುದಿಲ್ಲ ಎಂದು ಸಾಮಾನ್ಯ ಮುಸ್ಲಿಮರ ಮಧ್ಯದಲ್ಲಿ ದುರದೃಷ್ಟಕರವಾಗಿ ಅಪಪ್ರಚಾರ ಮಾಡಲಾಗುತ್ತದೆ.

ನಮ್ಮ ವಿರೋಧಿಗಳು ಮಾಡುವ ಕೊಳಕು ಪ್ರಚಾರದ ವಾಸ್ತವಿಕತೆ ಏನು ಎಂಬುದನ್ನು ಜನರಿಗೆ ಸ್ಪಷ್ಟಪಡಿಸಲು ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರ ಕೆಲವು ಹೇಳಿಕೆಗಳನ್ನು ವಾಚಕರ ಮುಂದಿರಿಸುತ್ತೇವೆ. ಸತ್ಯಾನ್ವೇಷಿಗಳಾದ ಜನರು ಚಿಂತಿಸಬೇಕು – ಖತ್‌ಮೆ ನುಬುವ್ವತ್ ಬಗ್ಗೆ ಅಹ್ಮದಿಯೇತರರು ನೀಡುವ ವಿವರಣೆ ಹಝ್ರತ್ ಮುಹಮ್ಮದ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಶ್ರೇಷ್ಠ ವೈಭವಕ್ಕೆ ಅನುಸಾರವಾಗಿದೆಯೋ ಅಥವಾ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಮತ್ತು ಅವರ ಜಮಾಅತ್ ನೀಡುವ ವಿವರಣೆ ಹಝ್ರತ್ ಮುಹಮ್ಮದ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಶ್ರೇಷ್ಠ ವೈಭವಕ್ಕೆ ಅನುಸಾರವಾಗಿದೆಯೋ ಎಂದು.

ಅಹ್ಮದಿಯಾ ಜಮಾಅತಿನ ಸ್ಥಾಪಕರಾದ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಹೀಗೆ ಹೇಳುತ್ತಾರೆ:

1. "ಅಲ್ಲಾಹನು ನಮಗೆ ಎಂತಹ ನಬಿಯನ್ನು ನೀಡಿದನೆಂದರೆ ಅವರು ಖಾತಮುಲ್ ಮೂಮಿನೀನ್ (ಸತ್ಯವಿಶ್ವಾಸಿಗಳಲ್ಲಿ ಶ್ರೇಷ್ಠ), ಖಾತಮುಲ್ ಆರಿಫೀನ್ (ಜ್ಞಾನಿಗಳಲ್ಲಿ ಶ್ರೇಷ್ಠ) ಮತ್ತು ಖಾತಮುನ್ನಬಿಯ್ಯೀನ್ (ಪ್ರವಾದಿಗಳಲ್ಲಿ ಶ್ರೇಷ್ಠ) ಆಗಿದ್ದಾರೆ. ಅವರಿಗೆ ಅಲ್ಲಾಹನಿಂದ ಅವತೀರ್ಣವಾದ ಗ್ರಂಥ ಜಾಮಿಉಲ್ ಕುತುಬ್ (ಎಲ್ಲ ಗ್ರಂಥಗಳ ಸಾರ ಸಂಗ್ರಹ) ಮತ್ತು ಖಾತಮುಲ್ ಕುತುಬ್ (ಎಲ್ಲ ಗ್ರಂಥಗಳಿಗಿಂತ ಶ್ರೇಷ್ಠ) ಆಗಿದೆ. ಹಝ್ರತ್ ಮುಹಮ್ಮದ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಖಾತಮುನ್ನಬಿಯ್ಯೀನ್ ಆಗಿರುವರು. ಅವರಲ್ಲಿ ನುಬುವ್ವತ್ ಅಂತಿಮ ಪರಿಪೂರ್ಣತೆ ಪಡೆಯಿತು. ಆದರೆ ಅಂತಿಮ ಸ್ಥಿತಿಯನ್ನು ಆ ನುಬುವ್ವತ್ ಪಡೆದುದು ಕತ್ತು ಹಿಸುಕಿ ಮನುಷ್ಯನನ್ನು ಕೊಂದು ಹಾಕಿದ ಹಾಗೆ ಅಲ್ಲ. ಅಂತಹ ಕೊನೆಗೊಳ್ಳುವಿಕೆ ಅಭಿಮಾನಾರ್ಹವಲ್ಲ. ಹಝ್ರತ್ ಮುಹಮ್ಮದ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರಲ್ಲಿ ನುಬುವ್ವತ್ ಕೊನೆಗೊಂಡಿದೆ ಎಂದು ಹೇಳಿದರೆ ಅದರ ಅರ್ಥ ನುಬುವ್ವತ್‌ಗೆ ಸಂಬಂಧಿಸಿದ ಎಲ್ಲ ಪರಿಪೂರ್ಣತೆಗಳು ಅವರಿಗೆ ನೀಡಲ್ಪಟ್ಟವು ಎಂದಾಗಿದೆ. ಹಝ್ರತ್ ಆದಮ್ ಅಲೈಹಿಸ್ಸಲಾಮರಿಂದ ಮೊದಲುಗೊಂಡು ಹಝ್ರತ್ ಈಸಾ ಅಲೈಹಿಸ್ಸಲಾಮರ ತನಕ ವಿವಿಧ ಪ್ರವಾದಿಗಳಿಗೆ, ಕೆಲವರಿಗೆ ಒಂದು ರೀತಿ ಮತ್ತು ಬೇರೆ ಕೆಲವರಿಗೆ ಬೇರೆ ರೀತಿ ಅನುಗ್ರಹಗಳು ನೀಡಲ್ಪಟ್ಟವು. ಆ ಪ್ರವಾದಿಗಳೆಲ್ಲರಿಗೆ ನೀಡಲ್ಪಟ್ಟ ಎಲ್ಲ ಅನುಗ್ರಹಗಳು ಹಝ್ರತ್ ಮುಹಮ್ಮದ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರಲ್ಲಿ ಜಮಾಯಿಸಲ್ಪಟ್ಟವು. ಈ ರೀತಿ ಅವರು ಸಹಜವಾಗಿ ಖಾತಮುನ್ನಬಿಯ್ಯೀನ್ ಆದರು. ಇದೇ ರೀತಿ ಹಿಂದಿನ ಧಾರ್ಮಿಕ ಗ್ರಂಥಗಳಲ್ಲಿ ಅಡಕವಾಗಿದ್ದ ಎಲ್ಲ ಉಪದೇಶಗಳು, ಆಜ್ಞೆಗಳು ಮತ್ತು ಜ್ಞಾನ ಪವಿತ್ರ ಖುರ್‌ಆನ್‌ನಲ್ಲಿ ಅಡಕವಾಗಿ ಕೊನೆಗೊಂಡವು. ಹಾಗೆ ಪವಿತ್ರ ಖುರ್‌ಆನ್ ಖಾತಮುಲ್ ಕುತುಬ್ (ಸರ್ವ ಗ್ರಂಥಗಳಿಗಿಂತ ಶ್ರೇಷ್ಠ) ಆಯಿತು.

"ನನ್ನ ಮೇಲೆ ಮತ್ತು ನನ್ನ ಜಮಾಅತಿನ ಮೇಲೆ, ನಾವು ಹಝ್ರತ್ ಮುಹಮ್ಮದ್ ರಸೂಲ್ ಸಲ್ಲಲ್ಲಾಹು ಅಲೈಹಿವ ಸಲ್ಲಮರನ್ನು ಖಾತಮುನ್ನಬಿಯ್ಯೀನ್ ಎಂದು ನಂಬುವುದಿಲ್ಲ ಎಂದು ಆರೋಪ ಹೊರಿಸಲಾಗುತ್ತಿದೆ. ಇದು ಮಹಾಸುಳ್ಳು ಆರೋಪವಾಗಿದೆ. ನಾವು ಎಷ್ಟು ಶಕ್ತಿಯುತವಾಗಿ, ದೃಢನಂಬಿಕೆಯಿಂದ ಮತ್ತು ಅದರ ಬಗ್ಗೆ ಸರಿಯಾದ ಜ್ಞಾನ ಸಂಪನ್ನರಾಗಿ ಹಝ್ರತ್ ಮುಹಮ್ಮದ್ ರಸೂಲ್ ಸಲ್ಲಲ್ಲಾಹು ಅಲೈಹಿ ವ ಸಲ್ಲಮರನ್ನು ಖಾತಮುಲ್ ಅಂಬಿಯಾ (ಪ್ರವಾದಿಗಳಲ್ಲಿ ಶ್ರೇಷ್ಠ) ಎಂದು ನಂಬುತ್ತೇವೋ ಅದರ ಲಕ್ಷದಲ್ಲಿ ಒಂದು ಪಾಲಿನಷ್ಟು ವಿಶ್ವಾಸ ಕೂಡ ಅದರ ಬಗ್ಗೆ ಅವರು ಹೊಂದಿಲ್ಲ. ಅವರಿಗೆ ಅಂತಹ ಯೋಗ್ಯತೆಯೇ ಇಲ್ಲ. ಹಝ್ರತ್ ಖಾತಮುಲ್ ಅಂಬಿಯಾ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಖತ್‌ಮೆ ನುಬುವ್ವತ್‌ನಲ್ಲಿರುವ ಸತ್ಯವನ್ನೂ ರಹಸ್ಯವನ್ನೂ ಅವರು ಮನವರಿಕೆ ಮಾಡಿಕೊಳ್ಳುವುದೇ ಇಲ್ಲ. ಅವರು ತಮ್ಮ ತಂದೆ ತಾತಂದಿರಿಂದ ಆ ಶಬ್ದವನ್ನು ಆಲಿಸಿರುವರು. ಆದರೆ ಅದರ ವಾಸ್ತವಿಕ ಅರ್ಥ ಅವರಿಗೆ ತಿಳಿದಿಲ್ಲ. ಖತ್‌ಮೆ ನುಬುವ್ವತ್ ಎಂದರೇನು? ಎಂದು ಅವರಿಗೆ ತಿಳಿದಿಲ್ಲ. ಖತ್‌ಮೆ ನುಬುವ್ವತ್ ಮೇಲೆ ನಂಬಿಕೆ ಇರಿಸಬೇಕೆಂದು ಹೇಳಿದರೆ ಅದರ ಅರ್ಥವೇನು? ಎಂದು ಕೂಡ ಅವರಿಗೆ ತಿಳಿದಿಲ್ಲ. ಆದರೆ ನಾವು ಪರಿಪೂರ್ಣ ಜ್ಞಾನದೊಂದಿಗೆ (ಅದರ ಬಗ್ಗೆ ಅಲ್ಲಾಹನಿಗೆ ಚೆನ್ನಾಗಿ ತಿಳಿದಿದೆ) ಹಝ್ರತ್ ಮುಹಮ್ಮದ್ ರಸೂಲ್ ಸಲ್ಲಲ್ಲಾಹು

ಅಲೈಹಿ ವಸಲ್ಲಮರನ್ನು ಖಾತಮುಲ್ ಅಂಬಿಯಾ ಎಂದು ನಂಬುತ್ತೇವೆ. ಅಲ್ಲಾಹನು ನಮಗೆ ಖತ್‌ಮೆನುಬುವ್ವತಿನ ನಿಜಾಂಶಗಳನ್ನು ಹೇಗೆ ಸ್ಪಷ್ಟಪಡಿಸಿರುವನೆಂದರೆ, ನಮಗೆ ಕುಡಿಸಲ್ಪಟ್ಟ ಜ್ಞಾನದ ಆ ಶರಬತ್ತಿನಿಂದ ವಿಶಿಷ್ಟ ರುಚಿಯನ್ನು ಆಸ್ವಾದಿಸುತ್ತಿದ್ದೇವೆ. ಆ ಕಾರಂಜಿಯಿಂದ ದಾಹ ನಿವಾರಿಸಿಕೊಂಡವರು ಹೊರತು ಬೇರೆ ಯಾರಿಗೂ ಅದರ ಬಗ್ಗೆ ಅಂದಾಜು ಮಾಡಲು ಸಾಧ್ಯವಾಗದು. ನಾವು ಖತ್‌ಮೆ ನುಬುವ್ವತ್ ಬಗ್ಗೆ ಲೌಕಿಕವಾದ ಉದಾಹರಣೆಯನ್ನು ಹೀಗೆ ನೀಡಬಲ್ಲೆವು: ಚಂದ್ರ ಹಿಲಾಲ್ ರೂಪದಿಂದ ಪ್ರಾರಂಭಗೊಂಡು ಹದಿನಾಲ್ಕನೆಯ ದಿನಾಂಕದಂದು ಪೂರ್ಣರೂಪವನ್ನು ಪಡೆಯುವಾಗ ಚಂದ್ರನನ್ನು ಬದ್ರ್ ಎಂದು ಕರೆಯುತ್ತಾರೆ. ಇದೇ ರೀತಿ ನುಬುವ್ವತ್ ಹಝ್ರತ್ ಮುಹಮ್ಮದ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರಲ್ಲಿ ಪರಿಪೂರ್ಣಗೊಂಡಿತು. ನುಬುವ್ವತ್ ಬಲಾತ್ಕಾರದಿಂದ ಕೊನೆಗೊಳಿಸಲ್ಪಟ್ಟಿತು ಎಂದು ನಂಬುವವರು ಈ ಸತ್ಯವನ್ನು ಮನವರಿಕೆ ಮಾಡಿಕೊಂಡಿಲ್ಲ. ಹಝ್ರತ್ ಮುಹಮ್ಮದ್ ರಸೂಲ್ ಸಲ್ಲಲ್ಲಾಹು ಅಲೈಹಿವಸಲ್ಲಮರ ಅನುಗ್ರಹಗಳ ಬಗ್ಗೆ ಮತ್ತು ಅದರ ಪರಿಪೂರ್ಣತೆಗಳ ಬಗ್ಗೆ ಅವರಿಗೆ ಜ್ಞಾನವೇ ಇಲ್ಲ. ಅವರು ತಿಳುವಳಿಕೆಯಲ್ಲಿ ಬಲಹೀನರಾಗಿದ್ದರೂ ಕಡಿಮೆ ಜ್ಞಾನ ಹೊಂದಿದವರು ಆಗಿದ್ದರೂ ನಾವು ಖತ್‌ಮೆ ನುಬುವ್ವತನ್ನು ನಂಬುವುದಿಲ್ಲ ಎಂದು ಹೇಳುತ್ತಾರೆ. ನಾನು ಇಂತಹ ರೋಗಿಗಳೊಂದಿಗೆ ಏನು ಹೇಳಲಿ? ಅವರ ಬಗ್ಗೆ ಹೇಗೆ ದುಃಖಿಸಲಿ? ಅವರ ಸ್ಥಿತಿ ಹೀಗೆ ಆಗದೆ ಇರುತ್ತಿದ್ದರೆ ಮತ್ತು ವಾಸ್ತವಿಕ ಇಸ್ಲಾಮ್‌ನಿಂದ ಸಂಪೂರ್ಣವಾಗಿ ದೂರ ಸರಿದು ಹೋಗಿರದಿದ್ದರೆ ನಾನು ಬರುವ ಆವಶ್ಯಕತೆಯಾದರೂ ಏನಿತ್ತು?"
(ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರ ಭಾಷಣ – 1905 ಮಾರ್ಚ್ ದಿನಾಂಕ 17ರಂದು ಅಲ್ ಹಕಮ್ ಪತ್ರಿಕೆಯಲ್ಲಿ ಪ್ರಕಟಿತವಾದುದು)

2. "ಯಾವ ಪರಿಪೂರ್ಣ ಮನುಷ್ಯನಿಗೆ ಪವಿತ್ರ ಖುರ್‌ಆನ್ ಅವತೀರ್ಣಗೊಂಡಿತೋ ಅವರು ಖಾತಮುಲ್ ಅಂಬಿಯಾ ಆದರು. ಆದರೆ ಇನ್ನು ಮುಂದೆ ಯಾವುದೇ ಆಧ್ಯಾತ್ಮಿಕ ಅನುಗ್ರಹಗಳು ಲಭಿಸಲಾರವು ಎಂದು ಇದರ ಅರ್ಥವಲ್ಲ. ಹಝ್ರತ್ ಮುಹಮ್ಮದ್ ರಸೂಲ್ ಸಲ್ಲಲ್ಲಾಹು ಅಲೈಹಿವಸಲ್ಲಮರು ಪ್ರವಾದಿಗಳ ಮುದ್ರೆ (ಖಾತಮುಲ್ ಅಂಬಿಯಾ) ಆದುದು ಈ ಕೆಳಗಿನ ಅರ್ಥ ಪ್ರಕಾರವಾಗಿದೆ:

ಹಝ್ರತ್ ಮುಹಮ್ಮದ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಅಂಗೀಕಾರದ ಮುದ್ರೆಯನ್ನು ಪಡೆಯದೆ ಅಲ್ಲಾಹನ ಅನುಗ್ರಹ ಯಾರಿಗೂ ದೊರಕದು. ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿವ ಸಲ್ಲಮರ ಸಮುದಾಯದವರಿಗೆ ಖಿಯಾಮತ್ ದಿನದ ತನಕ ಅಲ್ಲಾಹನ ಸಂದೇಶವಾಣಿಯು ಲಭಿಸುವ ಬಾಗಿಲು ಎಂದೂ ಮುಚ್ಚಲ್ಪಡಲಾರದು. ಹಝ್ರತ್ ಮುಹಮ್ಮದ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಹೊರತು ಬೇರೆ ಯಾರೂ ಖಾತಮುನ್ನಬಿಯ್ಯೀನ್ ಆಗಲಾರರು. ಅವರೊಬ್ಬರು ಮಾತ್ರ ಖಾತಮುನ್ನಬಿಯ್ಯೀನ್ ಆಗಿದ್ದಾರೆ. ಹಝ್ರತ್ ಮುಹಮ್ಮದ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಉಮ್ಮತಿ (ಸಮುದಾಯಕ್ಕೆ ಸೇರಿದವನು) ಆಗಿದ್ದವನಿಗೆ ಮಾತ್ರ ಅವರ ಅಂಗೀಕಾರದ ಮುದ್ರೆಯಿಂದ ನುಬುವ್ವತ್ ಸಿಗಲು ಸಾಧ್ಯವಿದೆ. ಅಲ್ಲಾಹನ ನಿರ್ಧಾರ ಮತ್ತು ಸಹಾನುಭೂತಿ ಹಝ್ರತ್ ಮುಹಮ್ಮದ್ ರಸೂಲ್ ಸಲ್ಲಲ್ಲಾಹು ಅಲೈಹಿ ವ ಸಲ್ಲಮರ ಉಮ್ಮತ್ (ಸಮುದಾಯ) ನ್ಯೂನತೆ ಭರಿತವಾಗಿರಲು ಇಷ್ಟಪಡಲಿಲ್ಲ. ದೇವಜ್ಞಾನ ಗಳಿಸಲು ಮೂಲವಾಗಿರುವ ದೇವ ಸಂದೇಶವಾಣಿಗಳ ಬಾಗಿಲನ್ನು ಮುಚ್ಚಿಡಲು ಅವನು ಬಯಸಲಿಲ್ಲ. ಖತ್‌ಮೆ ರಿಸಾಲತ್ ಚಿಹ್ನೆಯನ್ನು ಸ್ಥಾಪಿಸಲು, ದೇವ ಸಂದೇಶವಾಣಿಯ ಅನುಗ್ರಹ ಅವರ ಅನುಸರಣೆಯ ಮೂಲಕ ಮತ್ತು ಅವರ ಮಾಧ್ಯಮದ ಮೂಲಕ ಲಭಿಸಲಿ ಎಂದು ಅಲ್ಲಾಹನು ನಿರ್ಧರಿಸಿದನು. ಹಝ್ರತ್ ಮುಹಮ್ಮದ್ ರಸೂಲ್ ಸಲ್ಲಲ್ಲಾಹು ಅಲೈಹಿವಸಲ್ಲಮರ ಉಮ್ಮತಿ ಆಗದವನಿಗೆ ದೇವಸಂದೇಶವಾಣಿಯ ಬಾಗಿಲು ಮುಚ್ಚಲ್ಪಟ್ಟಿದೆ. ಈ ಅರ್ಥಗಳ ಪ್ರಕಾರ ಅಲ್ಲಾಹನು ಹಝ್ರತ್ ಮುಹಮ್ಮದ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರನ್ನು ಖಾತಮುಲ್ ಅಂಬಿಯಾ ಮಾಡಿರುವನು. ಖಿಯಾಮತ್ ದಿನದ ತನಕ ಅಲ್ಲಾಹನು ಹೀಗೆ ಆಗಲು ನಿರ್ಧರಿಸಿರುವನು: ಹಝ್ರತ್ ಮುಹಮ್ಮದ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ನಿಜವಾದ ಅನುಯಾಯಿಯಾಗಿ ಅವರ ಸಮುದಾಯಕ್ಕೆ ಸೇರಿವವನಾಗಿ (ಉಮ್ಮತಿಯಾಗಿ) ತನ್ನನ್ನು ಯಾರು ಸಾಬೀತುಗೊಳಿಸುವುದಿಲ್ಲವೋ, ಅವರ ಅನುಸರಣೆಯಲ್ಲಿ ತನ್ನನ್ನು ಅರ್ಪಿಸಿಕೊಳ್ಳುವುದಿಲ್ಲವೋ ಅಂತಹ ವ್ಯಕ್ತಿ ಅಲ್ಲಾಹನ ಪರಿಪೂರ್ಣ ಸಂದೇಶವಾಣಿಯನ್ನು ಪಡೆಯಲಾರ ಮತ್ತು ಪರಿಪೂರ್ಣ ಮುಲ್‌ಹಮ್ (ವಹೀ ಪಡೆದವ) ಆಗಲಾರ. ಏಕೆಂದರೆ ಸ್ವತಂತ್ರ ನುಬುವ್ವತ್ ಹಝ್ರತ್ ಮುಹಮ್ಮದ್ ರಸೂಲ್ ಸಲ್ಲಲ್ಲಾಹ ಅಲೈಹಿ ವ ಸಲ್ಲಮರಲ್ಲಿ ಅಂತಿಮವಾಗಿದೆ. ಅದರೆ ಹಝ್ರತ್ ಮುಹಮ್ಮದ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರನ್ನು ಪರಿಪೂರ್ಣವಾಗಿ ಅನುಸರಿಸುವ ಕಾರಣದಿಂದ, ಅದರ ಅನುಗ್ರಹದಿಂದ ಲಭಿಸುವ ಸಂದೇಶವಾಣಿ ಖಿಯಾಮತ್ ದಿನದ ತನಕ ಲಭಿಸುವುದು ಮತ್ತು ಅದು ಮಾತ್ರ ಬಾಕಿಯಾಗಿ ಉಳಿಯುವುದು."

(ಹಖೀಖತುಲ್ ವಹೀ – ಪುಟ 27, 28)

3. "ಖೇದಕರವಾದುದೇನೆಂದರೆ, ಇಂದಿನ ಕಾಲದ ತಿಳಿಗೇಡಿಗಳಾದ ಮುಸ್ಲಿಮರು ತಮ್ಮ ಆದರಣೀಯ ಪೈಗಂಬರರಾದ ಹಝ್ರತ್ ಮುಹಮ್ಮದ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರಿಗೆ ಗೌರವ ನೀಡುವುದಿಲ್ಲ. ಅವರು ಪ್ರತಿಯೊಂದು ವಿಷಯದ ಬಗ್ಗೆಯೂ ತಪ್ಪು ಗ್ರಹಿಕೆ ಹೊಂದಿರುವರು. ಅವರು ಖತ್‌ಮೆ ನುಬುವ್ವತ್‌ಗೆ ಎಂತಹ ಅರ್ಥ ನೀಡುತ್ತಾರೆಂದರೆ, ಅದರಿಂದ ಹಝ್ರತ್ ಮುಹಮ್ಮದ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರನ್ನು ನಿಂದಿಸಿದ ಹಾಗೆ ಆಗುತ್ತದೆಯೇ ಹೊರತು ಹೊಗಳಿದ ಹಾಗೆ ಆಗುವುದಿಲ್ಲ. ಅವರು ಹೇಳುವ ಅರ್ಥ ಪ್ರಕಾರ ಹಝ್ರತ್ ಮುಹಮ್ಮದ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರಲ್ಲಿ ಮನುಷ್ಯರಿಗೆ ಅನುಗ್ರಹ ಲಭಿಸುವಂತೆ ಮಾಡುವ ಮತ್ತು ಅವರನ್ನು ಪರಿಪೂರ್ಣತೆಗೆ ತಲಪಿಸುವಂತಹ ಶಕ್ತಿ ಇರಲಿಲ್ಲ. ಹಝ್ರತ್ ಮುಹಮ್ಮದ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಕೇವಲ ಒಣ ಶರೀಅತ್ ಕಲಿಸಲು ಮಾತ್ರ ಬಂದಿದ್ದರೆಂದು ಅವರ ಅಭಿಪ್ರಾಯವಾಗಿದೆ. ಆದರೆ ಅಲ್ಲಾಹನು ಪವಿತ್ರ ಖುರ್‌ಆನ್‌ನಲ್ಲಿ, ಮುಸ್ಲಿಮರು ಹೀಗೆ ಪ್ರಾರ್ಥಿಸಬೇಕೆಂದು ಹೇಳಿರುತ್ತಾನೆ:

**ಇಹ್‌ದಿನಸ್ಸಿರಾತಲ್ ಮುಸ್ತಖೀಮ್. ಸಿರಾತಲ್ಲಧೀನ ಅನ್ ಅಮ್‌ತ ಅಲೈಹಿಮ್.** 'ನೀನು ನಮ್ಮನ್ನು ಸರಿಯಾದ ಮಾರ್ಗದಲ್ಲಿ ನಡೆಸು– ನಿನ್ನ ಅನುಗ್ರಹಕ್ಕೆ ಪಾತ್ರರಾದವರ ಮಾರ್ಗದಲ್ಲಿ.'

ಮುಸ್ಲಿಮ್ ಸಮುದಾಯ ಹಿಂದಿನ ಪ್ರವಾದಿಗಳ ವಾರೀಸುದಾರರು ಅಲ್ಲವಾದರೆ ಮತ್ತು ಹಿಂದಿನ ಪ್ರವಾದಿಗಳಿಗೆ ಲಭಿಸಿದ ಅನುಗ್ರಹಗಳಲ್ಲಿ ಅವರಿಗೆ ಯಾವ ಪಾಲು ಕೂಡ ಸಿಗುವುದಿಲ್ಲವಾದರೆ ಈ ಪ್ರಾರ್ಥನೆ ಅಲ್ಲಾಹನು ನಮಗೆ ಕಲಿಸಿರುವುದಾದರೂ ಏಕೆ?"

(ಹಾಶಿಯ್ಯ ಹಖೀಖತುಲ್ ವಹೀ – ಪುಟ 100–101)

4. "ವೈಭವಶಾಲಿಯಾದ ಅಲ್ಲಾಹನು ಹಝ್ರತ್ ಮುಹಮ್ಮದ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರನ್ನು ಖಾತಮ್ (ಮುದ್ರೆ) ಹೊಂದಿದವರನ್ನಾಗಿ ಮಾಡಿರುವನು. ಅನುಗ್ರಹ ನೀಡಲು ಅವರಿಗೆ ಮುದ್ರೆ ನೀಡಲಾಗಿತ್ತು. ಬೇರೆ ಯಾವ ಪ್ರವಾದಿಗೂ ಆ ಮುದ್ರೆ ಖಂಡಿತ ನೀಡಿರಲಿಲ್ಲ. ಇದೇ ಕಾರಣದಿಂದ ಅವರ ಹೆಸರು ಖಾತಮುನ್ನ ಬಿಯ್ಯೀನ್ ಎಂದಾಯಿತು. ಎಂದರೆ ಅವರ ಅನುಸರಣೆಯ ಮೂಲಕ ನುಬುವ್ವತ್ ಅನುಗ್ರಹ ಲಭಿಸುತ್ತದೆ. ಅವರ ಆಧ್ಯಾತ್ಮಿಕ ಶ್ರದ್ಧೆಯಿಂದ ನುಬುವ್ವತ್ ಕೆತ್ತಲ್ಪಡುತ್ತದೆ. ಇಂತಹ ಪರಿಶುದ್ಧ ಶಕ್ತಿ ಬೇರೆ ಯಾವ ಪ್ರವಾದಿಗೂ ನೀಡಲ್ಪಟ್ಟಿಲ್ಲ."

(ಹಾಶಿಯ್ಯ ಹಖೀಖತುಲ್ ವಹೀ – ಪುಟ 97)

5. "ಈ ಸಮುದಾಯವನ್ನು ಒಂದು ಮೃತ ಸಮುದಾಯ ಎಂದು ಯೋಚಿಸುವವರ ಬಗ್ಗೆ ಖೇದ ಉಂಟಾಗುತ್ತದೆ. ನನಗೆ ಇಬ್ನು ಮರ್‌ಯಮ್‌ರಿಗೆ ವಹೀ ಅವತೀರ್ಣವಾದ ಹಾಗೆ ವಹೀ ಅವತೀರ್ಣವಾಗುತ್ತದೆ ಎಂದು ವಾದಿಸಿದರೆ ಅದು ಅವರ ದೃಷ್ಟಿಯಲ್ಲಿ ಬಹಳ ದೊಡ್ಡ ಪಾಪಕೃತ್ಯವಾಗಿದೆ. ಹಾಗೆ ಹೇಳುವವನು ಅವರ ದೃಷ್ಟಿಯಲ್ಲಿ ಕಾಫಿರ್ ಆಗಿದ್ದಾನೆ. ಏಕೆಂದರೆ ಅವರ ಅಭಿಪ್ರಾಯ ಪ್ರಕಾರ ಖಿಯಾಮತ್ ದಿನದ ತನಕ ಅಲ್ಲಾಹನ ಸಂದೇಶವಾಣಿಯ ಬಾಗಿಲು ಮುಚ್ಚಲ್ಪಟ್ಟಿದೆ. ಆಶ್ಚರ್ಯಕರವಾದುದೇನೆಂದರೆ, ಅಲ್ಲಾಹನು ಹಿಂದೆ ಆಲಿಸುತ್ತಿದ್ದ ಹಾಗೆ ಈಗ ಸಹ ಆಲಿಸುತ್ತಾನೆಂದು ಈ ಜನರು ನಂಬುತ್ತಾರೆ. ಆದರೆ ಅಲ್ಲಾಹನು ಹಿಂದಿನ ಕಾಲದಲ್ಲಿ ಮಾತನಾಡುತ್ತಿದ್ದ ಹಾಗೆ ಈಗ ಸಹ ಮಾತನಾಡುತ್ತಾನೆಂದು ನಂಬಲು ಈ ಜನರು ಸಿದ್ಧರಾಗುವುದಿಲ್ಲ. ವಾಸ್ತವಿಕ ವಿಷಯವೇನೆಂದರೆ, ಅಲ್ಲಾಹನು ಈಗ ಮಾತನಾಡುವುದಿಲ್ಲವಾದರೆ ಅವನು ಆಲಿಸುತ್ತಾನೆ ಎಂಬುದಕ್ಕೆ ಯಾವ ಸಾಕ್ಷ್ಯಾಧಾರವೂ ಇಲ್ಲ. ಅಲ್ಲಾಹನ ಗುಣಗಳು ಸ್ಥಗಿತಗೊಂಡಿವೆ ಎಂದು ಹೇಳುವವರು ಬಹಳ ದುರದೃಷ್ಟಶಾಲಿಗಳಾಗಿದ್ದಾರೆ. ಈ ಜನರು ವಾಸ್ತವಿಕವಾಗಿ ಇಸ್ಲಾಮಿನ ಶತ್ರುಗಳಾಗಿದ್ದಾರೆ. ಅವರು ಖತ್‌ಮೆ ನುಬುವ್ವತ್ ಬಗ್ಗೆ ಎಂತಹ ಅರ್ಥ ಹೇಳುತ್ತಾರೆಂದರೆ, ಅದರಿಂದ ನುಬುವ್ವತ್ ಎಂಬುದೇ ನಿಷ್ಕ್ರಿಯೆಗೊಳ್ಳುತ್ತದೆ. ಹಝ್ರತ್ ಮುಹಮ್ಮದ್ ರಸೂಲ್ ಸಲ್ಲಲ್ಲಾಹು ಅಲೈಹಿ ವ ಸಲ್ಲಮರ ಅನುಸರಣೆಯ ಮೂಲಕ ಲಭಿಸಬಹುದಾದ ಎಲ್ಲ ಅನುಗ್ರಹಗಳು ಅವರ ಅಭಿಪ್ರಾಯ ಪ್ರಕಾರ ಕೊನೆಗೊಂಡಿವೆ. ಅವು ದೊರಕಲಾರವು. ಈಗ ಅಲ್ಲಾಹನ ಸಂದೇಶವಾಣಿಗಳನ್ನು ಅಪೇಕ್ಷಿಸುವುದು ನಿರರ್ಥಕವಾಗಿದೆ. ಲಅ್‌ನತುಲ್ಲಾಹಿ ಅಲಲ್ ಕಾಧಿಬೀನ್ (ಸುಳ್ಳುಹೇಳುವವರ ಮೇಲೆ ಅಲ್ಲಾಹನ ಶಾಪ ಬಂದೆರಗಲಿ). ಇಂತಹ ಪರಿಸ್ಥಿತಿಯಲ್ಲಿ ಹಝ್ರತ್ ಮುಹಮ್ಮದ್ ರಸೂಲ್ ಸಲ್ಲಲ್ಲಾಹು ಅಲೈಹಿ ವ ಸಲ್ಲಮರನ್ನು ಅನುಸರಿಸುವುದರಿಂದ ದೊರಕುವ ಲಾಭವಾದರೂ ಏನೆಂದು ಈ ಜನರು ನಮಗೆ ತಿಳಿಸುವರೆ? ಯಾವ ಜನರ ಕೈಯಲ್ಲಿ ಹಿಂದಿನ ಕಾಲದ ಕಥೆಗಳ ಹೊರತು ಬೇರೆ ಏನೂ ಇಲ್ಲವೋ ಅಂತಹ ಜನರ ಧರ್ಮ ಮೃತವಾಗಿದೆ. ಅಲ್ಲಾಹನ ಬಗ್ಗೆ ಜ್ಞಾನದ ಬಾಗಿಲು ಅವರಿಗೆ ಮುಚ್ಚಲ್ಪಟ್ಟಿದೆ. ಆದರೆ ಇಸ್ಲಾಮ್ ಜೀವಂತ ಧರ್ಮವಾಗಿದೆ. ಅಲ್ಲಾಹನು ಪವಿತ್ರ ಖುರ್‌ಆನಿನ ಸೂರತುಲ್ ಫಾತಿಹದಲ್ಲಿ ಮುಸ್ಲಿಮರನ್ನು ಹಿಂದಿನ ಕಾಲದ ಪ್ರವಾದಿಗಳ ವಾರೀಸುದಾರರೆಂದು ಹೇಳಿದ್ದಾನೆ. ಹಿಂದಿನ ಪ್ರವಾದಿಗಳಿಗೆ ದೊರೆತ ಅನುಗ್ರಹಗಳು ನಮಗೆ ಸಹ ದೊರಕಲು ಪ್ರಾರ್ಥನೆ ಮಾಡಲು ಕಲಿಸಿದ್ದಾನೆ. ಆದರೆ ಯಾರ ಕೈಗಳಲ್ಲಿ ಬರೇ ಹಿಂದಿನ ಕಾಲದ ಕಥೆಗಳು ಮಾತ್ರ ಇವೆಯೋ ಅವರು ವಾರೀಸುದಾರರೆಂದು ಹೇಗೆ ತಾನೆ ಕರೆಯಲ್ಪಡುವರು ? ಖೇದಕರವಾದ ವಿಷಯವೇನೆಂದರೆ, ಈ ಜನರ ಮುಂದೆ ಎಲ್ಲ ಅನುಗ್ರಹಗಳ ಕಾರಂಜಿಯನ್ನು ಹೊರಹೊಮ್ಮಿಸಲಾಗಿದೆ. ಆದರೆ ಅದರಿಂದ ಒಂದು ಗುಟುಕು ನೀರನ್ನಾದರೂ ಕುಡಿಯಲು ಇವರು ಇಚ್ಛಿಸುವುದಿಲ್ಲ."

(ಚಶ್ಮಯೆ ಮಸೀಹೀ – ಪುಟ 67, 68)

6."ಕೊನೆಯದಾಗಿ ನಾನು ಜನರ ಮುಂದೆ ಹೇಳಲು ಬಯಸುತ್ತೇನೆ. ವೈಭವಶಾಲಿಯಾದ ಅಲ್ಲಾಹನಾಣೆ! ನಾನು ಕಾಫಿರ್ ಅಲ್ಲ. ಲಾ ಇಲಾಹ ಇಲ್ಲಲ್ಲಾಹು ಮುಹಮ್ಮದುರ್ರಸೂಲುಲ್ಲಾಹ್ ನನ್ನ ನಂಬಿಕೆ ಆಗಿದೆ. ವಲಾಕಿನ್ ರಸೂಲಲ್ಲಾ ಹಿ ವ ಖಾತಮನ್ನಬಿಯ್ಯೀನ್ ಎಂದು ಹಝ್ರತ್ ಮುಹಮ್ಮದ್ ರಸೂಲ್ ಸಲ್ಲಲ್ಲಾಹು ಅಲೈಹಿ ವ ಸಲ್ಲಮರ ಬಗ್ಗೆ ಪವಿತ್ರ ಖುರ್‌ಆನ್‌ನಲ್ಲಿ ಹೇಳಲಾಗಿದೆ. ಅದನ್ನು ನಾನು ನಂಬುತ್ತೇನೆ. ನಾನು ಹೇಳುವುದು ಸತ್ಯವೆಂದು ಎಷ್ಟು ಸಲ ಪ್ರಮಾಣ ಮಾಡುತ್ತೇನೆಂದರೆ, ಅಲ್ಲಾಹನ ಪವಿತ್ರ ನಾಮಗಳು ಎಷ್ಟಿವೆಯೋ ಅಷ್ಟುಸಲ, ಪವಿತ್ರ ಖುರ್‌ಆನ್‌ನಲ್ಲಿ ಎಷ್ಟು ಅಕ್ಷರಗಳಿವೆಯೋ ಅಷ್ಟುಸಲ, ಅಲ್ಲಾಹನ ದೃಷ್ಟಿಯಲ್ಲಿ ಹಝ್ರತ್ ಮುಹಮ್ಮದ್ ರಸೂಲ್ ಸಲ್ಲಲ್ಲಾಹು ಅಲೈಹಿಸ್ಸಲಾಮರಿಗೆ ಎಷ್ಟು ಶ್ರೇಷ್ಠತೆಗಳಿವೆಯೋ ಅಷ್ಟುಸಲ. ನನ್ನ ಯಾವುದೇ ವಿಶ್ವಾಸ ಅಲ್ಲಾಹ್ ಮತ್ತು ಹಝ್ರತ್ ಮುಹಮ್ಮದ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಹೇಳಿಕೆಗಳಿಗೆ ವಿರುದ್ಧವಾಗಿಲ್ಲ. ಯಾರು ನನ್ನ ಬಗ್ಗೆ ಹಾಗೆ ಭಾವಿಸುತ್ತಾರೋ ಅದು ಆತನ ತಪ್ಪುಗ್ರಹಿಕೆ ಕಾರಣವಾಗಿದೆ. ಯಾರು ನನ್ನನ್ನು ಕಾಫಿರ್ ಎಂದು ಭಾವಿಸುತ್ತಾನೋ ಮತ್ತು ನನ್ನನ್ನು ಕಾಫಿರ್ ಎಂದು ಹೇಳುವುದನ್ನು ತ್ಯಜಿಸುವುದಿಲ್ಲವೋ ಅವನು ದೃಢವಾಗಿ ನಂಬಲಿ –ಅವನು ಮೃತನಾದ ನಂತರ ಪ್ರಶ್ನಿಸಲ್ಪಡುವನು. ನಾನು ವೈಭವಶಾಲಿ ಅಲ್ಲಾಹನ ಹೆಸರಲ್ಲಿ ಪ್ರಮಾಣಮಾಡಿ ಹೇಳುತ್ತೇನೆ– ವೈಭವಶಾಲಿ ಅಲ್ಲಾಹ್ ಮತ್ತು ಹಝ್ರತ್ ಮುಹಮ್ಮದ್ ರಸೂಲ್ ಸಲ್ಲಲ್ಲಾಹು ಅಲೈಹಿ ವ ಸಲ್ಲಮರ ಮೇಲೆ ಎಷ್ಟು ವಿಶ್ವಾಸವಿದೆ ಎಂದರೆ ಅದನ್ನು ತಕ್ಕಡಿಯ ಒಂದು ತಟ್ಟೆಯಲ್ಲಿರಿಸಿ ಈ ಕಾಲಘಟ್ಟದ ಎಲ್ಲ ಜನರ ವಿಶ್ವಾಸಗಳನ್ನು ಇನ್ನೊಂದು ತಟ್ಟೆಯಲ್ಲಿ ಇರಿಸಿದರೆ ಅಲ್ಲಾಹನ ಅನುಗ್ರಹದಿಂದ ನನ್ನ ವಿಶ್ವಾಸದ ತಟ್ಟೆ ಅವರೆಲ್ಲರ ವಿಶ್ವಾಸದ ತಟ್ಟೆಗಿಂತ ಭಾರವಾಗಿ ತೂಗುವುದು."

(ಕರಾಮಾತುಸ್ಸಾದಿಖೀನ್ – ಪುಟ 25)

7. "ನಾನು ಹಝ್ರತ್ ಮುಹಮ್ಮದ್ ರಸೂಲ್ ಸಲ್ಲಲ್ಲಾಹು ಅಲೈಹಿ ವ ಸಲ್ಲಮರನ್ನು ಸತ್ಯ ಹೃದಯದೊಂದಿಗೆ ನಂಬುತ್ತೇನೆ. ಎಲ್ಲ ನುಬುವ್ವತ್‌ಗಳು ಅವರಲ್ಲಿ ಸಮಾಪ್ತಿ ಹೊಂದಿವೆ ಎಂದು ನಾನು ನಂಬುತ್ತೇನೆ. ಅವರು ತಂದ ಶರೀಅತ್ ಖಾತಮುಶ್ಶರಾಯಿಅ್ (ಶರೀಅತ್‌ಗಳಲ್ಲಿ ಶ್ರೇಷ್ಠವಾದುದು) ಆಗಿದೆ. ಆದರೆ ಒಂದು ವಿಧದ ನುಬುವ್ವತ್ ಕೊನೆಗೊಂಡಿಲ್ಲ. ಅದು ಹಝ್ರತ್ ಮುಹಮ್ಮದ್ ರಸೂಲ್

# ಶಾಂತಿ, ಸೌಹಾರ್ದ ಮತ್ತು ಭ್ರಾತೃತ್ವ

**ಜನಾಬ್ ರಫೀಖ್ ಅಹ್ಮದ್ ಬೇಗ್ ಸಾಹಿಬ್, ಸದರ್ ಮಜ್ಲಿಸ್ ಖುದ್ದಾಮುಲ್ ಅಹ್ಮದಿಯಾ ಭಾರತ, ಮಂಗಳೂರಿನ ಪುರಭವನದಲ್ಲಿ 2014 ಮೇ ದಿನಾಂಕ 3ರಂದು ಜರಗಿದ ಶಾಂತಿ ಸಮ್ಮೇಳನದಲ್ಲಿ ಮಾಡಿದ ಅಧ್ಯಕ್ಷ ಭಾಷಣ.**

ಮಾನವೀಯ ಸಂಸ್ಕೃತಿ ಮತ್ತು ನಮ್ಮ ನಾಗರಿಕತೆಗಳನ್ನು ಜೀವಂತವಾಗಿರಿಸುವುದು ಹೇಗೆ ಎಂಬ ಮಹತ್ವಪೂರ್ಣ ಪ್ರಶ್ನೆಯ ಎದುರಿಗೆ ಈಗ ಲೋಕ ನಿಂತು ಕೊಂಡಿದೆ. ಮಾನವೀಯ ಸಂಸ್ಕೃತಿ ಬಾಳಿ ಬದುಕಲು ಆವಶ್ಯಕವಾದ ಮೂಲ ವಸ್ತು ಶಾಂತಿ ಮತ್ತು ಸೌಹಾರ್ದವಾಗಿದ್ದು ಅವು ಅತ್ಯಂತ ಹೆಚ್ಚು ಮೌಲ್ಯವುಳ್ಳವುಗಳಾಗಿವೆ. ಇವು ನಮ್ಮ ಜೀವಿತದಿಂದ ಸಂಪೂರ್ಣವಾಗಿ ಕೊನೆಗೊಳ್ಳುತ್ತಾ ಇವೆ. ಲೋಕದಾದ್ಯಂತ ಆತಂಕ, ಅಶಾಂತಿ ಮತ್ತು ಅನ್ಯಾಯ ಕಾಣಿಸುತ್ತಿವೆ. ಈ ರೋಗಗಳಿಂದ ಲೋಕದ ಯಾವುದಾದರೊಂದು ಜನಾಂಗ, ಜಾತಿ ಅಥವಾ ಪಂಗಡ ಮಾತ್ರ ಬಾಧಿತವಾಗಿಲ್ಲ. ವಾಸ್ತವಿಕವಾಗಿ ಎಲ್ಲ ಜನಾಂಗಗಳು ರೋಗಗಳಿಗೆ ತುತ್ತಾಗಿವೆ ಮತ್ತು ಮಾನವರು ನಾಶದ ಕಡೆಗೆ ದಿನಂಪ್ರತಿ ಸಾಗುತ್ತಾ ಇರುತ್ತಾರೆ.




ಪರಮಾತ್ಮನ ನಡೆವಳಿಕೆ ಹೇಗಿದೆ ಎಂದರೆ ಅವನು ಮನುಷ್ಯರ ಕಲ್ಯಾಣಕ್ಕೋಸ್ಕರ ಮತ್ತು ಅವರನ್ನು ಪರಿಶುದ್ಧಿ ಮಾಡಲಿಕ್ಕೋಸ್ಕರ ಹಾಗೂ ಅವರನ್ನು ನಾಶದಿಂದ ರಕ್ಷಿಸಲು ಯಾವಾಗಲೂ ತನ್ನ ಸಂದೇಶವಾಹಕರನ್ನು ಕಳುಹಿಸುತ್ತಾ ಇರುತ್ತಾನೆ. ಲೋಕದ ಚರಿತ್ರೆಯಿಂದ ಸಾಬೀತಾಗುವುದೇನೆಂದರೆ, ದೇವನಿಂದ ನೇಮಿಸಲ್ಪಟ್ಟ ಪ್ರವಾದಿಗಳು ನೀಡಿದ ಉಪದೇಶಗಳ ಮೂಲಕವೇ ಜನರು ಶಾಂತಿಯನ್ನು ಗಳಿಸಬಹುದಾಗಿದೆ. ಪ್ರವಾದಿಗಳ ಉಪದೇಶಗಳಲ್ಲಿ ಅತ್ಯಂತ ಮಹತ್ವಪೂರ್ಣವಾದುದು ದೇವನ ಬಗ್ಗೆ ಭಯ (ತಖ್ವಾ) ಆಗಿದೆ. ಮಾನವನ ಜೀವನದ ಪ್ರತಿಯೊಂದು ಭಾಗದಲ್ಲಿ ದೇವಭಯದಿಂದ ವರ್ತಿಸುವ ಮೂಲಕ ಮಾತ್ರ ಶಾಂತಿಯನ್ನು ಗಳಿಸಬಹುದಾಗಿದೆ. ಈ ಶಾಂತಿಯನ್ನು ಗಳಿಸಿಕೊಡಲು ಮತ್ತು ಅದನ್ನು

---

(ಹಿಂದಿನ ಪುಟದಿಂದ)

ಸಲ್ಲಲ್ಲಾಹು ಅಲೈಹಿ ವ ಸಲ್ಲಮರನ್ನು ಪರಿಪೂರ್ಣವಾಗಿ ಅನುಸರಿಸುವ ಮೂಲಕ ಲಭಿಸುತ್ತದೆ. ಅವರ ದೀಪದಿಂದ ಬೆಳಕನ್ನು ಪಡೆಯುವ ನುಬುವ್ವತ್ ಕೊನೆಗೊಂಡಿಲ್ಲ. ಏಕೆಂದರೆ ಅದು ಮುಹಮ್ಮದೀ ನುಬುವ್ವತ್ ಆಗಿದೆ. ಅದು ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ನುಬುವ್ವತಿನ ನೆರಳಾಗಿದೆ. ಆ ನುಬುವ್ವತ್ ಹಝ್ರತ್ ಮುಹಮ್ಮದ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ನುಬುವ್ವತ್ ಮೂಲಕ ದೊರಕುವುದೂ ಅದರ ಅನುಗ್ರಹವನ್ನು ಪ್ರಕಟಿಸುವಂತಹದ್ದೂ ಅದರಿಂದ ಅನುಗ್ರಹ ಗಳಿಸಿದುದೂ ಆಗಿದೆ.

"ಪವಿತ್ರ ಖುರ್‌ಆನನ್ನು ರದ್ದುಗೊಳಿಸಲ್ಪಟ್ಟ ಗ್ರಂಥವೆಂದು ಹೇಳುವವನು, ಮುಹಮ್ಮದೀ ಶರೀಅತ್‌ಗೆ ವಿರುದ್ಧವಾಗಿ ವರ್ತಿಸುವವನು, ತನ್ನ ಶರೀಅತ್ ಚಲಾಯಿಸಲು ಇಚ್ಚಿಸುವವನು, ಹಝ್ರತ್ ಮುಹಮ್ಮದ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರನ್ನು ಅನುಸರಿಸದೆ ತಾನು ಸ್ವತಃ ಏನನ್ನಾದರೂ ಮಾಡಲು ಬಯಸುವವನು– ಇಂತಹ ಮನುಷ್ಯನಿಗೆ ಅಲ್ಲಾಹನು ಶತ್ರುವಾಗಿದ್ದಾನೆ. ಪವಿತ್ರ ಖುರ್ ಆನನ್ನು ತನ್ನ ಜೀವಿತದ ಮಾರ್ಗದರ್ಶಿಯಾಗಿ ಮಾಡುವವನು, ಹಝ್ರತ್ ಮುಹಮ್ಮದ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರನ್ನು ಖಾತಮುಲ್ ಅಂಬಿಯಾ ಎಂದು ನಂಬುವವನು ಮತ್ತು ಅವರ ಅನುಗ್ರಹ ತನಗೆ ಆವಶ್ಯಕವಾಗಿದೆ ಎಂದು ನಂಬುವವನು ಅಲ್ಲಾಹನಿಗೆ ಪ್ರಿಯನಾಗಿದ್ದಾನೆ. ಅಲ್ಲಾಹನು ತನ್ನ ಪ್ರೀತಿ ಸೂಚಿಸುವುದು ಹೇಗೆಂದರೆ ಅಲ್ಲಾಹನು ಅವನನ್ನು ತನ್ನ ಕಡೆಗೆ ಸೆಳೆಯುತ್ತಾನೆ ಮತ್ತು ಅವನಿಗೆ ತನ್ನ ಸಂದೇಶವಾಣಿ ಅವತೀರ್ಣಗೊಳಿಸುತ್ತಾನೆ. ಅವನಿಗೆ ತನ್ನ ಸಹಾಯವಿದೆ ಎಂದು ಸೂಚಿಸಲು ದೃಷ್ಟಾಂತಗಳನ್ನು ಪ್ರಕಟಿಸುತ್ತಾನೆ. ಅವನ ಅನುಸರಣೆ ಪರಿಪೂರ್ಣವಾದರೆ ಅವನಿಗೆ ಝಿಲ್ಲೀ (ನೆರಳಿನ) ನುಬುವ್ವತ್ ನೀಡಲ್ಪಡುತ್ತದೆ. ಅದು ಹಝ್ರತ್ ಮುಹಮ್ಮದ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ನುಬುವ್ವತಿನ ನೆರಳಾಗಿದೆ. ಇಂತಹ ಜನರ ಮೂಲಕ ಇಸ್ಲಾಮ್ ತಾಜಾ ಆಗಿರಲು ಮತ್ತು ಇಸ್ಲಾಮ್ ಯಾವಾಗಲೂ ಶತ್ರುಗಳನ್ನು ಜಯಿಸಲು ಇದು ಆವಶ್ಯಕವಾಗಿದೆ. ಆವಿವೇಕಿಯಾದವನು ವಾಸ್ತವಿಕವಾಗಿ ಧರ್ಮದ ಶತ್ರುವಾಗಿರುತ್ತಾನೆ. ಅಲ್ಲಾಹನ ಸಂದೇಶವಾಣಿ ಇಸ್ಲಾಮ್‌ನಲ್ಲಿ ಜಾರಿಯಾಗಿರುವುದನ್ನು ಅವನು ಬಯಸುವುದಿಲ್ಲ. ಇತರ ಮೃತ ಧರ್ಮಗಳ ಹಾಗೆ ಇಸ್ಲಾಮಿನ ಸ್ಥಿತಿ ಸಹ ಆಗಲಿ ಎಂದು ಅವನು ಇಚ್ಚಿಸುತ್ತಾನೆ. ಆದರೆ ಅಲ್ಲಾಹನು ಹಾಗೆ ಇಚ್ಚಿಸುವುದಿಲ್ಲ."

(ಚಶ್ಮಯೆ ಮಅ್‌ರಿಫತ್ – ಪುಟ 325)

ಇದು ಅತ್ಯಂತ ಮುಖ್ಯ ಮತ್ತು ಮೂಲಭೂತ ವಿಷಯವಾಗಿದೆ. ಇದರ ವಾಸ್ತವಿಕತೆಯನ್ನು ಮನವರಿಕೆ ಮಾಡಿಕೊಳ್ಳುವುದು ಆವಶ್ಯವಾಗಿದೆ. ಅಲ್ಲಾಹನು ನಮ್ಮ ಮುಸ್ಲಿಮ್ ಸಹೋದರರಿಗೆ ಬುದ್ಧಿಯನ್ನೂ ತಿಳುವಳಿಕೆಯನ್ನೂ ದಯಪಾಲಿಸಲಿ. ಹಝ್ರತ್ ಮುಹಮ್ಮದ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಉನ್ನತ, ಶ್ರೇಷ್ಠ ಮತ್ತು ಅನುಗ್ರಹೀತ ಖತ್‌ಮೆ ನುಬುವ್ವತ್ ಸ್ಥಾನವನ್ನು ಜ್ಞಾನಪ್ರಕಾಶದಿಂದ ಮನವರಿಕೆ ಮಾಡಿಕೊಳ್ಳುವ ಸೌಭಾಗ್ಯವನ್ನು ಅಲ್ಲಾಹನು ನಮಗೆ ದಯಪಾಲಿಸಲಿ.

ಅಲ್ಲಾಹುಮ್ಮ ಆಮೀನ್ (ಓ ಅಲ್ಲಾಹ್ ಹೀಗೆಯೇ ಮಾಡು).

**(ನಝಾರತ್ ನಶ್‌ರೋ ಇಶಾಅತ್ ಪ್ರಕಟಿತ)**

+++

ಸ್ಥಾಪಿಸಲು ಈ ಕಾಲಘಟ್ಟದಲ್ಲಿ ಭಾರತದ ಪಂಜಾಬು ರಾಜ್ಯದ ಒಂದು ಹಿಂದುಳಿದ ಗ್ರಾಮವಾದ ಖಾದಿಯಾನ್‌ನಲ್ಲಿ 1835ರಲ್ಲಿ ಹಝ್ರತ್ ಮಿರ್ಝಾ ಗುಲಾಮ್ ಅಹ್ಮದ್(ಅ) ಜನಿಸಿದರು. ಅವರು 1889ರಲ್ಲಿ ಅಹ್ಮದಿಯಾ ಜಮಾಅತನ್ನು ಸ್ಥಾಪಿಸಿದರು. ಅದು ಈಗ ಲೋಕದಾದ್ಯಂತ ಪ್ರಸಿದ್ಧಿಯನ್ನು ಗಳಿಸಿದೆ. ಅದು ಒಬ್ಬ ಆಧ್ಯಾತ್ಮಿಕ ನೇತಾರರ ನೇತೃತ್ವದಲ್ಲಿ ಲೋಕದಲ್ಲಿ ಶಾಂತಿ ಮತ್ತು ಸೌಹಾರ್ದವನ್ನು ಸ್ಥಾಪಿಸಲು ಪ್ರಯತ್ನಿಸುತ್ತಾ ಇದೆ. ಸಾರ್ವಲೌಕಿಕ ಭ್ರಾತೃತ್ವ ಮತ್ತು ಶಾಂತಿಯ ಸ್ಥಾಪನೆ ಅಹ್ಮದಿಯಾ ಜಮಾಅತಿನ ಸ್ಥಾಪಕರ ಆಗಮನದ ಉದ್ದೇಶಗಳಲ್ಲಿ ಮಹತ್ವಪೂರ್ಣವಾದ ಉದ್ದೇಶವಾಗಿದೆ. ವಾಸ್ತವಿಕ ವಿಷಯವೇನೆಂದರೆ, ನಮ್ಮ ಜಮಾಅತಿನ ಪ್ರತಿಯೊಂದು ಕೆಲಸ ಇಸ್ಲಾಮ್ ಧರ್ಮದ ಪ್ರವಾದಿ ಹಝ್ರತ್ ಮುಹಮ್ಮದ್ ಪೈಗಂಬರರ(ಸ) ಉಪದೇಶಗಳಿಗೆ ಅನುಸಾರವಾಗಿದೆ. ಆ ಉಪದೇಶಗಳನ್ನು 1500 ವರ್ಷಗಳ ಹಿಂದೆ ಪರಮಾತ್ಮನು ಹಝ್ರತ್ ಪೈಗಂಬರರಿಗೆ(ಸ) ನೀಡಿದ್ದನು. ದುರದೃಷ್ಟಕರವಾಗಿ ಮುಸ್ಲಿಮರು ಆ ಉಪದೇಶಗಳನ್ನು ಮರೆತು ಬಿಟ್ಟಾಗ ಈ ಉಪದೇಶಗಳನ್ನು ಲೋಕದಲ್ಲಿ ಹೊಸದಾಗಿ ಹರಡಲು ಪರಮಾತ್ಮನು ಹಝ್ರತ್ ಮಿರ್ಝಾ ಗುಲಾಮ್ ಅಹ್ಮದ್(ಅ) ಅವರನ್ನು ಆಯ್ಕೆ ಮಾಡಿದನು. ಆ ಉಪದೇಶಗಳೆಲ್ಲ ಹಝ್ರತ್ ಪೈಗಂಬರರಿಗೆ(ಸ) ದೊರೆತ ಸಂದೇಶವಾಣಿಗಳ ಪ್ರಕಾರವೇ ಇದ್ದುವು. ನಾವು ನೆನಪಿಡಬೇಕಾದದು ಏನೆಂದರೆ, ನಾವು ಶಾಂತಿಯ ಬಗ್ಗೆ ಮಾತನಾಡುವಾಗ ನಾವು ಅದರ ಎಲ್ಲ ಪಾರ್ಶ್ವಗಳನ್ನು ನಮ್ಮ ಮುಂದಿರಿಸಬೇಕಾಗಿದೆ. ನಮ್ಮ ಮನೆಗಳಲ್ಲಿ ಶಾಂತಿಯು ಸ್ಥಾಪಿತವಾಗುವಾಗ ನಮ್ಮ ಸಮಾಜದಲ್ಲಿ ಶಾಂತಿ ಸ್ಥಾಪನೆ ಸಾಧ್ಯವಾಗುವುದು. ಏಕೆಂದರೆ ನಮ್ಮ ಮನೆಗಳಲ್ಲಿ ಶಾಂತಿಯ ವಾತಾವರಣ ಸ್ಥಾಪಿತವಾಗುವತನಕ ನಗರಗಳಲ್ಲಿ ಶಾಂತಿಯನ್ನೂ ಭ್ರಾತೃತ್ವವನ್ನೂ ಸ್ಥಾಪಿಸುವುದು ಸಾಧ್ಯವಾಗಲಾರದು. ಮನೆಗಳಲ್ಲಿ ಅಶಾಂತಿ ಉಂಟಾದರೆ ಅದರ ಪರಿಣಾಮ ನಗರದ ಮೇಲೆ ತಲೆದೋರುತ್ತದೆ. ನಗರಗಳಲ್ಲಿ ಅಶಾಂತಿಯ ಪರಿಸ್ಥಿತಿ ಉಂಟಾದರೆ ಅದರ ಪರಿಣಾಮ ದೇಶದ ಮೇಲೆ ಪ್ರಭಾವ ಬೀರುತ್ತದೆ. ಇದೇ ರೀತಿ ಒಂದು ನಗರದ ಅಶಾಂತ ಪರಿಸ್ಥಿತಿಯಿಂದ ದೇಶವು ಪ್ರಭಾವಿತವಾಗುತ್ತದೆ. ಈ ರೀತಿ ಶಾಂತಿಯ ವಲಯವು ಬಹಳ ವಿಶಾಲವಾಗಿ ಹಬ್ಬಿರುತ್ತದೆ. ನಾವು ಈ ವಿಷಯಗಳನ್ನು ಗಮನಿಸುವಾಗ ಇವುಗಳ ಬಗ್ಗೆ ಮಾತನಾಡಲು ಧಾರಾಳ ಸಮಯದ ಆವಶ್ಯಕತೆ ಇದೆ. ಹೀಗಿದ್ದರೂ ನಾನು ಶಾಂತಿ ಮತ್ತು ಸೌಹಾರ್ದದ ಕೆಲವು ಪಾರ್ಶ್ವಗಳ ಬಗ್ಗೆ ಸಂಕ್ಷಿಪ್ತವಾಗಿ ಇಸ್ಲಾಮ್ ಧರ್ಮದ ಉಪದೇಶಗಳನ್ನು ನಿಮ್ಮ ಮುಂದೆ ಇರಿಸಲು ಪ್ರಯತ್ನಿಸುವೆನು.

ಸಹೋದರ ಸಹೋದರಿಯರೇ, ಲೋಕದಲ್ಲಿ ಅಶಾಂತಿಗೆ ಸಂಬಂಧಿಸಿ ಈಗ ಇಸ್ಲಾಮಿನ ವಿರುದ್ಧ ಅನೇಕ ದೋಷಾರೋಪಗಳನ್ನು ಮಾಡಲಾಗುತ್ತಿದೆ. ಲೋಕದಲ್ಲಿ ಅಸ್ತವ್ಯಸ್ತತೆಗೆ ಕಾರಣ ಇಸ್ಲಾಮ್ ಧರ್ಮವಾಗಿದೆ ಎಂದು ಬಹಳ ಹೆಚ್ಚು ಸಾರಿ ಆರೋಪ ಹೇರಲಾಗುತ್ತಿದೆ. ಆದರೆ ಇಸ್ಲಾಮ್ ಶಬ್ದದ ಅರ್ಥವೇ ಶಾಂತಿ ಎಂದಾಗಿದೆ. ಇದು ಸತ್ಯವಾಗಿದ್ದರೂ ಇಸ್ಲಾವ್ ಧರ್ಮವನ್ನು ಆರೋಪಗಳಿಗೆ ಗುರಿಪಡಿಸಲಾಗುತ್ತಿದೆ. ವಾಸ್ತವಿಕ ವಿಷಯವೇನೆಂದರೆ, ಶಾಂತಿಯ ಸ್ಥಾಪನೆಗೆ ಮಾರ್ಗದರ್ಶನ ನೀಡುವ ಏಕಮಾತ್ರ ಧರ್ಮ ಇಸ್ಲಾಮ್ ಆಗಿದೆ. ಅದನ್ನು ಸ್ಥಾಪಿಸಲು ವಿವಿಧ ತತ್ವಗಳನ್ನು ಅದು ಪ್ರತಿಪಾದಿಸಿದೆ.

ಸಹೋದರ ಸಹೋದರಿಯರೇ, ಇಲ್ಲಿ ಜಮಾಯಿಸಿರುವ ನಾವೆಲ್ಲರೂ ಈ ಲೋಕ ಒಂದು ಗ್ಲೋಬಲ್ ವಿಲೇಜ್ (ಜಾಗತಿಕ ಗ್ರಾಮ) ಆಗಿದೆ ಎಂದು ಅಂಗೀಕರಿಸುತ್ತೇವೆ. ಇಂಟರ್‌ನೆಟ್, ಇಲೆಕ್ಟ್ರೋನಿಕ್ ಮೀಡಿಯಾ ಮತ್ತು ಪ್ರಿಂಟ್ ಮೀಡಿಯಾ ಮೂಲಕ ನಾವು ಒಬ್ಬರಿನ್ನೊಬ್ಬರೊಂದಿಗೆ ಜೋಡಿಸಿಕೊಂಡಿರುತ್ತೇವೆ. ಲೋಕದ ಎಲ್ಲ ಜನಾಂಗಗಳು ಸಹ ಒಂದು ಇನ್ನೊಂದರ ಸಮೀಪಕ್ಕೆ ಬರುತ್ತಿವೆ. ಆದುದರಿಂದ ಲೋಕದ ನಿವಾಸಿಗಳಾದ ಎಲ್ಲ ಜನಾಂಗಗಳು ಶಾಂತಿ ಮತ್ತು ಭ್ರಾತೃತ್ವ ಸ್ಥಾಪನೆಗೋಸ್ಕರ ಒಗ್ಗೂಡಿ ಪ್ರಯತ್ನಿಸಬೇಕಾದುದು ಆವಶ್ಯಕವಾಗಿದೆ. ಸರಕಾರಗಳು ಎಂತಹ ಧೋರಣೆಗಳನ್ನು ರೂಪಿಸಬೇಕೆಂದರೆ, ವಿವಿಧ ಜನಾಂಗಗಳು ಒಬ್ಬರಿನ್ನೊಬ್ಬರ ಭಾವನೆಗಳನ್ನು ಗೌರವಿಸಿ ದೇಶವನ್ನು ಅಭಿವೃದ್ಧಿಯ ಮಾರ್ಗದಲ್ಲಿ ಕೊಂಡೊಯ್ಯುವಂತಹದಾಗಿರಬೇಕು. ಸರಕಾರದ ಧೋರಣೆಗಳಿಂದ ಯಾರದಾದರೂ ಭಾವನೆಗಳಿಗೆ ನೋವುಂಟಾಗುವುದಾದರೆ ಅಥವಾ ಏನಾದರೂ ಹಾನಿ ಉಂಟಾಗುವುದಾದರೆ ಅಂತಹ ಧೋರಣೆಗಳನ್ನು ಕೊನೆಗೊಳಿಸಬೇಕಾಗಿದೆ. ಪರಸ್ಪರ ಸಂಬಂಧ ಸ್ಥಾಪಿಸಿ ಲೋಕವು ಒಂದಾಗಲು ನಾವೆಲ್ಲರೂ ಜೊತೆಸೇರಿ ಪ್ರಯತ್ನಿಸಬೇಕಾಗಿದೆ. ಇಸ್ಲಾಮಿನ ಮೂಲಭೂತ ತತ್ವಗಳು ಇವೇ ಆಗಿವೆ.

ಇಸ್ಲಾಮ್ ಧರ್ಮದ ಮೂಲತತ್ವವೇನೆಂದರೆ, "ಯಾರ ನಾಲಗೆಯಿಂದಲೂ ಕೈಗಳಿಂದಲೂ ಯಾರಿಗಾದರೂ ಹಾನಿ ಉಂಟಾಗುವುದಿಲ್ಲವೋ ಅವನೇ ನೈಜ ಮುಸ್ಲಿಮನಾಗಿದ್ದಾನೆ." ಮುಸ್ಲಿಮನು ಯಾರೆಂದು ಈ ರೀತಿ ವಿಶದೀಕರಿಸಿದುದು ಇಸ್ಲಾಮಿನ ಪ್ರವಾದಿ ಹಝ್ರತ್ ಮುಹಮ್ಮದ್ ಪೈಗಂಬರರೇ(ಸ) ಆಗಿದ್ದಾರೆ. ಇಸ್ಲಾಮ್ ಧರ್ಮ ಇಂತಹ ಮೂಲಭೂತ ಸುಂದರ ಉಪದೇಶಗಳನ್ನು ಒಳಗೊಂಡಿರುವಾಗ ಅದರ ಮೇಲೆ ದೋಷಾರೋಪ ಮಾಡಲು ಸಾಧ್ಯವೇ?

ಅಹ್ಮದಿಯಾ ಜಮಾಅತಿನ ಸ್ಥಾಪಕರಾದ ಹಝ್ರತ್ ಮಿರ್ಝಾ ಗುಲಾಮ್ ಅಹ್ಮದ್(ಅ) ಹೀಗೆ ಹೇಳುತ್ತಾರೆ:

"ನನ್ನ ಉಪದೇಶವೇನೆಂದರೆ, ನೀವು ಎರಡು ವಿಷಯಗಳನ್ನು ನೆನಪಿಡಿರಿ. ಒಂದನೆಯದಾಗಿ, ನೀವು ದೇವನಿಗೆ ಭಯಪಡಿರಿ. ಎರಡನೆಯದಾಗಿ, ನೀವು ಸ್ವತಃ ನಿಮ್ಮ ಬಗ್ಗೆ ಕಾಳಜಿ ಹೊಂದಿರುವ ಹಾಗೆ ಅನ್ಯರ ಬಗ್ಗೆ ಸಹಾನುಭೂತಿ ಹೊಂದಿರಿ. ಯಾರಿಂದಾದರೂ ಏನಾದರೂ ತಪ್ಪು ಆಗಿದ್ದರೆ ಅದನ್ನು ಕ್ಷಮಿಸಿರಿ. ನೀವು ಅದರ ಬಗ್ಗೆ ಹೆಚ್ಚು ಲಕ್ಷ್ಯನೀಡಿ ಹಗೆತನದಿಂದ ವರ್ತಿಸಬಾರದು.

(ಮಲ್‌ಪೂಝಾತ್ – ಭಾಗ 5 ಪುಟ 69)

ಅಹ್ಮದಿಯಾ ಜಮಾಅತಿನ ದ್ವಿತೀಯ ಖಲೀಫರು ತಮ್ಮ ಒಂದು ಉರ್ದು ಪದ್ಯದಲ್ಲಿ ಹೀಗೆ ಹೇಳುತ್ತಾರೆ:
ಅಮನ್ ಕೆ ಸಾಥ್ ರಹೋ ಫಿತ್ನೋಂ ಮೇ ಹಿಸ್ಸ ಮತ್‌ಲೋ
ಬಾಅಸೆ ಫಿಕ್ರೋ ಪರೇಶಾನಿಯೆ ಹುಕ್ಕಾಮ್ ನ ಹೋ.
ಅರ್ಥ: ಶಾಂತಿಯಿಂದ ಜೀವಿಸಿರಿ. ಹಿಂಸಾಚಾರದಲ್ಲಿ ಭಾಗವಹಿಸಬೇಡಿರಿ. ಸರಕಾರಿ ಅಧಿಕಾರಿಗಳ ಚಿಂತೆ ಮತ್ತು ಆತಂಕಗಳಿಗೆ ಕಾರಣರಾಗಬೇಡಿರಿ.

ನಾಲಗೆ ಮತ್ತು ಕೈಗಳಿಂದ ದ್ವೇಷವನ್ನು ಪ್ರಚಾರ ಮಾಡುವವರು ಶಿಕ್ಷಾರ್ಹರು ಎಂದು ಇಸ್ಲಾಮ್ ಕಲಿಸುತ್ತದೆ. ಕೆಳಮಟ್ಟದಿಂದ ಪ್ರಾರಂಭಿಸಿ ಅಂತರ್‍ರಾಷ್ಟ್ರೀಯ ಮಟ್ಟದ ತನಕ ನಮ್ಮ ಧರ್ಮಗಳು ಮತ್ತು ಪಂಗಡಗಳು ಈ ಸುವರ್ಣ ತತ್ವವನ್ನು ಪಾಲಿಸಲು ತೊಡಗುವುದಾದರೆ ರಾಜಕೀಯ ಸಮಸ್ಯೆಗಳು ಎಂದೂ ತಲೆದೋರಲಾರವು ಮತ್ತು ನಮ್ಮ ಸಮಾಜದಲ್ಲಿ

ಅಶಾಂತಿ ಉಂಟಾಗಲಾರದು.. ಇಸ್ಲಾಮ್ ಇನ್ನೊಂದು ವಿಷಯದ ಕಡೆಗೆ ನಮ್ಮ ಗಮನ ಹರಿಸುತ್ತದೆ. ಶಾಂತಿ ಸ್ಥಾಪನೆಗೊಳ್ಳಬೇಕಾದರೆ ಯಾರೂ ಎಂದೂ ಅಹಂಕಾರ ಮತ್ತು ಹೆಮ್ಮೆಯನ್ನು ಪ್ರಕಟಿಸಬಾರದು ಮತ್ತು ಅದನ್ನು ಪ್ರಚಾರಗೊಳಿಸಬಾರದು. ಹಝ್ರತ್ ಮುಹಮ್ಮದ್ ಪೈಗಂಬರರು[ಸ] ಇದೇ ಕಾರಣದಿಂದ ಹೀಗೆ ಹೇಳಿದ್ದಾರೆ: "ಕಪ್ಪು ವರ್ಣದವನಿಗೆ ಬಿಳಿ ವರ್ಣದವನ ಮೇಲೆ ಶ್ರೇಷ್ಠತೆ ಇಲ್ಲ. ಬಿಳಿ ವರ್ಣದವನಿಗೆ ಕಪ್ಪು ವರ್ಣದವನ ಮೇಲೆ ಶ್ರೇಷ್ಠತೆ ಇಲ್ಲ." ಇಂದಿನ ಆಧುನಿಕ ಲೋಕದಲ್ಲಿ ನಾವು ಪರಸ್ಪರ ಆಶ್ರಯಿಸಿಕೊಂಡಿರುತ್ತೇವೆಂಬುದು ಒಂದು ಸತ್ಯವಾಗಿದೆ. ಆದುದರಿಂದ ಇಸ್ಲಾಮ್ ಒತ್ತಿ ಹೇಳುವುದೇನೆಂದರೆ, ಪರಸ್ಪರ ವ್ಯವಹಾರಗಳಲ್ಲಿ ಯಾವಾಗಲೂ ನ್ಯಾಯವನ್ನು ಪಾಲಿಸಬೇಕು. ಪವಿತ್ರ ಖುರ್‌ಆನ್ ಇದರ ಬಗ್ಗೆ ಹೀಗೆ ಹೇಳಿದೆ:

ವಲಾ ಯಜ್‌ರಿಮನ್ನಕುಮ್ ಶನಆನು ಖೌಮಿನ್ ಅಲಾ
ಅಲ್ಲಾ ತಅ್‌ದಿಲೂ ಇಅ್‌ದಿಲೂ ಹೂವ ಅಖ್‌ರಬು ಲಿತ್ತಖ್ವಾ

"ಒಂದು ಜನತೆ ನಿಮ್ಮೊಂದಿಗೆ ತೋರಿಸಿದ ವಿರೋಧವು ಅವರೊಡನೆ ಅನ್ಯಾಯದಿಂದ ವರ್ತಿಸುವರೆ ನಿಮ್ಮನ್ನು ಪ್ರೇರೇಪಿಸದಿರಲಿ. ನೀವು ನ್ಯಾಯಪಾಲನೆ ಮಾಡಿರಿ. ಅದು ದೇವಭಕ್ತಿಗೆ ಅತಿ ಸಮೀಪವಾಗಿದೆ."

ಲೋಕದಲ್ಲಿ ಶಾಂತಿಯನ್ನು ಸ್ಥಾಪಿಸಲು ಇಸ್ಲಾಮ್ ತನ್ನ ಅನುಯಾಯಿಗಳಿಗೆ ನೀಡುವ ಉಪದೇಶವೇನೆಂದರೆ, "ಅಲ್ ಹಮ್‌ದು ಲಿಲ್ಲಾಹಿ ರಬ್ಬಿಲ್ ಆಲಮೀನ್"–"ಎಲ್ಲ ಸ್ತುತಿ ಸರ್ವಲೋಕಗಳ ಪರಿಪಾಲಕನಾದ ಅಲ್ಲಾಹನಿಗೆ." ಅಲ್ಲಾಹನೇ ಸರ್ವಲೋಕಗಳನ್ನು ಸೃಷ್ಟಿಸಿದವನಾಗಿದ್ದಾನೆ. ಅವನು ಲೋಕದ ಎಲ್ಲ ಆವಶ್ಯಕತೆಗಳನ್ನು ಈಡೇರಿಸಲು ವ್ಯವಸ್ಥೆಗಳನ್ನು ಮಾಡಿರುವನು. ಅವನು ಪ್ರವಾದಿಗಳನ್ನೂ ಋಷಿಗಳನ್ನೂ ಮುನಿಗಳನ್ನೂ ಜನರಿಗೆ ನೇರಮಾರ್ಗವನ್ನು ತೋರಿಸಲು ಪ್ರತಿಯೊಂದು ಜನಾಂಗದಲ್ಲಿ ಕಳುಹಿಸಿರುವನು. ಅವರೆಲ್ಲರೂ ತಮ್ಮ ತಮ್ಮ ಜನಾಂಗಗಳಿಗೆ ದೇವನ ಸರಿಯಾದ ವದನವನ್ನು ತೋರಿಸಿಕೊಟ್ಟರು.

ಪವಿತ್ರ ಖುರ್ ಆನ್ ಹೀಗೆ ಹೇಳಿದೆ:
"ವ ಇನ್‌ಮ್ಮಿನ್ ಉಮ್ಮತಿನ್ ಇಲ್ಲಾ ಖಲಾ ಫೀಹಾ ನಧೀರ್"–
"ಒಬ್ಬ ಮುನ್ನೆಚ್ಚರಿಕೆಗಾರನು ಆಗಮಿಸದ ಯಾವ ಜನಾಂಗವೂ ಇಲ್ಲ."

ಖುರ್‌ಆನಿನ ಇನ್ನೊಂದು ವಚನ ಹೀಗಿದೆ:
"ಲಿಕುಲ್ಲಿ ಖೌಮಿನ್ ಹಾದ್."–

"ನಾವು ಪ್ರತಿಯೊಂದು ಜನಾಂಗಕ್ಕೆ ಮಾರ್ಗದರ್ಶಕನನ್ನು ಕಳುಹಿಸಿದ್ದೇವೆ." ಆದುದರಿಂದ ಎಲ್ಲ ಜನಾಂಗಗಳಲ್ಲಿ ಆಗಮಿಸಿದ ಪ್ರವಾದಿ, ಸಂದೇಶವಾಹಕ, ಋಷಿ, ಮುನಿ ಮೊದಲಾದವರು ಸತ್ಯವಂತರೆಂದು ಅಂಗೀಕರಿಸುವ ತನಕ ಯಾವ ಮನುಷ್ಯನೂ ಮುಸ್ಲಿಮನಾಗಲಾರನು. ಲೋಕದ ಎಲ್ಲ ಜನಾಂಗಗಳಿಗೆ ಅವತೀರ್ಣವಾದ ದೈವಿಕ ಗ್ರಂಥಗಳನ್ನು ಮತ್ತು ಆ ಜನಾಂಗಗಳಲ್ಲಿ ಆಗಮಿಸಿದ ಎಲ್ಲ ಪ್ರವಾದಿಗಳನ್ನು ಸತ್ಯವಂತರೆಂದು ನಂಬುವ ತನಕ ಯಾವ ಮನುಷ್ಯನೂ ಇಸ್ಲಾಮ್ ಧರ್ಮವನ್ನು ಪ್ರವೇಶಿಸಲು ಸಾಧ್ಯವಾಗದು. ಮುಸ್ಲಿಮರು ತಮ್ಮ ಮಸ್‌ಜಿದ್‌ಗಳನ್ನು ಮಾತ್ರವಲ್ಲ ಅನ್ಯ ಧರ್ಮಗಳ ಆರಾಧನಾಲಯಗಳನ್ನು ರಕ್ಷಿಸಬೇಕೆಂಬ ಆಜ್ಞೆ ಇಸ್ಲಾಮ್ ನೀಡುತ್ತದೆ. ನಾವು ಲೋಕದಲ್ಲಿ ಈಗ ಶಾಂತಿ ಸ್ಥಾಪಿಸಲು ಬಯಸುವುದಾದರೆ, ನಾವು ಎಂತಹ ಉಪದೇಶಗಳ ಪ್ರಕಾರ ವರ್ತಿಸಬೇಕೆಂದರೆ, ನಾವು ಒಬ್ಬರಿನ್ನೊಬ್ಬರ ಭಾವನೆಗಳನ್ನು ಪರಿಗಣಿಸಬೇಕು; ಧಾರ್ಮಿಕ ಆರಾಧನಾಲಯಗಳನ್ನು ಗೌರವಿಸಬೇಕು. ಅಹ್ಮದಿಯಾ ಜಮಾಅತಿನ ಸ್ಥಾಪಕರು ಹೀಗೆ ಹೇಳುತ್ತಾರೆ:

"ಹಿಂದೂ ಮತ್ತು ಮುಸ್ಲಿಮರಾದ ನಾವು ನೂರಾರು ಭಿನ್ನಾಭಿಪ್ರಾಯಗಳನ್ನು ಹೊಂದಿದವರಾಗಿದ್ದರೂ ಲೋಕದ ಸೃಷ್ಟಿಕರ್ತನೂ ಒಡೆಯನೂ ಆಗಿರುವ ಪರಮಾತ್ಮನಲ್ಲಿ ವಿಶ್ವಾಸವನ್ನು ಹೊಂದಿರುವುದರಲ್ಲಿ ಒಂದಾಗಿರುತ್ತೇವೆ. ನಾವು ಮನುಷ್ಯರು ಎಂಬ ಹೆಸರನ್ನು ಹೊಂದಿರುವುದರಲ್ಲಿ ಭಾಗೀದಾರರಾಗಿದ್ದೇವೆ. ನಾವೆಲ್ಲರೂ ಮನುಷ್ಯರೆಂದು ಕರೆಯಲ್ಪಡುತ್ತಿದ್ದೇವೆ. ನಾವು ಒಂದೇ ದೇಶದ ನಿವಾಸಿಗಳಾದ ಕಾರಣ ನಾವು ಒಬ್ಬರಿನ್ನೊಬ್ಬರ ನೆರೆಹೊರೆಯವರಾಗಿದ್ದೇವೆ. ಆದುದರಿಂದ ಪರಿಶುದ್ಧ ಹೃದಯದಿಂದಲೂ ಉತ್ತಮ ಸಂಕಲ್ಪದಿಂದಲೂ ಒಬ್ಬರಿನ್ನೊಬ್ಬರ ಸ್ನೇಹಿತರಾಗುವುದು ನಮ್ಮ ಕಡ್ಡಾಯ ಕರ್ತವ್ಯವಾಗಿದೆ. ಧಾರ್ಮಿಕ ಮತ್ತು ಲೌಕಿಕ ಸಂಕಷ್ಟಗಳ ಸಂದರ್ಭಗಳಲ್ಲಿ ಪರಸ್ಪರ ಸಹಾನುಭೂತಿಯಿಂದ ವರ್ತಿಸಬೇಕು ಮತ್ತು ಒಬ್ಬರು ಇನ್ನೊಬ್ಬರ ಅವಯವ ಅಥವಾ ಭಾಗವಾಗಿರುವಂತಾಗಬೇಕು.

"ಪ್ರಿಯ ದೇಶ ಬಾಂಧವರೇ, ಸಹಾನುಭೂತಿಯ ಉಪದೇಶ ನೀಡದ ಧರ್ಮವು ಸರಿಯಾದ ಧರ್ಮವಲ್ಲ. ಯಾವ ಮನುಷ್ಯನಲ್ಲಿ ಸಹಾನುಭೂತಿಯ ಗುಣವು ಇಲ್ಲವೋ ಅವನು ಮನುಷ್ಯನಲ್ಲ. ನಮ್ಮ ದೇವನು ಯಾವ ಜನಾಂಗದೊಂದಿಗೂ ವ್ಯತ್ಯಾಸದಿಂದ ವರ್ತಿಸಿಲ್ಲ. ಉದಾಹರಣೆಗೆ, ಆರ್ಯಾವರ್ತದ ಜನಾಂಗಗಳಿಗೆ ನೀಡಿದಂತಹ ಮಾನವೀಯ ಶಕ್ತಿ ಸಾಮರ್ಥ್ಯಗಳನ್ನು ಅವನು ಅರಬ್ ಜನಾಂಗಗಳಿಗೂ ಫಾರಸೀಯರಿಗೂ ಶಾಮ್ ದೇಶದವರಿಗೂ ಚೈನಾದವರಿಗೂ ಜಪಾನಿನವರಿಗೂ ಯುರೋಪು ಮತ್ತು ಅಮೇರಿಕದ ಜನಾಂಗಗಳಿಗೂ ನೀಡಿರುವನು. ಎಲ್ಲ ಜನಾಂಗಗಳಿಗೂ ದೇವನ ಭೂಮಿ ವಾಸಸ್ಥಳವಾಗಿದೆ. ಸೂರ್ಯ, ಚಂದ್ರ ಮತ್ತು ಅನೇಕ ನಕ್ಷತ್ರಗಳು ಎಲ್ಲರಿಗೂ ಪ್ರಕಾಶನೀಡುತ್ತವೆ ಮತ್ತು ಇತರ ಸೇವೆಗಳನ್ನೂ ಮಾಡುತ್ತವೆ. ದೇವನು ಸೃಷ್ಟಿಸಿದ ಗಾಳಿ, ನೀರು, ಬೆಂಕಿ ಮತ್ತು ಮಣ್ಣು, ಹಾಗೆಯೇ ಅವನಿಂದ ಸೃಷ್ಟಿಸಲ್ಪಟ್ಟ ಧಾನ್ಯ, ಫಲವಸ್ತುಗಳು ಮತ್ತು ಗಿಡ ಮೂಲಿಕೆಗಳು ಇವುಗಳಿಂದ ಎಲ್ಲ ಜನಾಂಗದವರು ಪ್ರಯೋಜನವನ್ನು ಪಡೆಯುತ್ತಿದ್ದಾರೆ. ದೇವನ ಈ ಸದ್ಗುಣಗಳು ನಮಗೆ ನೀಡುವ ಪಾಠವೇನೆಂದರೆ, ನಾವೆಲ್ಲರೂ ನಮ್ಮ ಸಹಜೀವಿಗಳಾದ ಎಲ್ಲ ಮನುಷ್ಯರೊಂದಿಗೆ ಔದಾರ್ಯಪೂರ್ವಕವಾಗಿ ವರ್ತಿಸಬೇಕು; ನಾವು ಸಂಕುಚಿತ ಹೃದಯ ಹೊಂದಿದವರೂ ಧೈರ್ಯಗೇಡಿಗಳೂ ಆಗಬಾರದು." (ಪೈಗಾಮೆ ಸುಲ್ಹ್)

ಇದೇ ರೀತಿ ಅಹ್ಮದಿಯಾ ಜಮಾಅತಿನ ಸ್ಥಾಪಕರು ಹೇಳುತ್ತಾರೆ:

"ನಾವು ಎಲ್ಲ ಪ್ರವಾದಿಗಳನ್ನು ಸತ್ಯವಂತರೆಂದು ಭಾವಿಸಿಕೊಳ್ಳುವುದು ಅತ್ಯಂತ ಪ್ರಿಯವಾದ, ಶಾಂತಿದಾಯಕ ಮತ್ತು ರಾಜಿಸಂಧಾನ ಉಂಟುಮಾಡುವ ತತ್ವವಾಗಿದೆ. ಲೋಕದಲ್ಲಿ ಆಗಮಿಸಿದ, ಹಿಂದೂಸ್ಥಾನದಲ್ಲಿ, ಪರ್ಶಿಯಾದಲ್ಲಿ, ಚೈನದಲ್ಲಿ ಅಥವಾ ಬೇರೆ ಯಾವುದೇ ದೇಶದಲ್ಲಿ ಆಗಮಿಸಿದ ನಂತರ ದೇವನು ಕೋಟಿಗಟ್ಟಲೆ ಜನರ ಹೃದಯಗಳಲ್ಲಿ ಅವರ ಬಗ್ಗೆ ಗೌರವ ಭಾವನೆ ಇರಿಸಿದ

ಮತ್ತು ಅವರ ಧರ್ಮದ ಬೇರುಗಳನ್ನು ಬಲಪಡಿಸಿದ ಅನೇಕ ಶತಮಾನಗಳ ಕಾಲ ಜಾರಿಯಲ್ಲಿದ್ದ ಧರ್ಮಗಳ ಪ್ರವಾದಿಗಳನ್ನು ನಾವು ಸತ್ಯವಂತರೆಂದು ಗಣಿಸುತ್ತೇವೆ. ಪವಿತ್ರ ಖುರ್‌ಆನ್ ಇದೇ ತತ್ವವನ್ನು ಕಲಿಸಿದೆ. ಆದುದರಿಂದ ಈ ರೀತಿಯ ಜೀವನ ಚರಿತ್ರೆಯನ್ನು ಹೊಂದಿದ ಪ್ರತಿಯೊಂದು ಧರ್ಮದ ಮಹಾ ಪುರುಷರನ್ನು ನಾವು ಗೌರವ ಭಾವನೆಯಿಂದ ಕಾಣುತ್ತೇವೆ. ಅವರು ಹಿಂದೂ ಧರ್ಮದ ನಾಯಕರಾಗಿರಲಿ, ಫಾರಸಿಗಳ ಧರ್ಮದ ನಾಯಕರಾಗಿರಲಿ, ಚೀನೀಯರ ಧರ್ಮದ, ಯಹೂದಿಯರ ಧರ್ಮದ ಅಥವಾ ಕ್ರೈಸ್ತ ಧರ್ಮದ ನಾಯಕರಾಗಿರಲಿ ನಾವು ಗೌರವಿಸುತ್ತೇವೆ.

(ತುಹ್‌ಫ ಖೈಸರಿಯ – ರೂಹಾನಿ ಖಝಾಯಿನ್–ಭಾಗ 12 ಪುಟ 259)

ಒಬ್ಬ ಮುಸ್ಲಿಮನು ಯಾವುದೇ ಪ್ರವಾದಿಯನ್ನು ಅಪಮಾನಿಸಲಾರನು. ಏಕೆಂದರೆ ಅವನು ಪ್ರವಾದಿಗಳನ್ನೂ ಮತಸುಧಾರಕರನ್ನೂ ಸತ್ಯವಾದಿಗಳೆಂದು ನಂಬುತ್ತಾನೆ. ನಾವು ಹಝ್ರತ್ ಮುಹಮ್ಮದ್ ಪೈಗಂಬರರನ್ನು(ಸ) ಮತ್ತು ಅವರಿಗಿಂತ ಮೊದಲು ಲೋಕಕ್ಕೆ ಆಗಮಿಸಿದ ಎಲ್ಲ ಸಂದೇಶವಾಹಕರನ್ನೂ ಪ್ರವಾದಿಗಳನ್ನೂ ಋಷಿಗಳನ್ನೂ ಅವತಾರ ಪುರುಷರನ್ನೂ ನಂಬುವುದರೊಂದಿಗೆ ಅಹ್ಮದಿಯಾ ಜಮಾಅತ್ ಸ್ಥಾಪಕರನ್ನು ವಾಗ್ದತ್ತ ಮಸೀಹರಾಗಿ ದೇವನಿಂದ ಕಳುಹಿಸಲ್ಪಟ್ಟವರೆಂದು ನಂಬುತ್ತೇವೆ. ಎಲ್ಲ ಧರ್ಮಗಳ ಜನರನ್ನು ಒಗ್ಗೂಡಿಸಿ ಲೋಕದಲ್ಲಿ ಶಾಂತಿ ಮತ್ತು ಸೌಹಾರ್ದ ಸ್ಥಾಪಿಸುವುದೇ ಅವರ ಆಗಮನದ ಉದ್ದೇಶ ಲಕ್ಷ್ಯವಾಗಿದೆ. ಅಲ್ಲಾಹನ ಅನುಗ್ರಹದಿಂದ ಮತ್ತು ಅವನ ಕೃಪೆಯಿಂದ ಅಹ್ಮದಿಯಾ ಜಮಾಅತ್ ಕಳೆದ ಒಂದು ನೂರು ವರ್ಷಗಳಿಗಿಂತ ಹೆಚ್ಚಿನ ಕಾಲಾವಧಿಯಲ್ಲಿ ಶಾಂತಿ ಮತ್ತು ಸೌಹಾರ್ದ ಸ್ಥಾಪನೆಯ ಕೆಲಸ ಮಾಡುತ್ತಾ ಇದೆ. ಅದರ ಧ್ಯೇಯ ವಾಕ್ಯ:

**"LOVE FOR ALL , HATRED FOR NONE."**

"ಎಲ್ಲರೊಂದಿಗೆ ಪ್ರೀತಿ, ಯಾರೊಂದಿಗೂ ದ್ವೇಷವಿಲ್ಲ" ಎಂದಾಗಿದೆ.

ಅಹ್ಮದಿಯಾ ಜಮಾಅತ್ ಈ ಧ್ಯೇಯ ವಾಕ್ಯದಡಿಯಲ್ಲಿ ಲೋಕದ ಜನರನ್ನು ಒಗ್ಗೂಡಿಸಲು ಇಚ್ಛಿಸುತ್ತಾ ಇದೆ.

ಸಹೋದರರೇ, ಸಹೋದರಿಯರೇ, ಈಗ ಲೋಕ ವಿನಾಶದ ಕಡೆಗೆ ವೇಗವಾಗಿ ಸಾಗುತ್ತಾ ಇದೆ. ಒಂದು ದೇಶ ಇನ್ನೊಂದು ದೇಶವನ್ನು ವಶಪಡಿಸಿಕೊಳ್ಳಲು ಬಯಸುತ್ತದೆ. ಶಕ್ತಿಶಾಲಿ ದೇಶಗಳು ಬಡದೇಶಗಳನ್ನು ಪುಡಿಪುಡಿಗೊಳಿಸಲು ಬಯಸುತ್ತವೆ. ಇಂತಹ ಪರಿಸ್ಥಿತಿಯಲ್ಲಿ ಅಹ್ಮದಿಯಾ ಜಮಾಅತ್ ತನ್ನ ಆಧ್ಯಾತ್ಮಿಕ ನೇತಾರರ ಮೂಲಕ ಲೋಕವನ್ನು ವಿನಾಶದಿಂದ ರಕ್ಷಿಸಲು ಪ್ರಯತ್ನ ಮಾಡುತ್ತಿದೆ. ಅಹ್ಮದಿಯಾ ಜಮಾಅತಿನ ಇಮಾಮರೂ ಸರ್ವೋಚ್ಚ ನಾಯಕರೂ ಆಗಿರುವ ಹಝ್ರತ್ ಮಿರ್ಝಾ ಮಸ್‌ರೂರ್ ಅಹ್ಮದ್ (ಪಂಚಮ ಖಲೀಫ) ಲೋಕದ ಶಕ್ತಿಶಾಲಿ ದೇಶಗಳ ರಾಜಕೀಯ ನಾಯಕರಿಗೆ ಲೋಕದಲ್ಲಿ ಶಾಂತಿ ಸ್ಥಾಪನೆ ಮಾಡುವ ಬಗ್ಗೆ ಒತ್ತಿ ಹೇಳುತ್ತಾ, ಲೋಕದ ಪರಿಸ್ಥಿತಿ ಇದೇ ರೀತಿ ಮುಂದುವರಿದರೆ ತೃತೀಯ ಜಾಗತಿಕ ಮಹಾಯುದ್ಧವನ್ನು ಎದುರಿಸಬೇಕಾದೀತು ಎಂದು ಅವರ ಗಮನವನ್ನು ಅದರ ಕಡೆಗೆ ಸೆಳೆದಿದ್ದಾರೆ. ನಮ್ಮ ಇಮಾಮರು ವಿಶ್ವದ ವಿವಿಧ ದೇಶಗಳಿಗೆ ಭೇಟಿ ನೀಡಿ ಲೋಕದಲ್ಲಿ ಶಾಂತಿ ಸ್ಥಾಪನೆಯ ಬಗ್ಗೆ ಭಾಷಣಗಳನ್ನು ಮಾಡುತ್ತಿದ್ದಾರೆ. ಲೋಕದ ವಿವಿಧ ದೇಶಗಳ ನಾಯಕರಿಗೆ ನಮ್ಮ ಜಮಾಅತಿನ ಇಮಾಮರು ಪತ್ರಗಳನ್ನೂ ಬರೆದಿದ್ದಾರೆ.

ಇಸ್ರಾಯೇಲ್ ಪ್ರಧಾನ ಮಂತ್ರಿ ಬೆಂಜಮಿನ್ ನೆತನ್ಯಾಹೂರವರಿಗೆ ಅಹ್ಮದಿಯಾ ಜಮಾಅತ್ ಇಮಾಮರು ಹೀಗೆ ಬರೆದಿರುವರು:

"ನಾನು ನಿಮ್ಮೊಂದಿಗೆ ಅಪೇಕ್ಷಿಸುವುದೇನೆಂದರೆ, ಲೋಕವನ್ನು ಜಾಗತಿಕ ಮಹಾಯುದ್ಧದ ಮುಷ್ಟಿಯ ಹಿಡಿತಕ್ಕೊಳಪಡಿಸಲು ಕೊಂಡೊಯ್ಯುವುದಕ್ಕೆ ಪ್ರತಿಯಾಗಿ ಲೋಕವನ್ನು ಈ ಜಾಗತಿಕ ಅನಾಹುತದಿಂದ ರಕ್ಷಿಸಲು ಗರಿಷ್ಠ ಪ್ರಯತ್ನ ಮಾಡಬೇಕು. ಬಲ ಪ್ರಯೋಗಿಸಿ ಬಿಕ್ಕಟ್ಟುಗಳನ್ನು ಪರಿಹರಿಸುವುದಕ್ಕೆ ಬದಲಾಗಿ ಚರ್ಚೆಯ ಮೂಲಕ ಸಂಘರ್ಷಗಳನ್ನು ಪರಿಹರಿಸಲು ಪ್ರಯತ್ನಿಸಬೇಕು. ಹಾಗೆ ಮಾಡಿದರೆ ನೀವು ನಮ್ಮ ಮುಂದಿನ ಪೀಳಿಗೆಗಳಿಗೆ ಅಂಗವಿಕಲತೆ ಮತ್ತು ಬಲಹೀನತೆಯ 'ಬಹುಮಾನಕ್ಕೆ' ಪ್ರತಿಯಾಗಿ ಪ್ರಕಾಶಮಾನವಾದ ಭಾವೀ ಜೀವಿತವನ್ನು ಬಹುಮಾನವಾಗಿ ನೀಡುವಿರಿ."

ಇರಾನ್ ದೇಶದ ಮಾಜಿ ಅಧ್ಯಕ್ಷ ಮಹ್‌ಮೂದ್ ಅಹ್ಮದ್ ನೆಜಾದ್‌ರಿಗೆ ಬರೆದ ಪತ್ರದಲ್ಲಿ ಅಹ್ಮದಿಯಾ ಜಮಾಅತ್ ಇಮಾಮರು ಹೀಗೆ ಹೇಳಿದರು:

"ಲೋಕದಲ್ಲಿ ಕಂಡು ಬರುತ್ತಿರುವ ಭಯಾನಕ ಪರಿಸ್ಥಿತಿಯ ಕಾರಣದಿಂದ ಇರಾನಿನ ಅಧ್ಯಕ್ಷರಾದ ನಿಮಗೆ ಪತ್ರ ಬರೆಯಬೇಕಾದುದು ಅವಶ್ಯಕವಾಗಿದೆ ಎಂದು ನಾನು ಭಾವಿಸುತ್ತೇನೆ.... ದೊಡ್ಡ ಮತ್ತು ಚಿಕ್ಕ ಅನೇಕ ದೇಶಗಳು ಅಣು ಅಸ್ತ್ರಗಳನ್ನು ಹೊಂದಿರುವುದರಿಂದ ಪರಸ್ಪರ ದ್ವೇಷ ಮತ್ತು ಹಗೆತನ ವರ್ಧಿಸುತ್ತಾ ಇರುತ್ತದೆ. ಇಂತಹ ದುಸ್ಥಿತಿಯಲ್ಲಿ ಮೂರನೆಯ ಜಾಗತಿಕ ಯುದ್ಧವು ನಿಶ್ಚಯವಾಗಿಯೂ ನಮ್ಮ ಮುಂದೆ ಕಾಣಿಸುತ್ತಾ ಇದೆ. ಅಣು ಬಾಂಬುಗಳನ್ನು ಅನೇಕ ದೇಶಗಳು ಹೊಂದಿರುವುದರಿಂದ ಮೂರನೆಯ ಜಾಗತಿಕ ಮಹಾಯುದ್ಧವು ಅಣುಬಾಂಬು ವರ್ಷಿಸುವ ಯುದ್ಧವಾಗುವುದು. ಇದರ ಪರಿಣಾಮ ಬಹಳ ದಾರುಣ ವಿಪತ್ತಾಗುವುದು. ಇಂತಹ ಯುದ್ಧಗಳ ದೀರ್ಘಕಾಲೀನ ಪರಿಣಾಮದಿಂದಾಗಿ ಮುಂದಿನ ಪೀಳಿಗೆಗಳು ಅಂಗವಿಕಲರಾಗಿ ಮತ್ತು ಅಂಗಹೀನರಾಗಿ ಜನಿಸುವರು....

"ಆದುದರಿಂದ ನೀವು ಇನ್ನೊಂದು ದೇಶವನ್ನು ದ್ವೇಷ ಮತ್ತು ಹಗೆತನದ ಕಾರಣದಿಂದ ವಿರೋಧಿಸಬಾರದು..... ಯಾವುದಾದರೂ ದೇಶ ನಿಮ್ಮ ದೇಶದ ವಿರುದ್ಧ ಆಕ್ರಮಣ ಮಾಡಿದರೆ ಸಹಜವಾಗಿ ಅದನ್ನು ಪ್ರತಿರೋಧಿಸುವ ಹಕ್ಕು ನಿಮಗಿರುತ್ತದೆ. ಆದರೆ ಸಾಧ್ಯವಿರುವಷ್ಟು ಮಟ್ಟಿಗೆ ರಾಜಕೀಯ ಚರ್ಚೆ ಮತ್ತು ಮಾತುಕತೆ ಮೂಲಕ ಸಮಸ್ಯೆಗಳನ್ನು ಪರಿಹರಿಸಬೇಕೆಂದು ನಾನು ನಿಮ್ಮನ್ನು ವಿನೀತನಾಗಿ ಅಪೇಕ್ಷಿಸುತ್ತೇನೆ. ನಾನು ನಮ್ಮೊಂದಿಗೆ ಈ ಅಪೇಕ್ಷೆ ಮಾಡಿದುದೇಕೆಂದರೆ, ನಾನು, ಅಲ್ಲಾಹನಿಂದ ಆಯ್ಕೆಗೊಂಡ ಮಹಾನುಭಾವರ ಅನುಯಾಯಿ ಯಾಗಿದ್ದೇನೆ. ಅವರು ಈ ಕಾಲಘಟ್ಟದಲ್ಲಿ ಹಝ್ರತ್ ಮುಹಮ್ಮದ್ ಪೈಗಂಬರರ(ಸ) ನಿಜವಾದ ದಾಸನಾಗಿ ಆಗಮಿಸಿ ತಾನು ವಾಗ್ದತ್ತ ಮಸೀಹ್ ಮತ್ತು ಇಮಾಮ್ ಮಹ್‌ದೀ ಎಂದು ವಾದಿಸಿದರು.

ಅವರ ಆಗಮನದ ಉದ್ದೇಶ ಮಾನವರನ್ನು ಅಲ್ಲಾಹನಿಗೆ ಹೆಚ್ಚು ಸಮೀಪಗೊಳಿಸುವುದಾಗಿದೆ."

ಕೆನಡದ ಪ್ರಧಾನ ಮಂತ್ರಿಯವರಿಗೆ ಅಹ್ಮದಿಯಾ ಜಮಾಅತಿನ ಇಮಾಮ್ ಹೀಗೆ ಬರೆದರು:

"ಕೆನಡ ಅತ್ಯಂತ ನ್ಯಾಯನಿಷ್ಠೆಯಿಂದ ವರ್ತಿಸುವ ಲೋಕದ ದೇಶಗಳಲ್ಲಿ ಒಂದೆಂದು ಗಣಿಸಲ್ಪಡುತ್ತಿದೆ. ನಿಮ್ಮ ದೇಶ ಸಾಮಾನ್ಯವಾಗಿ ಅನ್ಯದೇಶಗಳ ಆಂತರಿಕ ಸಮಸ್ಯೆಗಳಲ್ಲಿ ಹಸ್ತಕ್ಷೇಪ ಮಾಡುವುದಿಲ್ಲ. ಅಹ್ಮದಿಯಾ ಮುಸ್ಲಿಮ್ ಸಂಘಟನೆಗೆ ಸೇರಿದ ನಮಗೆ ಕೆನಡದ ಜನತೆಯೊಂದಿಗೆ ವಿಶಿಷ್ಟವಾದ ಸ್ನೇಹ ಸಂಬಂಧ ಇದೆ. ನಾನು ನಿಮ್ಮೊಂದಿಗೆ ಅಪೇಕ್ಷಿಸುತ್ತೇನೆ: ದೊಡ್ಡ ಮತ್ತು ಚಿಕ್ಕ ದೇಶಗಳು ವಿನಾಶಕಾರಿ ಮೂರನೆಯ ಜಾಗತಿಕ ಮಹಾಯುದ್ಧಕ್ಕೆ ನಮ್ಮನ್ನು ಕೊಂಡೊಯ್ಯುವುದನ್ನು ತಡೆಗಟ್ಟಲು ನೀವು ಅತ್ಯಂತ ಹೆಚ್ಚು ಪ್ರಯತ್ನ ಮಾಡಬೇಕು."

ಅಮೇರಿಕದ ಅಧ್ಯಕ್ಷ ಬರಾಕ್ ಒಬಾಮರಿಗೆ ಅಹ್ಮದಿಯಾ ಜಮಾಅತ್ ಇಮಾಮ್ ಹೀಗೆ ಬರೆದರು:

"ಲೋಕದಲ್ಲಿ ಸಂಭವಿಸುತ್ತಿರುವ ಆತಂಕಕಾರಿ ಬೆಳವಣಿಗೆಗಳ ಕಾರಣ ನಿಮಗೆ ಪತ್ರ ಬರೆಯುವುದು ಆವಶ್ಯಕವೆಂದು ನಾನು ಭಾವಿಸಿದ್ದೇನೆ. ಜಾಗತಿಕ ಮಹಾಶಕ್ತಿ ರಾಷ್ಟ್ರವಾದ ಅಮೇರಿಕದ ಅಧ್ಯಕ್ಷರಾದ ನೀವು ನಿಮ್ಮ ದೇಶ ಮತ್ತು ಲೋಕದ ಭವಿಷ್ಯವನ್ನು ಬಾಧಿಸುವಂತಹ ನಿರ್ಧಾರಗಳನ್ನು ಮಾಡುವ ಅಧಿಕಾರ ಹೊಂದಿರುವಿರಿ. ಈಗಿನ ಕಾಲದಲ್ಲಿ ಲೋಕದಾದ್ಯಂತ ಕ್ಷೋಭೆ ಮತ್ತು ಆತಂಕ ವ್ಯಾಪಕವಾಗಿ ಹರಡಿದೆ. ಕೆಲವು ಪ್ರದೇಶಗಳಲ್ಲಿ ಚಿಕ್ಕ ಮಟ್ಟದ ಯುದ್ಧಗಳು ನಡೆಯುತ್ತಾ ಇವೆ. ದುರದೃಷ್ಟಕರವಾಗಿ ಮಹಾಶಕ್ತಿ ರಾಷ್ಟ್ರಗಳು ಸಂಘರ್ಷಭರಿತ ಪ್ರದೇಶಗಳಲ್ಲಿ ಶಾಂತಿಯನ್ನು ಸ್ಥಾಪಿಸಲು ಮಾಡಿದ ಪ್ರಯತ್ನಗಳು ಪ್ರತೀಕ್ಷಿಸಿದ ರೀತಿಯಲ್ಲಿ ಫಲಕಾರಿಯಾಗಿಲ್ಲ.

"ನಿಮ್ಮೊಂದಿಗೆ ಮತ್ತು ಜಾಗತಿಕ ನಾಯಕರೊಂದಿಗೆ ನಾನು ಅಪೇಕ್ಷಿಸುವುದೇನೆಂದರೆ, ಇತರ ದೇಶಗಳನ್ನು ಬಲಪ್ರಯೋಗಿಸಿ ಅದುಮಿ ಹಾಕುವುದಕ್ಕೆ ಬದಲಾಗಿ ರಾಜತಂತ್ರಗಳನ್ನೂ ಮಾತುಕತೆಗಳನ್ನೂ ವಿವೇಕವನ್ನೂ ಬಳಸಬೇಕು. ಯುನೈಟೆಡ್ ಸ್ಟೇಟ್ಸ್ ಮೊದಲಾದ ಪ್ರಬಲ ಶಕ್ತಿ ಶಾಲಿ ರಾಷ್ಟ್ರಗಳು ಲೋಕದಲ್ಲಿ ಶಾಂತಿಯನ್ನು ಸ್ಥಾಪಿಸಲು ತಕ್ಕುದಾದ ಕ್ರಮಗಳನ್ನು ಕೈಗೊಳ್ಳಬೇಕು. ಚಿಕ್ಕದೇಶಗಳು ಮಾಡಿದ ಕೃತ್ಯಗಳನ್ನು ಜಾಗತಿಕ ಸೌಹಾರ್ದತೆಯನ್ನು ಕೆಡಿಸಲು ನೆವನವನ್ನಾಗಿ ಪ್ರಬಲ ಶಕ್ತಿಶಾಲಿ ರಾಷ್ಟ್ರಗಳು ಮಾಡಬಾರದು. ಈಗ ಅಣು ಆಯುಧಗಳನ್ನು ಯುನೈಟೆಡ್ ಸ್ಟೇಟ್ಸ್ ಮತ್ತು ಇತರ ಇತರ ಪ್ರಬಲ ದೇಶಗಳು ಮಾತ್ರವಲ್ಲ, ಕೆಲವು ಚಿಕ್ಕ ದೇಶಗಳು ಸಹ ಅಂತಹ ವಿನಾಶಕಾರಿ ಅಣು ಅಸ್ತ್ರಗಳನ್ನು ಹೊಂದಿದ್ದು ಅಂತಹ ದೇಶಗಳ ಯುದ್ಧಪ್ರಿಯರಾದ ನಾಯಕರು ಏನನ್ನೂ ಯೋಚಿಸದೆ, ವಿಶ್ಲೇಷಿಸದೆ ಕಾರ್ಯಪ್ರವೃತ್ತರಾಗುವವರಾಗಿದ್ದಾರೆ. ಆದುದರಿಂದ ನಾನು ನಿಮ್ಮೊಂದಿಗೆ ವಿನೀತನಾಗಿ ಅಪೇಕ್ಷಿಸುವುದೇನೆಂದರೆ, ಪ್ರಬಲ ರಾಷ್ಟ್ರಗಳು ಮತ್ತು ಚಿಕ್ಕ ರಾಷ್ಟ್ರಗಳು ಮೂರನೆಯ ಜಾಗತಿಕ ಮಹಾಯುದ್ಧ ಸ್ಫೋಟಿಸದಂತೆ ತಡೆಯಲು ನಿಮ್ಮ ಎಲ್ಲ ಶಕ್ತಿಸಾಮರ್ಥ್ಯಗಳನ್ನು ಬಳಸಬೇಕು. ನಾವು ಶಾಂತಿ ಸ್ಥಾಪನೆ ಮಾಡುವ ಪ್ರಯತ್ನದಲ್ಲಿ ಸೋತುಹೋದರೆ ಜಾಗತಿಕ ಮಹಾಯುದ್ಧದ ಪರಿಣಾಮಗಳು ಏಶಿಯಾದ ಬಡರಾಷ್ಟ್ರಗಳಿಗೂ ಯುರೋಪು ಮತ್ತು ಅಮೇರಿಕದ ದೇಶಗಳಿಗೂ ಸೀಮಿತವಾಗಿರಲಾರವು. ನಮ್ಮ ಮುಂದಿನ ಪೀಳಿಗೆಗಳು ನಮ್ಮ ಕೃತ್ಯಗಳ ಭೀಕರ ಪರಿಣಾಮಗಳನ್ನು ಅನುಭವಿಸಬೇಕಾಗುವುದು ಮತ್ತು ಲೋಕದಲ್ಲೆಡೆಗಳಲ್ಲೂ ಮಕ್ಕಳು ಅಂಗವಿಕಲರಾಗಿಯೂ ಅಂಗಹೀನರಾಗಿಯೂ ಜನಿಸುವರು. ಜಾಗತಿಕ ಅನಾಹುತಕ್ಕೆ ಲೋಕವನ್ನು ಕೊಂಡೊಯ್ದ ಅವರ ಹಿರಿಯರನ್ನು ಅವರು ಎಂದೂ ಕ್ಷಮಿಸಲಾರರು. ನಾವು ನಮ್ಮ ಸ್ವಾರ್ಥ ಹಿತಾಸಕ್ತಿಗಳ ಬಗ್ಗೆ ಮಾತ್ರ ಚಿಂತಿಸದೆ, ನಮ್ಮ ಮುಂದಿನ ಪೀಳಿಗೆಗಳ ಬಗ್ಗೆ ಚಿಂತಿಸಿ ಅವರಿಗೆ ಪ್ರಕಾಶಮಾನವಾದ ಭವಿಷ್ಯತ್ ಕಾಲವನ್ನು ಸೃಷ್ಟಿಸಲು ಕಠಿಣ ಪರಿಶ್ರಮ ಮಾಡಬೇಕಾಗಿದೆ. ಸರ್ವೋನ್ನತನಾದ ಸೃಷ್ಟಿಕರ್ತನು ಈ ಸಂದೇಶವನ್ನು ನೀವು ಮತ್ತು ಇತರ ಜಾಗತಿಕ ನಾಯಕರು ಮನವರಿಕೆ ಮಾಡಿಕೊಳ್ಳುವ ಸೌಭಾಗ್ಯವನ್ನು ದಯಪಾಲಿಸಲಿ ಎಂದು ಪ್ರಾರ್ಥಿಸುತ್ತೇನೆ."

ಜಾಗತಿಕ ಶಾಂತಿ ಸ್ಥಾಪನೆ ಮಾಡುವ ಬಗ್ಗೆ ರಾಜಕೀಯ ನಾಯಕರಿಗೆ ಮಾತ್ರವಲ್ಲ, ಸನ್ಮಾನ್ಯ ಪೋಪ್ ಬೆನಡಿಕ್ಟ್‌ರವರಿಗೆ ಸಹ ಪತ್ರ ಬರೆದು ಶಾಂತಿ ಮತ್ತು ಸೌಹಾರ್ದ ಸ್ಥಾಪನೆಗೆ ಪ್ರಯತ್ನಿಸಲು ಅಹ್ಮದಿಯಾ ಜಮಾಅತ್ ಇಮಾಮರು ಹೀಗೆ ಅಪೇಕ್ಷಿಸಿದರು:

"ನೀವು ಲೋಕದಲ್ಲಿ ಅತ್ಯಂತ ಪ್ರಭಾವಶಾಲಿ ಧ್ವನಿಯನ್ನು ಹೊಂದಿರುವಿರಿ. ಆದುದರಿಂದ ನಿಮ್ಮೊಂದಿಗೆ ನಾನು ಅಪೇಕ್ಷಿಸುತ್ತೇನೆ. ಸೃಷ್ಟಿಕರ್ತನು ಸ್ಥಾಪಿಸಿದ ನ್ಯಾಯಪಾಲನೆಯ ಮಾರ್ಗದಲ್ಲಿ ತಡೆಯೊಡ್ಡುವ ಕಾರಣ ಲೋಕವು ಬಹಳ ವೇಗವಾಗಿ ಸಂಪೂರ್ಣ ನಾಶದ ಕಡೆಗೆ ಸಾಗುತ್ತಿದೆ ಎಂದು ಲೋಕಕ್ಕೆ ಮನವರಿಕೆ ಮಾಡಿಕೊಡಿರಿ. ಇದು ಎಂತಹ ಸಂದೇಶವೆಂದರೆ, ಸೂರ್ಯ ಬೆಳಕಿನ ಹಾಗೆ ಸ್ಪಷ್ಟವಾಗಿ, ಹಿಂದೆಂದೂ ಪ್ರಚಾರ ಮಾಡಿದುದಕ್ಕಿಂತ ಮಿಗಿಲಾಗಿ ಪ್ರಚಾರ ಮಾಡಬೇಕಾಗಿದೆ. ಲೋಕದ ಎಲ್ಲ ಧರ್ಮಗಳು ಧಾರ್ಮಿಕ ಸೌಹಾರ್ದತೆಯನ್ನು ಉಂಟುಮಾಡುವ ಆವಶ್ಯಕತೆ ಇದೆ. ಲೋಕದಲ್ಲಿ ವಾಸಿಸುವ ಎಲ್ಲರೂ ಪರಸ್ಪರ ಪ್ರೀತಿ ಮತ್ತು ಭ್ರಾತೃತ್ವದ ಭಾವನೆಗಳನ್ನು ಪ್ರಕಟಿಸುವ ಆವಶ್ಯಕತೆ ಇದೆ. ನಾವು ನಮ್ಮ ಜವಾಬ್ದಾರಿಗಳನ್ನು ಮನವರಿಕೆ ಮಾಡಿಕೊಂಡು ಲೋಕದಲ್ಲಿ ಶಾಂತಿಯನ್ನು ಸ್ಥಾಪಿಸಲು ಮತ್ತು ಸೃಷ್ಟಿಕರ್ತನನ್ನು ಲೋಕಕ್ಕೆ ಪರಿಚಯ ಮಾಡಿಕೊಡಲು ನಮ್ಮ ಕರ್ತವ್ಯಗಳನ್ನು ನೆರವೇರಿಸಲು ಸಾಧ್ಯವಾಗಲಿ ಎಂದು ಪ್ರಾರ್ಥಿಸುತ್ತೇನೆ. ನಾವು ಮಾಡಬಹುದಾದುದು ಕೇವಲ ಪ್ರಾರ್ಥನೆ ಮಾತ್ರವಾಗಿದೆ. ಲೋಕವು ವಿನಾಶದಿಂದ ರಕ್ಷಿಸಲ್ಪಡಲಿ ಎಂದು ನಾವು ನಿರಂತರವಾಗಿ ಸೃಷ್ಟಿಕರ್ತನನ್ನು ಪ್ರಾರ್ಥಿಸುತ್ತೇವೆ."

ಅಹ್ಮದಿಯಾ ಜಮಾಅತಿನ ಆಧ್ಯಾತ್ಮಿಕ ನೇತಾರರು, ಶಾಂತಿ ಸೌಹಾರ್ದ ಮತ್ತು ಭ್ರಾತೃತ್ವ ಸ್ಥಾಪನೆಗೆ ಮಾಡುತ್ತಿರುವ ಪ್ರಯತ್ನಗಳ ಕೆಲವು ಉದಾಹರಣೆಗಳನ್ನು ನಿಮ್ಮ ಮುಂದಿರಿಸಲಾಗಿದೆ. ಅಹ್ಮದಿಯಾ ಮುಸ್ಲಿಮ್ ಜಮಾಅತ್ ಇಸ್ಲಾಮ್ ಧರ್ಮದ ಶಾಂತಿ ಪ್ರತಿಪಾದಕ ವಾಸ್ತವ ತತ್ವಗಳನ್ನು ಲೋಕದಾದ್ಯಂತ ಜನರ ಮುಂದಿರಿಸಲು ಪ್ರಯತ್ನಿಸುತ್ತಾ ಇದೆ. ಲೋಕವು ಅದನ್ನು ಸ್ವೀಕರಿಸುತ್ತಲೂ ಇದೆ. 2008ರಲ್ಲಿ ಬ್ರಿಟಿಷ್ ಪಾರ್ಲಿಮೆಂಟಿನಲ್ಲಿ ಭಾಷಣ ಮಾಡಿ ಬ್ರಿಟನಿನ ರಾಜಕಾರಣಿಗಳಿಗೆ ಜಾಗತಿಕ ಶಾಂತಿ ಸ್ಥಾಪನೆ ಬಗ್ಗೆ ಲಕ್ಷ್ಯ ನೀಡ ಬೇಕೆಂದು ಅಹ್ಮದಿಯಾ ಜಮಾಅತಿನ ಇಮಾಮರು ಹೇಳಿದರು. 2012ರಲ್ಲಿ ಅಮೇರಿಕದ ವಾಶಿಂಗ್‌ಟನ್ ಡಿ.ಸಿ.ಯ ಕ್ಯಾಪಿಟೋಲ್ ಹಿಲ್‌ನಲ್ಲಿ ಅಮೇರಿಕನ್ ರಾಜಕಾರಣಿಗಳನ್ನೂ ಸರಕಾರಿ

ಅಧಿಕಾರಿಗಳನ್ನೂ ಸಂಬೋಧಿಸಿ ಅಹ್ಮದಿಯಾ ಜಮಾಅತಿನ ಇಮಾಮರು ಭಾಷಣ ಮಾಡಿದರು. ಅಹ್ಮದಿಯಾ ಜಮಾಅತಿನ ಇಮಾಮರು 2013ರಲ್ಲಿ ಯುರೋಪಿಯನ್ ಪಾರ್ಲಿಮೆಂಟನ್ನು ಸಂಬೋಧಿಸಿ ಭಾಷಣ ಮಾಡಿದರು. ಅಹ್ಮದಿಯಾ ಜಮಾಅತ್ ಕಳೆದ 125 ವರ್ಷಗಳ ಕಾಲ ರಾಷ್ಟ್ರೀಯ ಮತ್ತು ಅಂತರಾಷ್ಟ್ರೀಯ ಮಟ್ಟದಲ್ಲಿ ಇಸ್ಲಾಮ್ ಧರ್ಮದ ತತ್ವಗಳ ಬೆಳಕಿನಲ್ಲಿ ಶಾಂತಿಯ ಸಂದೇಶವನ್ನು ಲೋಕದ ಮೂಲೆ ಮೂಲೆಗಳಿಗೆ ತಲಪಿಸುತ್ತಾ ಇದೆ. ಅಹ್ಮದಿಯಾ ಜಮಾಅತಿನ ಸ್ಥಾಪಕರು ಹೀಗೆ ಹೇಳಿದರು:

"ಮಾನವರೆಲ್ಲರೊಂದಿಗೆ ಸಹಾನುಭೂತಿಯಿಂದ ವರ್ತಿಸಬೇಕು ಎಂಬುದು ನಮ್ಮ ತತ್ವವಾಗಿದೆ. ಒಬ್ಬನು ತನ್ನ ನೆರೆಹೊರೆಯ ಹಿಂದೂವಿನ ಮನೆಗೆ ಬೆಂಕಿ ಹತ್ತಿದಾಗ ಎದ್ದು ಹೋಗಿ ಬೆಂಕಿಯನ್ನು ನಂದಿಸಲು ಸಹಾಯಮಾಡುವುದಿಲ್ಲವಾದರೆ, ನಾನು ಸತ್ಯವಾಗಿ ಹೇಳುತ್ತೇನೆ– ಅವನು ನನ್ನ ಜೊತೆ ಸೇರಿದವನಲ್ಲ. ಒಬ್ಬ ಕ್ರೈಸ್ತನನ್ನು ಕೊಲ್ಲಲು ಪ್ರಯತ್ನಿಸುವುದನ್ನು ನಮ್ಮ ಶಿಷ್ಯರಲ್ಲಿ ಒಬ್ಬನು ಕಂಡಾಗ ಅವನನ್ನು ರಕ್ಷಿಸಲು ಸಹಾಯ ಮಾಡದವನು, ನಾನು ಸತ್ಯವಾಗಿ ಹೇಳುತ್ತೇನೆ – ಅವನು ನಮ್ಮೊಂದಿಗೆ ಸೇರಿದವನಲ್ಲ."

ಅವರು ಪುನಃ ಹೇಳುತ್ತಾರೆ:

"ನಾನು ಎಲ್ಲ ಮುಸ್ಲಿಮ್, ಹಿಂದೂ ಮತ್ತು ಆರ್ಯ ಸಮಾಜಿಗಳೊಂದಿಗೆ ಹೇಳಲು ಬಯಸುತ್ತೇನೆ – ಲೋಕದಲ್ಲಿ ನನ್ನ ಶತ್ರುಗಳು ಯಾರೂ ಇಲ್ಲ. ತಂದೆ ತಾಯಂದಿರು ತಮ್ಮ ಮಕ್ಕಳನ್ನು ಪ್ರೀತಿಸುವ ಹಾಗೆ ಅಥವಾ ಅದಕ್ಕಿಂತ ಹೆಚ್ಚಾಗಿ ನಾನು ಮನುಷ್ಯರನ್ನೆಲ್ಲ ಪ್ರೀತಿಸುತ್ತೇನೆ. ಸತ್ಯವು ಹತ್ಯೆಮಾಡಲ್ಪಡುವ ಮಿಥ್ಯನಂಬಿಕೆಗಳ ಮಾತ್ರ ಶತ್ರು ನಾನಾಗಿದ್ದೇನೆ. ಮಾನವರೊಂದಿಗೆ ಸಹಾನುಭೂತಿ ಹೊಂದುವುದು ನನಗೆ ಕಡ್ಡಾಯವಾಗಿದೆ. ಸುಳ್ಳು, ಬಹುದೇವಾರಾಧನೆ, ದೌರ್ಜನ್ಯ ಮತ್ತು ಪ್ರತಿಯೊಂದು ರೀತಿಯ ಕೆಟ್ಟ ಕೆಲಸಗಳು, ಅನ್ಯಾಯ ವರ್ತನೆ ಮತ್ತು ದುರ್ಗುಣಗಳ ಬಗ್ಗೆ ಅತೃಪ್ತಿ ನನ್ನ ತತ್ವವಾಗಿದೆ."

ಅಹ್ಮದಿಯಾ ಜಮಾಅತಿನ ಶಾಂತಿದಾಯಕ ತತ್ವಗಳ ಸಂಕ್ಷಿಪ್ತರೂಪ ಇದಾಗಿದೆ. ಅಹ್ಮದಿಯಾ ಜಮಾಅತಿನ ದ್ವಿತೀಯ ಖಲೀಫರಾಗಿದ್ದ ಹಝ್‌ರತ್ ಮಿರ್ಝಾ ಬಶೀರುದ್ದೀನ್ ಮಹ್‌ಮೂದ್ ಅಹ್ಮದ್(ರ) ಒಂದು ಪದ್ಯದಲ್ಲಿ ಹೀಗೆ ಹೇಳುತ್ತಾರೆ:

ಬತಾಊಂ ತುಮ್ಹೇ ಕೆ ಕ್ಯಾ ಚಾಹ್ತಾ ಹೂಂ
ಹೂಂ ಬಂದಃ ಮಗರ್ ಮ್ಯೆಂ ಖುದಾ ಚಾಹ್ತಾ ಹೂಂ
ಮುಝೆ ಬೈರ್ ಹರ್‌ಗಿಝ್ ನಹೀಂ ಹೈ ಕಿಸೀ ಸೆ
ಮ್ಯೆಂ ದುನ್‌ಯಾಮೆ ಸಬ್‌ಕಾ ಭಲಾ ಚಾಹ್ತಾ ಹೂಂ

"ನಾನು ಏನನ್ನು ಆಶಿಸುತ್ತೇನೆಂದು ನಿಮಗೆ ಹೇಳಲೇ? ನಾನು ದಾಸನಾಗಿದ್ದೇನೆ. ಆದರೆ ನಾನು ದೇವನನ್ನು ಆಶಿಸುತ್ತೇನೆ. ನನಗೆ ಯಾರೊಂದಿಗೂ ಖಂಡಿತವಾಗಿಯೂ ವೈರಭಾವನೆ ಇಲ್ಲ. ಲೋಕದಲ್ಲಿರುವ ಎಲ್ಲರಿಗೂ ನಾನು ಶುಭವನ್ನು ಕೋರುತ್ತೇನೆ."

ಅಹ್ಮದಿಯಾ ಜಮಾಅತಿನ ಈಗಿನ ಇಮಾಮ್ ಉಪದೇಶಿಸುತ್ತಾ ಹೀಗೆ ಹೇಳಿದರು:

"LOVE FOR HONESTY AND HATRED FOR DISHONESTY"

"ಪ್ರಾಮಾಣಿಕತೆಯ ಬಗ್ಗೆ ಪ್ರೀತಿ ಮತ್ತು ಅಪ್ರಾಮಾಣಿಕತೆ ಬಗ್ಗೆ ದ್ವೇಷ."

ಸಹೋದರರೇ, ಸಹೋದರರಿಯರೇ, ಎಲ್ಲ ವಿಷಯಗಳಿಂದ ಹೀಗೆ ನಿಷ್ಕರ್ಷಿಸಬಹುದಾಗಿದೆ: ಇಸ್ಲಾಮ್ ಧರ್ಮ ತನ್ನ ಅನುಯಾಯಿಗಳೊಂದಿಗೆ, ಅನ್ಯರೊಂದಿಗೆ ಪ್ರೀತಿಯಿಂದ ವರ್ತಿಸಬೇಕೆಂದು ಆಜ್ಞಾಪಿಸುತ್ತದೆ. ಈ ಕಾಲಘಟ್ಟದಲ್ಲಿ ಈ ಭಾವನೆಯನ್ನು ಪ್ರಕಟಿಸುವುದು ಬಹಳ ಆವಶ್ಯಕವಾಗಿದೆ. ಹಝ್‌ರತ್ ಮುಹಮ್ಮದ್ ಪೈಗಂಬರರು(ಸ) ಪವಿತ್ರ ಖುರ್‌ಆನ್ ಮೂಲಕ ಲೋಕದ ಮುಂದೆ ಇರಿಸಿದುದೇ ನೈಜ ಇಸ್ಲಾಮ್ ಧರ್ಮ ಆಗಿದೆ. ಈ ಇಸ್ಲಾಮ್ ಮಾತ್ರ ಅಂಗೀಕರಿಸಲು ಅರ್ಹವಾಗಿದೆ. ಒಬ್ಬನು ಮುಸ್ಲಿಮನ ಹೆಸರನ್ನು ಇಟ್ಟುಕೊಂಡು ಪವಿತ್ರ ಖುರ್‌ಆನ್ ಉಪದೇಶಿಸುವ ತತ್ವಗಳ ಪ್ರಕಾರ ನಡೆಯದೆ ಲೋಕದಲ್ಲಿ ಅಶಾಂತಿ ಹಬ್ಬಿಸಲು ಪ್ರಯತ್ನಿಸುವುದಾದರೆ ಅಂತಹ ವ್ಯಕ್ತಿಗೆ ಇಸ್ಲಾಮ್‌ನೊಂದಿಗೆ ದೂರದ ಸಂಬಂಧ ಕೂಡ ಇರುವುದಿಲ್ಲ.

ಇಂದಿನ ಕಾಲಘಟ್ಟದಲ್ಲಿ ಇಸ್ಲಾಮ್ ಧರ್ಮದ ನೈಜ ತತ್ವಗಳನ್ನು ಅಹ್ಮದಿಯಾ ಜಮಾಅತಿನ ಸ್ಥಾಪಕರು ಲೋಕದ ಮುಂದೆ ಇರಿಸಿದ್ದಾರೆ. ನೈಜ ಇಸ್ಲಾಮ್ ಧರ್ಮ ತತ್ವಗಳು ಇವೇ ಆಗಿವೆ. ಅವುಗಳನ್ನು ಅನುಸರಿಸುವ ಮೂಲಕ ಲೋಕದಲ್ಲಿ ಶಾಂತಿಯು ಸ್ಥಾಪಿಸಲ್ಪಡುವುದು.

ಕೊನೆಯದಾಗಿ, ನಮ್ಮ ಆಮಂತ್ರಣವನ್ನು ಅಂಗೀಕರಿಸಿ ಇಲ್ಲಿಗೆ ಆಗಮಿಸಿ ತಮ್ಮ ಬೆಲೆಬಾಳುವ ಸಮಯವನ್ನು ವಿನಿಯೋಗಿಸಿದ ಎಲ್ಲ ಅತಿಥಿಗಳಿಗೆ ನಾನು ಕೃತಜ್ಞತೆಗಳನ್ನು ಸಲ್ಲಿಸುತ್ತೇನೆ. ಅಲ್ಲಾಹನು ನಿಮ್ಮೆಲ್ಲರನ್ನೂ ಅನುಗ್ರಹಿಸಲಿ. ಆಮೀನ್ (ಹಾಗೆಯೇ ಆಗಲಿ).

***ರೂಪ್ ಕೊಯೀ ಭೀ ತಅಸ್ಸುಬ್ ಕಾ ಹಮೇಂ ಭಾತಾ ನಹೀಂ
ಅಹ್ಮದಿ ಕಾ ಬುಗ್‌ಝೋ ನಫ್ರತ್‌ಸೆ ಕೊಯೀ ನಾತಾ ನಹೀಂ
ಬಾಂಟ್‌ತೇ ಹೈಂ ಪ್ಯಾರ್ ಅಪ್ನೆ ಮರ್ದೋ‌ಝನ್ ಪೀರೋಜವಾನ್
ಹಮ್ ಪೈಯಾಂಬರ್ ಅಮನ್ ಕೆ ಹೈಂ ಹಮ್ ಮುಹಬ್ಬತ್ ಕಾ ಅಝಾನ್.***

"ದ್ವೇಷದ ಯಾವ ರೂಪವನ್ನೂ ನಾವು ಇಷ್ಟಪಡುವುದಿಲ್ಲ.
ದ್ವೇಷ ಮತ್ತು ಹೀನೈಸುವಿಕೆಯೊಂದಿಗೆ ಅಹ್ಮದಿಗೆ ಯಾವ ಸಂಬಂಧವೂ ಇಲ್ಲ.
ನಮ್ಮ ಪುರುಷರು, ಮಹಿಳೆಯರು, ವೃದ್ಧರು, ಯುವಕರು ಪ್ರೀತಿಯನ್ನು ಹಂಚುತ್ತಾರೆ.
ನಾವು ಪ್ರೀತಿಯ ಸಂದೇಶವಾಹಕರು, ಪ್ರೀತಿಯ ಕರೆ ನೀಡುವವರು."

**ಇನ್‌ಸಾನಿಯತ್
ಝಿಂದಾಬಾದ್
ಮಾನವೀಯತೆ
ಚಿರಕಾಲ ಬಾಳಲಿ**

# ಇಸ್ಲಾಮ್ ಬಗ್ಗೆ ಪದೇ ಪದೇ ಕೇಳಲಾಗುತ್ತಿರುವ ಕೆಲವು ಪ್ರಶ್ನೆಗಳಿಗೆ ಉತ್ತರ

**1. ಜಿಹಾದ್ ಎಂದರೇನು?**

ಜಿಹಾದ್, ಅರಬಿ ಭಾಷೆಯ ಒಂದು ಪದವಾಗಿದೆ. ಒಂದು ಉದ್ದೇಶ ಲಕ್ಷ್ಯಕ್ಕೋಸ್ಕರ ಕಠಿಣ ಪರಿಶ್ರಮ ಎಂದು ಇದರ ಅರ್ಥವಾಗಿದೆ. ಪವಿತ್ರ ಖುರ್‌ಆನ್‌ನಲ್ಲಿ ಸರ್ವಶಕ್ತನಾದ ಅಲ್ಲಾಹನು ಜಿಹಾದ್ ಮಾಡಬೇಕೆಂದು ಹೇಳಿದುದು ಉತ್ತಮ ಕಾರ್ಯಕ್ಕೋಸ್ಕರ ಮಾಡಬೇಕಾದ ಕಠಿಣ ಪರಿಶ್ರಮದ ಬಗ್ಗೆಯಾಗಿದೆ. ಹಲವು ರೀತಿಗಳಲ್ಲಿ ಜಿಹಾದ್ ಮಾಡಬಹುದು. ಎಲ್ಲ ವಿಧ ಜಿಹಾದ್‌ಗಳ ಮೂಲೋದ್ದೇಶ ಸಮಾಜದಲ್ಲಿ ಶಾಂತಿಯ ಸ್ಥಾಪನೆಯಾಗಿದೆ.

**ಆತ್ಮ ಪರಿಶುದ್ಧಿಗೋಸ್ಕರ ಮಾಡುವ ಕಠಿಣ ಪರಿಶ್ರಮವನ್ನು** ಅತ್ಯಂತ ಶ್ರೇಷ್ಠ ಜಿಹಾದ್ ಎಂದು ಗಣಿಸಲಾಗಿದೆ. ದುರಾಶೆ, ಕಾಮ ಮತ್ತಿತರ ಲೌಕಿಕ ಆಶಾಭಿಲಾಷೆಗಳ ವಿರುದ್ಧ ಹೋರಾಟವನ್ನು ನಡೆಸಿ ಆತ್ಮ ಪರಿಶುದ್ಧಿಗೋಸ್ಕರ ನಮ್ಮ ಯೋಚನೆಗಳ ಮತ್ತು ಕೃತ್ಯಗಳ ಮೇಲೆ ನೈತಿಕ ನಿಯಂತ್ರಣ ಮತ್ತು ಶಿಸ್ತು ಹೇರುವುದು ಸಹ ಜಿಹಾದ್ ಆಗಿದೆ.

**ಇಸ್ಲಾಮ್ ಧರ್ಮದ ನೈಜ ತತ್ವಗಳನ್ನು ಲೋಕದಲ್ಲಿ ಪ್ರಚಾರಗೊಳಿಸುವುದು** ಸಹ ಜಿಹಾದ್ ಆಗಿದೆ. ಆದರೆ ಈ ಜಿಹಾದನ್ನು ಜಾಣ್ಮೆಯಿಂದಲೂ ಸಹನೆಯಿಂದಲೂ ನಡೆಸಬೇಕು. ಅನ್ಯರ ಮನಸ್ಸಿಗೆ ನೋವಾಗದ ರೀತಿಯಲ್ಲಿ ಈ ಜಿಹಾದ್ ಮಾಡಬೇಕು. ಯಾವುದೇ ರೀತಿಯಲ್ಲಿ ಬಲಾತ್ಕಾರ ಮಾಡಬಾರದು.

**ಬಡವರಿಗೋಸ್ಕರ ಸಂಪತ್ತನ್ನು ಖರ್ಚು ಮಾಡುವುದು** ಸಹ ಜಿಹಾದ್ ಆಗಿದೆ. ಜನರ ಜಾತಿ, ವರ್ಗ, ವರ್ಣ ಮೊದಲಾದವುಗಳನ್ನು ಪರಿಗಣಿಸದೆ ಎಲ್ಲ ಬಡವರಿಗೂ ಸಂತ್ರಸ್ತರಿಗೂ ಸಹಾಯ ನೀಡುವುದು; ಬಡವರು ಮತ್ತು ಶ್ರೀಮಂತರ ಮಧ್ಯೆ ಸೌಹಾರ್ದ ಸಂಬಂಧ ಸ್ಥಾಪಿಸಿ ಅದರ ಮೂಲಕ ವಿಶ್ವಶಾಂತಿಗೆ ನೆರವಾಗುವುದು ಸಹ ಜಿಹಾದ್ ಆಗಿದೆ.

**ಪ್ರತಿರೋಧಾತ್ಮಕ ಯುದ್ಧ** ಸಹ ಜಿಹಾದ್ ಆಗಿದೆ. ಇದು ಕೆಳಮಟ್ಟದ ಜಿಹಾದ್ ಆಗಿದ್ದು ಕೆಲವು ವಿಶಿಷ್ಟ ಸಂದರ್ಭಗಳಲ್ಲಿ ಮಾತ್ರ ಅನುಮತಿಸಲಾಗಿದೆ. ಇದರ ಬಗ್ಗೆ ಪವಿತ್ರ ಖುರ್‌ಆನ್ ಹೀಗೆ ಹೇಳಿದೆ: "ಯಾರ ವಿರುದ್ಧ ಯುದ್ಧ ಹೂಡಲಾಗಿದೆಯೋ ಅವರಿಗೆ ಪ್ರತಿಯುದ್ಧ ಮಾಡುವ ಅನುಮತಿ ಇದೆ. ಏಕೆಂದರೆ ಅವರು ಆಕ್ರಮಣಕ್ಕೊಳಗಾಗಿದ್ದಾರೆ. ನಿಶ್ಚಯವಾಗಿಯೂ ಅವರಿಗೆ ಸಹಾಯ ನೀಡಲು ಅಲ್ಲಾಹನಿಗೆ ಸಾಮರ್ಥ್ಯವಿದೆ. 'ಅಲ್ಲಾಹನೇ ನಮ್ಮ ಪ್ರಭು' ಎಂದು ಹೇಳಿದ ಮಾತ್ರಕ್ಕೆ ಅವರನ್ನು ಅನ್ಯಾಯವಾಗಿ ಅವರ ಮನೆಗಳಿಂದ ಹೊರಗೆ ಅಟ್ಟಲಾಯಿತು. ಅಲ್ಲಾಹನು ಜನರಲ್ಲಿ ಕೆಲವರನ್ನು ಬೇರೆ ಕೆಲವರ ಮೂಲಕ ತಡೆಯದಿರುತ್ತಿದ್ದರೆ ಸನ್ಯಾಸಿ ಮಠಗಳೂ ಇಗರ್ಜಿಗಳೂ ಯಹೂದಿ ಮಂದಿರಗಳೂ ಮಸ್‌ಜಿದ್‌ಗಳೂ ನಿರ್ನಾಮವಾಗುತ್ತಿದ್ದುವು. ಅವುಗಳಲ್ಲಿ ದೇವನಾಮ ಹೆಚ್ಚು ಹೆಚ್ಚಾಗಿ ಸ್ಮರಿಸಲ್ಪಡುತ್ತದೆ." (22: 40, 41)

ಮೇಲೆ ಉಲ್ಲೇಖಿಸಿದ ಪವಿತ್ರ ಖುರ್‌ಆನ್ ವಚನಗಳಿಂದ ಹೀಗೆ ಸ್ಪಷ್ಟವಾಗುತ್ತದೆ: ಮುಸ್ಲಿಮರು ಆತ್ಮರಕ್ಷಣೆಗೋಸ್ಕರ ಮಾತ್ರ ಆಯುಧವೆತ್ತಬಹುದು. ಅವರು ಹಿಂಸಾಚಾರಗಳಿಗೆ ಈಡಾಗಿ ಅವರ ಜೀವಕ್ಕೆ ಅಪಾಯ ತಲೆದೋರಿದಾಗ ಮತ್ತು ತಮ್ಮ ಧರ್ಮಪ್ರಕಾರ ವರ್ತಿಸಿದ ಕಾರಣದಿಂದ ತಮ್ಮ ಮನೆಗಳಿಂದ ಹೊರಗಟ್ಟಲ್ಪಟ್ಟಾಗ ಸಾಯುಧ ಜಿಹಾದ್ ನಡೆಸಬಹುದು.

ಇಸ್ಲಾಮ್ ಉಪದೇಶಿಸುವುದು ಏನೆಂದರೆ, ಮುಸ್ಲಿಮರನ್ನು ಅವರು ತಮ್ಮ ಧರ್ಮವನ್ನು ಅನುಷ್ಠಿಸುವುದನ್ನು ತಡೆದು ಅವರನ್ನು ಹಿಂಸಾಚಾರಕ್ಕೆ ಗುರಿಪಡಿಸುವುದಾದರೆ ಅವರು ಆ ಸ್ಥಳದಿಂದ ವಲಸೆ ಹೋಗಿ ಬೇರೆ ಒಂದು ಸ್ಥಳದಲ್ಲಿ ವಾಸಿಸಬೇಕು. ಅಲ್ಲಿ ಸಹ ನೆಮ್ಮದಿಯಿಂದ ಬಾಳಲು ಶತ್ರುಗಳು ಅನುಮತಿಸದೆ ಅಲ್ಲಿ ಸಹ ಅವರು ಆಕ್ರಮಣ ಮಾಡಲು ಮುಂದಾದರೆ, ಅಂತಹ ಶತ್ರುಗಳ ವಿರುದ್ಧ ಆಯುದವೆತ್ತಲು ಇಸ್ಲಾಮ್ ಅನುಮತಿ ನೀಡುತ್ತದೆ. ಆದರೆ ಪ್ರತಿರೋಧಾತ್ಮಕವಾಗಿರಬೇಕಾಗಿದೆ ಹೊರತು ಆಕ್ರಮಣಕಾರಿಯಾಗಬಾರದು. ಇದರ ಬಗ್ಗೆ ಪವಿತ್ರ ಖುರ್‌ಆನ್ ಹೀಗೆ ಹೇಳಿದೆ:

"ನಿಮ್ಮ ವಿರುದ್ಧ ಯುದ್ಧ ಮಾಡುವವರೊಡನೆ ಅಲ್ಲಾಹನ ಮಾರ್ಗದಲ್ಲಿ ನೀವು ಸಹ ಯುದ್ಧ ಮಾಡಿರಿ. ಆದರೆ ಅತಿಕ್ರಮಣ ಮಾಡಬೇಡಿರಿ. ಅತಿಕ್ರಮಣ ಮಾಡುವವರನ್ನು ಅಲ್ಲಾಹನು ಪ್ರೀತಿಸುವುದಿಲ್ಲ." (2 : 191)

ಪ್ರತಿರೋಧಾತ್ಮಕ ಯುದ್ಧ ಮಾಡಬೇಕಾದ ಅನಿವಾರ್ಯ ಸಂದರ್ಭದಲ್ಲಿ ಇಸ್ಲಾಮ್ ಮುಸ್ಲಿಮರಿಗೆ ಯುದ್ಧ ನಡೆಸುವ ಬಗ್ಗೆ ಸ್ಪಷ್ಟ ಮಾರ್ಗದರ್ಶನಗಳನ್ನು ನೀಡಿದೆ. ಯುದ್ಧದಲ್ಲಿ ಭಾಗವಹಿಸದ ನಾಗರಿಕರನ್ನು ಕೊಲ್ಲಬಾರದು. ಆಹಾರ ಬೆಳೆಗಳನ್ನೂ ನೀರಿನ ಆಶ್ರಯಗಳನ್ನೂ ಆಸ್ಪತ್ರೆಗಳನ್ನೂ ಅನಾಥಾಶ್ರಮಗಳನ್ನೂ ಧ್ವಂಸ ಮಾಡಬಾರದು. ಎಲ್ಲ ಧರ್ಮಗಳ ಆರಾಧನಾಲಯಗಳನ್ನು ರಕ್ಷಿಸಬೇಕು. ಮಹಿಳೆಯರನ್ನೂ ಮಕ್ಕಳನ್ನೂ ವೃದ್ಧರನ್ನೂ ಅಂಗವಿಕಲರನ್ನೂ ಕೊಲ್ಲಬಾರದು. ಇವುಗಳಿಂದ ಸ್ಪಷ್ಟವಾಗುವುದೇನೆಂದರೆ, ಯುದ್ಧದ ಉದ್ದೇಶ ಆಕ್ರಮಣವಾಗಿರದೆ ಶಾಂತಿ ಪಾಲನೆ ಆಗಿರಬೇಕು. ಎಲ್ಲ ವಿಧ ಜಿಹಾದ್‌ಗಳ ಉದ್ದೇಶ ನಮ್ಮೊಳಗೆ ಮತ್ತು ಸಮಾಜದಲ್ಲಿ ಶಾಂತಿ ಸ್ಥಾಪನೆಯಾಗಿದೆ. ಆದುದರಿಂದ ಶಾಂತಿ ಸ್ಥಾಪನೆ ಮಾಡದಂತಹ ಪರಿಶ್ರಮಗಳನ್ನು ಜಿಹಾದ್ ಎಂದೆನ್ನಲಾಗದು.

**2. ಭೀಕರವಾದದ ಬಗ್ಗೆ ಇಸ್ಲಾಮ್ ಏನು ಹೇಳುತ್ತದೆ?**

ಇಸ್ಲಾಮ್ ಎಲ್ಲ ವಿಧಗಳ ಭೀಕರ ಕೃತ್ಯಗಳನ್ನು ವಿರೋಧಿಸುತ್ತದೆ. ಇಸ್ಲಾಮ್ ಎಂಬ ಪದದ ಅರ್ಥವೇ "ಶಾಂತಿ" ಎಂದಾಗಿದೆ. ಲೋಕದಲ್ಲಿ ಶಾಂತಿಯನ್ನು ಸ್ಥಾಪಿಸುವುದು ಮುಸ್ಲಿಮನ ಕಡ್ಡಾಯ ಕರ್ತವ್ಯವಾಗಿದೆ. ಪವಿತ್ರ ಖುರ್‌ಆನ್ ಮುಸ್ಲಿಮರನ್ನು ಹೀಗೆ ವರ್ಣಿಸುತ್ತದೆ:

"ಪರಮ ದಯಾವಂತನಾದ ಅಲ್ಲಾಹನ ಭಕ್ತದಾಸರು ಭೂಮಿಯಲ್ಲಿ ನಮ್ರತೆಯಿಂದ ನಡೆಯುವವರಾಗಿದ್ದಾರೆ. ಅಜ್ಞಾನಿಗಳಾದ ಜನರು ಅವರನ್ನು ಮಾತಿಗೆಳೆದರೆ ಅವರು 'ಸಲಾಮ್' (ಶಾಂತಿ) ಎಂದು ಹೇಳುತ್ತಾರೆ." (25:64)

ಅಹ್ಮದಿಯಾ ಜಮಾಅತಿನ ಚತುರ್ಥ ಖಲೀಫರಾದ ಹಝ್‌ರತ್ ಮಿರ್ಝಾ ತಾಹಿರ್ ಅಹ್ಮದ್ ಹೀಗೆ ಹೇಳುತ್ತಾರೆ:

"ಇಸ್ಲಾಮಿನ ಬಗ್ಗೆ ಹೇಳುವುದಾದರೆ, ಅದು ಭಯೋತ್ಪಾದಕ ಕೃತ್ಯಗಳನ್ನು ತಿರಸ್ಕರಿಸುತ್ತದೆ ಮತ್ತು ಸ್ಪಷ್ಟವಾಗಿ ಖಂಡಿಸುತ್ತದೆ. ಯಾವುದೇ ಹಿಂಸಾತ್ಮಕ ಕೃತ್ಯ – ಅದು ವ್ಯಕ್ತಿ , ಗುಂಪು ಅಥವಾ ಸರಕಾರದಿಂದ ಮಾಡಲ್ಪಟ್ಟರೂ ಅದನ್ನು ಇಸ್ಲಾಮ್ ಧರ್ಮ ನ್ಯಾಯಬದ್ಧವೆಂದು ಹೇಳುವುದಿಲ್ಲ."

(ಧರ್ಮದ ನಾಮದಲ್ಲಿ ರಕ್ತಪಾತ – ಪುಟ 182)

"ನಾನು ಎಲ್ಲ ರೀತಿಯ ಹಿಂಸಾಚಾರವನ್ನು ಖಂಡಿಸುತ್ತೇನೆ. ನನ್ನ ದೃಢವಿಶ್ವಾಸವೇನೆಂದರೆ, ಇಸ್ಲಾಮ್ ಮಾತ್ರವಲ್ಲ, ಯಾವುದೇ ಸತ್ಯಧರ್ಮ ಹಿಂಸಾಚಾರವನ್ನು ಹಾಗೂ ನಿರಪರಾಧಿ ಸ್ತ್ರೀ –ಪುರುಷರನ್ನು ಮತ್ತು ಮಕ್ಕಳನ್ನು ದೇವನಾಮದಲ್ಲಿ ಕೊಲ್ಲುವುದನ್ನು ಅನುಮತಿಸುವುದಿಲ್ಲ."

(ಧರ್ಮದ ನಾಮದಲ್ಲಿ ರಕ್ತಪಾತ – ಪುಟ 185)

**3. ದೇಶದ ಕಾನೂನು ಕಾಯಿದೆಗಳಿಗೆ ಬದ್ಧತೆ ಬಗ್ಗೆ ಇಸ್ಲಾಮ್ ಧರ್ಮದ ನಿಲುವು ಏನು ?**

ಇಸ್ಲಾಮ್ ಧರ್ಮದ ಪ್ರಕಾರ ದೇಶದ ಕಾನೂನು ಕಾಯಿದೆಗಳಿಗೆ ವಿಧೇಯತೆ ಧಾರ್ಮಿಕ ಕರ್ತವ್ಯವಾಗಿದೆ. ಮುಸ್ಲಿಮರು ಅಲ್ಲಾಹನಿಗೂ ಅವನ ಸಂದೇಶವಾಹಕರಾದ ಹಝ್‌ರತ್ ಮುಹಮ್ಮದ್ ಪೈಗಂಬರರಿಗೂ(ಸ) ಅವರು ವಾಸಿಸುವ ದೇಶಗಳ ಆಡಳಿತಾಧಿಕಾರಿಗಳಿಗೂ ವಿಧೇಯರಾಗಬೇಕೆಂದು ಪವಿತ್ರ ಖುರ್‌ಆನ್ ಉಪದೇಶಿಸುತ್ತದೆ.

"ಓ ಸತ್ಯ ವಿಶ್ವಾಸಿಗಳೇ, ಅಲ್ಲಾಹನಿಗೆ ನೀವು ವಿಧೇಯರಾಗಿರಿ. ಅವನ ಸಂದೇಶವಾಹಕನಿಗೂ ನಿಮ್ಮ ಅಧಿಕಾರಿಗಳಿಗೂ ವಿಧೇಯರಾಗಿರಿ." (4 : 60)

ಅಹ್ಮದಿಯಾ ಮುಸ್ಲಿಮ್ ಜಮಾಅತಿನ ಪಂಚಮ ಖಲೀಫರಾದ ಹಝ್‌ರತ್ ಮಿರ್ಝಾ ಮಸ್‌ರೂರ್ ಅಹ್ಮದ್ ಸಾಹೇಬ್ ಹೀಗೆ ಹೇಳುತ್ತಾರೆ:

"ನಿಜವಾದ ಮುಸ್ಲಿಮನು ತನ್ನ ದೇಶವಾಸಿಗಳ ವಿರುದ್ಧವಾಗಲಿ, ಆಡಳಿತಾಧಿಕಾರಿಯ ವಿರುದ್ಧವಾಗಲಿ, ಸರಕಾರದ ವಿರುದ್ಧವಾಗಲಿ, ದ್ವೇಷದಿಂದ ಧ್ವನಿಯೆತ್ತಲಾರನು. ನೈಜ ಮುಸ್ಲಿಮನು ತನ್ನ ದೇಶಕ್ಕೆ ನಿಷ್ಠನಾಗಿ ತಾನು ಪ್ರಜೆಯಾಗಿರುವ ದೇಶದ ಕಾನೂನು ಕಾಯಿದೆಗಳನ್ನು ಪಾಲಿಸುವವನಾಗಬೇಕು."

(ಬೈತುಲ್ ಫುತೂಹ್ ಮಸ್‌ಜಿದ್ ಉದ್ಘಾಟನೆಯ ಭಾಷಣ– ಅಕ್ಟೋಬರ್ 2003)

**4. ಇಸ್ಲಾಮ್‌ನಲ್ಲಿ ಮಹಿಳೆಯ ಸ್ಥಾನ ಪುರುಷರಿಗಿಂತ ಕೆಳಮಟ್ಟದ್ದೆ?**

ಒಬ್ಬ ವ್ಯಕ್ತಿ ಹಝ್‌ರತ್ ಮುಹಮ್ಮದ್ ಪೈಗಂಬರ್‌ರೊಂದಿಗೆ(ಸ) ವಿಚಾರಿಸಿದರು: "ಜನರ ಪೈಕಿ ಯಾರೊಂದಿಗೆ ನಾನು ಉತ್ತಮ ಬಾಂಧವ್ಯವಿರಿಸಿಕೊಳ್ಳಬೇಕು? ಹಝ್‌ರತ್ ಪೈಗಂಬರರು(ಸ) ಹೇಳಿದರು: " ನಿನ್ನ ತಾಯಿಯೊಂದಿಗೆ." ಆ ವ್ಯಕ್ತಿ ಎರಡನೆಯ ಸಲ ಕೇಳಿದರು: "ಅನಂತರ ಯಾರೊಂದಿಗೆ ಉತ್ತಮ ಸಂಬಂಧವಿರಿಸಬೇಕು?" ಆಗ ಹಝ್‌ರತ್ ಪೈಗಂಬರರು(ಸ) ಪುನಃ ಹೇಳಿದರು: "ನಿನ್ನ ತಾಯಿಯೊಂದಿಗೆ." ಆವ್ಯಕ್ತಿ ಮೂರನೆಯ ಸಲ ಕೇಳಿದರು: "ಅನಂತರ ಯಾರೊಂದಿಗೆ?" ಹಝ್‌ರತ್ ಪೈಗಂಬರರು ಹೇಳಿದರು: "ನಿನ್ನ ತಾಯಿಯೊಂದಿಗೆ." ನಾಲ್ಕನೆಯ ಸಲ ಪ್ರಶ್ನಿಸಿದಾಗ ಹಝ್‌ರತ್ ಪೈಗಂಬರರು ಹೇಳಿದರು: "ನಿಮ್ಮ ತಂದೆಯವರೊಂದಿಗೆ; ಆಮೇಲೆ ಉಳಿದ ಸಂಬಂಧಿಕರೊಂದಿಗೆ." ( ಬುಖಾರಿ)

ಇಸ್ಲಾಮಿನ ಬಗ್ಗೆ ಇರುವ ತಪ್ಪು ಗ್ರಹಿಕೆಯನ್ನು ಹೋಗಲಾಡಿಸಲು ಹಝ್‌ರತ್ ಮುಹಮ್ಮದ್ ಪೈಗಂಬರರ ಈ ವಚನ ಮಾತ್ರ ಸಾಕು. ಇಸ್ಲಾಮ್ ತಾಯಿಗೆ ನೀಡುವ ಶ್ರೇಷ್ಠ ಸ್ಥಾನವನ್ನು ಈ ವಚನ ಸ್ಪಷ್ಟಪಡಿಸುತ್ತದೆ.

ಇಸ್ಲಾಮ್ ಧರ್ಮ ತತ್ವ ಪ್ರಕಾರ ಎಲ್ಲ ಸತ್ಯವಿಶ್ವಾಸಿಗಳು ಸಮಾನರಾಗಿದ್ದಾರೆ. ಸಾತ್ವಿಕತೆ ಮಾತ್ರ ಒಬ್ಬನನ್ನು ಇನ್ನೊಬ್ಬನಿಗಿಂತ ಮೇಲಿನ ಮಟ್ಟಕ್ಕೆ ತಲುಪಿಸುತ್ತದೆ. ಆದರೆ ಪುರುಷ ಮತ್ತು ಮಹಿಳೆ ತಮ್ಮ ಶಕ್ತಿ ಸಾಮರ್ಥ್ಯಗಳಲ್ಲಿ ಸಮಾನರಾಗಿದ್ದಾರೆ ಎಂದು ಇಸ್ಲಾಮ್ ಪ್ರತಿಪಾದಿಸುವುದಿಲ್ಲ. ಇಸ್ಲಾಮ್ ಪುರುಷ ಮತ್ತು ಮಹಿಳೆಯ ವಿಭಿನ್ನ ಶಾರೀರಿಕ ಮತ್ತು ಭಾವನಾತ್ಮಕ ವ್ಯತ್ಯಾಸಗಳನ್ನು ಪರಿಗಣಿಸಿ ಅವರಿಗೆ ಕುಟುಂಬದಲ್ಲಿ ವಿಭಿನ್ನ ಪಾತ್ರಗಳನ್ನು ವಹಿಸಿಕೊಟ್ಟಿದೆ. ಅವರಿಗೆ ಕುಟುಂಬದಲ್ಲಿ ನೀಡಲಾದ ಜವಾಬ್ದಾರಿಕೆಗಳು ಅವರು ಒಬ್ಬರಿಗಿಂತ ಇನ್ನೊಬ್ಬರು ಮೇಲು ಅಥವಾ ಕೀಳು ಎಂದು ಸೂಚಿಸುವುದಿಲ್ಲ. ಪುರುಷನಿಗೆ ಕುಟುಂಬದ ಖರ್ಚು ವೆಚ್ಚಗಳ ಜವಾಬ್ದಾರಿಕೆ ನೀಡಲಾಗಿದೆ. ಮಹಿಳೆಗೆ ಮನೆಯ ನಿರ್ವಹಣೆ, ಗರ್ಭಧಾರಣೆ ಮತ್ತು ಮಕ್ಕಳ ಆರೈಕೆಯ ಜವಾಬ್ದಾರಿಕೆ ನೀಡಲಾಗಿದೆ. ಆದರೆ ಮಹಿಳೆಯರು ದುಡಿದು ಸಂಪಾದಿಸಬಾರದೆಂದು ಇಸ್ಲಾಮ್ ಹೇಳುವುದಿಲ್ಲ. ಪುರುಷನನ್ನು ಮನೆ ಖರ್ಚು ವೆಚ್ಚ ನಿರ್ವಹಿಸುವ ಜವಾಬ್ದಾರಿಯಿಂದ ಮುಕ್ತನನ್ನಾಗಿಯೂ ಮಾಡುವುದಿಲ್ಲ.

ಇಸ್ಲಾಮ್ ಧರ್ಮದಲ್ಲಿ ಮಹಿಳೆ ಸ್ವಂತ ಆಸ್ತಿಯನ್ನು ಹೊಂದಬಹುದು. ವಿವಾಹಿತ ಮಹಿಳೆ ಕೆಲಸಮಾಡಿ ಸಂಪಾದನೆ ಮಾಡುವುದಾದರೆ, ಆಕೆಯು ಸಂಪಾದಿಸಿದ ಹಣದ ಮೇಲೆ ಪತಿಗೆ ಹಕ್ಕು ಇರುವುದಿಲ್ಲ. ಪತಿ ಪೂರ್ಣ ಕುಟುಂಬದ ಖರ್ಚು ವೆಚ್ಚ ನಿರ್ವಹಿಸಲು ಜವಾಬ್ದಾರನಾಗಿರುತ್ತಾನೆ. ಪತ್ನಿ ವಾರೀಸುದಾರಿಕೆಯಿಂದ ಗಳಿಸುವ ಸ್ವತ್ತು ಆಕೆಯ ಸ್ವಂತ ಸ್ವತ್ತಾಗಿರುತ್ತದೆ. ಇಸ್ಲಾಮ್ ಮಹಿಳೆಗೆ ಆಕೆಯ ಮೃತ ತಂದೆ ತಾಯಂದಿರ ಸ್ವತ್ತಿನಲ್ಲಿ ಪಾಲು ನೀಡುತ್ತದೆ. ಆದರೆ ಯುನೈಟೆಡ್ ಕಿಂಗ್‌ಡಮ್‌ನಲ್ಲಿ ಈ ಹಕ್ಕು 1882 ರಲ್ಲಿ ಮ್ಯಾರಿಡ್ ವಿಮೆನ್ಸ್ ಪ್ರೋಪರ್ಟಿ ಆ್ಯಕ್ಟ್ ಮೂಲಕ ದೊರಕಿತು.

ಹಝ್‌ರತ್ ಮುಹಮ್ಮದ್ ಪೈಗಂಬರರು(ಸ) ಮಹಿಳೆಯ ಆಧ್ಯಾತ್ಮಿಕ ಮತ್ತು ವೈಚಾರಿಕ ಸ್ಥಾನವನ್ನು ಉನ್ನತಗೊಳಿಸಿದ್ದರು. ಸಮಾಜದಲ್ಲಿ ಮಹಿಳೆ ವಹಿಸಬೇಕಾದ ಅತ್ಯಾವಶ್ಯಕ ಜವಾಬ್ದಾರಿಕೆಗಳ ಬಗ್ಗೆ ಹಝ್‌ರತ್ ಪೈಗಂಬರರಿಗೆ(ಸ) ತಿಳಿದಿತ್ತು. ಅವರು ಹೆಮ್ಮಕಳ ಪಾಲನೆ ಪೋಷಣೆ ಬಗ್ಗೆ ಹೆಚ್ಚು ಒತ್ತಿ ಹೇಳಿದ್ದರು. ಅವರು ಹೀಗೆ ನುಡಿದಿದ್ದರು: "ಒಬ್ಬನಿಗೆ ಇಬ್ಬರು ಹೆಮ್ಮಕ್ಕಳು ಇದ್ದರೆ, ಅವನು ಅವರನ್ನು ಚೆನ್ನಾಗಿ ಪಾಲನೆ ಪೋಷಣೆ ಮಾಡಿ, ಅವರಿಗೆ ವಿದ್ಯಾಭ್ಯಾಸ ನೀಡಿ ಅವರನ್ನು ವಿವಾಹ ಮಾಡಿಸಿ ಕೊಟ್ಟರೆ ಅವನಿಗೆ ಸ್ವರ್ಗ ಸಿಗುವುದು."

ಆಗ ಒಬ್ಬ ಶಿಷ್ಯ ಕೇಳಿದರು: "ಒಬ್ಬ ಮಗಳು ಮಾತ್ರ ಇದ್ದರೆ ಹೇಗೆ?" ಅದಕ್ಕೆ ಹಝ್ರತ್ ಪೈಗಂಬರರು ಉತ್ತರ ನೀಡಿದರು: "ಒಬ್ಬ ಮಗಳಿದ್ದರೂ ಹಾಗೆಯೇ."

**5.ಧರ್ಮ ತ್ಯಾಗಕ್ಕೆ ಇಸ್ಲಾಮ್ ಧರ್ಮದ ಶಿಕ್ಷೆ ಏನು?**

ಇಸ್ಲಾಮ್‌ನಲ್ಲಿ ಧರ್ಮತ್ಯಾಗಕ್ಕೆ ಯಾವ ಶಿಕ್ಷೆಯೂ ಇಲ್ಲ.

ಧರ್ಮ ತ್ಯಾಗಕ್ಕೋಸ್ಕರ ಹಝ್ರತ್ ಪೈಗಂಬರರು(ಸ) ಶಿಕ್ಷೆ ನೀಡಿದ ಒಂದು ಘಟನೆ ಕೂಡ ವರದಿಯಾಗಿಲ್ಲ.

ಇಸ್ಲಾಮ್ ಧಾರ್ಮಿಕ ನಂಬಿಕೆಯ ಸ್ವಾತಂತ್ರ್ಯ ಬಗ್ಗೆ ಒತ್ತಿ ಹೇಳಿದೆ. ಪವಿತ್ರ ಖುರ್‌ಆನ್ ಹೀಗೆ ಹೇಳಿದೆ:

"ಧರ್ಮದಲ್ಲಿ ಯಾವುದೇ ರೀತಿಯ ಬಲಾತ್ಕಾರವಿಲ್ಲ." (2:257)

"ನಿಮಗೆ ನಿಮ್ಮ ಧರ್ಮ; ನನಗೆ ನನ್ನ ಧರ್ಮ." (109:7)

ಧಾರ್ಮಿಕ ವಿಶ್ವಾಸದ ಸ್ವಾತಂತ್ರ್ಯ ಇಸ್ಲಾಮಿನ ಮುಖ್ಯ ತತ್ವವಾಗಿದೆ. ಧರ್ಮವು ಮನುಷ್ಯ ಮತ್ತು ದೇವನ ಮಧ್ಯೆ ಇರುವ ವೈಯಕ್ತಿಕ ವಿಚಾರವೆಂದು ಅದು ಸ್ಪಷ್ಟಪಡಿಸುತ್ತದೆ. ಮನುಷ್ಯರು ಒಂದು ಧರ್ಮದಲ್ಲಿ ಪ್ರವೇಶಿಸಿ ಅನಂತರ ಆ ವಿಶ್ವಾಸವನ್ನು ಕೈ ಬಿಡಲು ಸ್ವತಂತ್ರರಾಗಿದ್ದಾರೆಂದು ಪವಿತ್ರ ಖುರ್‌ಆನ್ ಅಧ್ಯಾಯ 4 ವಚನ 138 ಸ್ಪಷ್ಟಪಡಿಸುತ್ತದೆ. ಅದಕ್ಕೆ ಮನುಷ್ಯರಿಂದ ಶಿಕ್ಷೆ ಇಲ್ಲ. ಆದರೆ ಅಂತಹ ಜನರಿಗೆ ದೇವ ಸನ್ನಿಧಿಯಲ್ಲಿ ಶಿಕ್ಷೆ ಲಭಿಸುವುದು ಎಂದು ನಮ್ಮನ್ನು ನೆನಪಿಸಲಾಗಿದೆ.

**6. ದೇವನಿಂದೆಗೆ ಇಸ್ಲಾಮ್ ಧರ್ಮದ ಶಿಕ್ಷೆ ಏನು?**

ದೇವನಿಂದೆಗೆ ಯಾವುದೇ ಶಿಕ್ಷೆ ಪವಿತ್ರ ಖುರ್‌ಆನ್ ವಿಧಿಸಿಲ್ಲ. ಹಝ್ರತ್ ಮುಹಮ್ಮದ್ ಪೈಗಂಬರರು(ಸ) ದೇವನಿಂದೆಗೆ ಅಥವಾ ತನ್ನನ್ನು ನಿಂದಿಸಿದುದಕ್ಕೆ ಶಿಕ್ಷೆ ಎಂದೂ ವಿಧಿಸಿಲ್ಲ. ಹಾಗೆ ಶಿಕ್ಷೆ ವಿಧಿಸಿದ ಬಗ್ಗೆ ಯಾವ ವರದಿಯೂ ಉಲ್ಲೇಖಿತವಾಗಿಲ್ಲ. ಇಸ್ಲಾಮ್ ಎಲ್ಲ ಧರ್ಮಗಳನ್ನು ಗೌರವಿಸಲು ಮತ್ತು ಸಮಾಜದಲ್ಲಿ ಶಾಂತಿ ಸ್ಥಾಪಿಸಲು ಉಪದೇಶಿಸುತ್ತದೆ.

**7. ಮುಸ್ಲಿಮೇತರರು ಮಸ್‌ಜಿದ್‌ಗೆ ಪ್ರವೇಶಿಸಬಹುದೋ?**

ಸಭ್ಯ ಉಡುಪು ಧರಿಸಿದವರು ಮತ್ತು ಶುಚಿತ್ವ ಪಾಲಿಸುವವರು ಮಸ್‌ಜಿದ್‌ಗಳಿಗೆ ಪ್ರವೇಶಿಸಬಹುದು. ಮಸ್‌ಜಿದ್ ಪ್ರವೇಶಿಸುವ ಮೊದಲು ಪಾದರಕ್ಷೆಗಳನ್ನು ತೆಗೆದಿಡಬೇಕು. ನಮಾಝ್ ಮಾಡುವವರಿಗೆ ನೆಲವು ಶುಚಿಯಾಗಿರಿಸಲು ಇದು ಆವಶ್ಯಕವಾಗಿದೆ. ವಿಗ್ರಹವನ್ನಿರಿಸದೆ ಮಸ್‌ಜಿದ್‌ನೊಳಗೆ ಮುಸ್ಲಿಮೇತರರು ಪ್ರಾರ್ಥಿಸಬಹುದು. ಹಝ್ರತ್ ಮುಹಮ್ಮದ್ ಪೈಗಂಬರರು(ಸ) ಕ್ರೈಸ್ತರ ಒಂದು ಪ್ರತಿನಿಧಿ ಸಂಘಕ್ಕೆ ತನ್ನ ಮದೀನದ ಮಸೀದಿಯಲ್ಲಿ ಹೀಗೆ ಪ್ರಾರ್ಥಿಸಲು ಅನುಮತಿ ನೀಡಿದ್ದರು. (ಝುರ್‌ಖಾನಿ)

ಅಹ್ಮದಿಯಾ ಮುಸ್ಲಿಮ್ ಜಮಾಅತ್ ಸಾವಿರಾರು ಮಸ್‌ಜಿದ್‌ಗಳನ್ನು ಲೋಕದ ವಿವಿಧ ಭಾಗಗಳಲ್ಲಿ ನಿರ್ಮಿಸಿದೆ. ಲಂಡನಿನಲ್ಲಿ ದೊಡ್ಡ ಮಸ್‌ಜಿದ್ ನಿರ್ಮಿಸಿದ್ದು, ಅದು ಪಶ್ಚಿಮ ಯುರೋಪಿನ ಅತ್ಯಂತ ದೊಡ್ಡ ಮಸ್‌ಜಿದ್ ಆಗಿರುತ್ತದೆ. ಕೆನಡದ ಕ್ಯಾಲ್‌ಗರಿಯಲ್ಲಿ ನಿರ್ಮಿಸಲಾದ ಮಸ್‌ಜಿದ್ ಉತ್ತರ ಅಮೇರಿಕದ ಅತ್ಯಂತ ದೊಡ್ಡ ಮಸ್‌ಜಿದಾಗಿದೆ. ನಮ್ಮ ಮಸ್‌ಜಿದ್‌ಗಳಿಗೆ ಎಲ್ಲರನ್ನೂ ಸ್ವಾಗತಿಸುತ್ತೇವೆ.

**8. ಹಿಂದಿನ ಕಾಲದಲ್ಲಿ ಆಗಮಿಸಿದ ಪ್ರವಾದಿಗಳ ಬಗ್ಗೆ ಮತ್ತು ಹಿಂದಿನ ದಿವ್ಯ ಗ್ರಂಥಗಳ ಬಗ್ಗೆ ಮುಸ್ಲಿಮರ ವಿಶ್ವಾಸ ಹೇಗಿದೆ?**

ಹಿಂದೆ ಆಗಮಿಸಿದ ಪ್ರವಾದಿಗಳನ್ನು ನಂಬಬೇಕು; ಹಿಂದಿನ ದಿವ್ಯ ಗ್ರಂಥಗಳನ್ನು ನಂಬಬೇಕೆಂಬುದು ಮುಸ್ಲಿಮರ ವಿಶ್ವಾಸದ ಎರಡು ಭಾಗಗಳಾಗಿವೆ. ಎಲ್ಲ ಪ್ರವಾದಿಗಳನ್ನು ದೇವನು ಕಳುಹಿಸಿರುವನೆಂದು ಮುಸ್ಲಿಮರು ನಂಬುತ್ತಾರೆ. ಎಲ್ಲ ದಿವ್ಯ ಗ್ರಂಥಗಳನ್ನು ಮೂಲರೂಪದಲ್ಲಿ ದೇವನೇ ಅವತೀರ್ಣಗೊಳಿಸಿದನೆಂದೂ ಅವುಗಳಲ್ಲಿ ಏಕದೇವ ವಿಶ್ವಾಸ ಪ್ರತಿಪಾದಿಸಲಾಗಿದೆ ಎಂದೂ ಮುಸ್ಲಿಮರು ನಂಬುತ್ತಾರೆ.

ದೇವನು ಪ್ರತಿಯೊಂದು ಜನಾಂಗಕ್ಕೆ ಸಂದೇಶವಾಹಕರನ್ನು ಕಳುಹಿಸಿರುವನೆಂದು ಪವಿತ್ರಖುರ್‌ಆನ್ ಹೇಳಿದೆ. ಪವಿತ್ರ ಖುರ್‌ಆನ್ ವಚನ ಹೀಗಿದೆ:

"ಓರ್ವ ಮುನ್ನೆಚ್ಚರಿಕೆಗಾರನು ಬಂದಿರದ ಯಾವ ಜನಾಂಗವೂ ಇಲ್ಲ." (35:25)

"ಪ್ರತಿಯೊಂದು ಸಮುದಾಯಕ್ಕೂ ಒಬ್ಬೊಬ್ಬ ಪ್ರವಾದಿ ಇದ್ದಾರೆ." (10:48)

ಕೆಲವು ಪ್ರವಾದಿಗಳ ಹೆಸರು ಪವಿತ್ರ ಖುರ್‌ಆನ್‌ನಲ್ಲಿದೆ. ಉದಾಹರಣೆಗೆ, ಆದಮ್, ಅಬ್ರಹಾಮ್, ಡೇವಿಡ್, ಸೋಲೋಮನ್, ಮೋಶೆ, ಯೇಸು (ಅವರೆಲ್ಲರ ಮೇಲೆ ಶಾಂತಿ ಸುರಿಸಲ್ಪಡಲಿ) ಮತ್ತು ಮುಹಮ್ಮದ್ ಪೈಗಂಬರ್(ಸ). ಪವಿತ್ರ ಖುರ್‌ಆನ್‌ನಲ್ಲಿ ಕೆಲವು ಪ್ರವಾದಿಗಳ ಹೆಸರು ಹೇಳಿಲ್ಲ. ಝೊರಾಸ್ಟರ್, ಶ್ರೀಕೃಷ್ಣ, ಶ್ರೀರಾಮ ಕನ್‌ಫ್ಯೂಶಿಯಸ್ ಇಂತಹ ಪ್ರವಾದಿಗಳಾಗಿದ್ದಾರೆ.

ಮುಸ್ಲಿಮರು ಪ್ರವಾದಿಗಳನ್ನು ಮಾತ್ರವಲ್ಲ ಅವರಿಗೆ ಅವತೀರ್ಣವಾದ ಸಂದೇಶವಾಣಿಗಳನ್ನೂ ಗ್ರಂಥಗಳನ್ನೂ ನಂಬುತ್ತಾರೆ. ಪವಿತ್ರ ಖುರ್‌ಆನ್‌ನಲ್ಲಿ ನಾಲ್ಕು ಗ್ರಂಥಗಳ ಬಗ್ಗೆ ಪ್ರಸ್ತಾಪಿಸಲಾಗಿದೆ. ಅವು ಈ ಕೆಳಗಿನವು:

1. ಸುಹುಫ್ : ಅಬ್ರಹಾಮ್ (ಹಝ್ರತ್ ಇಬ್ರಾಹೀಮ್)ರಿಗೆ ಲಭಿಸಿದ ಸಂದೇಶವಾಣಿಗಳು. ಇವುಗಳ ಬಗ್ಗೆ ಪವಿತ್ರ ಖುರ್‌ಆನ್ ಅಧ್ಯಾಯ 87 ವಚನ 20ರಲ್ಲಿ ಪ್ರಸ್ತಾಪಿಸಲಾಗಿದೆ. ಈ ಸಂದೇಶವಾಣಿಗಳು ಪ್ರಾಯಶಃ ಬರೆದಿಡಲ್ಪಟ್ಟಿರಲಿಲ್ಲ. ಆದುದರಿಂದ ಈಗ ಲಭ್ಯವಲ್ಲ.

2. ತೌರಾತ್ – ಮೋಶೆ (ಹಝ್ರತ್ ಮೂಸಾ) ಅವರ ಗ್ರಂಥ. (ಹೀಬ್ರೂ ಬೈಬಲಿನ ಮೊದಲ ಐದು ಪುಸ್ತಕಗಳು)

3. ಝುಬೂರ್ – ಡೇವಿಡ್ (ಹಝ್ರತ್ ದಾವೂದ್) ಅವರ ಗ್ರಂಥ. (ಬೈಬಲಿನಲ್ಲಿರುವ ಕೀರ್ತನಗಳು ಎಂಬ ಪುಸ್ತಕ)

4. ಇಂಜೀಲ್ – ಯೇಸು (ಹಝ್ರತ್ ಈಸಾ) ಅವರ ಗ್ರಂಥ. (ಇದು ಯೇಸು ಕ್ರಿಸ್ತರ ಜೀವಿತ ಕಾಲದಲ್ಲಿ ಬರೆಯಲ್ಪಡಲಿಲ್ಲ)

ಪವಿತ್ರ ಖುರ್‌ಆನ್ ಹೊರತು ಬೇರೆ ಯಾವ ಧಾರ್ಮಿಕ ಗ್ರಂಥವೂ ಅದರ ಮೂಲ ರೂಪದಲ್ಲಿ ರಕ್ಷಿಸಲ್ಪಟ್ಟಿಲ್ಲ.

**ಅಹ್ಮದಿಯಾ ಮುಸ್ಲಿಮ್ ಜಮಾಅತ್**

ಅಹ್ಮದಿಯಾ ಮುಸ್ಲಿಮ್ ಜಮಾಅತ್ ವಿಶ್ವದ ಇನ್ನೂರಕ್ಕಿಂತಲೂ ಹೆಚ್ಚು ದೇಶಗಳಲ್ಲಿ ಕೇಂದ್ರಗಳನ್ನು ಹೊಂದಿರುವ ಅತ್ಯಂತ ಕ್ರಿಯಾಶೀಲ ಮುಸ್ಲಿಮ್ ಸಮುದಾಯವಾಗಿದೆ. ಭಾರತದ ಪಂಜಾಬು ಪ್ರಾಂತ್ಯದ

# ರಮಝಾನ್ ವ್ರತಾನುಷ್ಠಾನ

• ಮುಹಮ್ಮದ್ ಯೂಸುಫ್

ರಮಝಾನ್ ಮಾಸದಲ್ಲಿಡೀ ಎಲ್ಲ ಮುಸ್ಲಿಮರು ವ್ರತವನ್ನನುಷ್ಠಿಸಬೇಕೆಂಬುದು ಇಸ್ಲಾಂ ಧರ್ಮದ ಅನುಶಾಸನವಾಗಿದೆ. ಪ್ರಾತಃಕಾಲದ ನಸುಕಿಗೆ ಮುಂಚಿತವಾಗಿ ಆಹಾರವನ್ನೇನಾದರೂ ಸೇವಿಸಿ ವ್ರತದ ಇಂಗಿತದಿಂದ ಭಕ್ತಭರಿತವಾದ ಜೀವನವನ್ನು ನಡೆಸುವುದಾಗಿದೆ ಇಸ್ಲಾಮಿಕ ವ್ರತಾನುಷ್ಠಾನ. ನಸುಕಿನ ಬೆಳಕು ಹರಿದ ಮೊದಲ್ಗೊಂಡು ಸೂರ್ಯಸ್ತಮಾನದ ವರೆಗಿನ ಕಾಲ ಎಲ್ಲ ವಿಧದ ಆಹಾರ ಪಾನೀಯಾದಿಗಳನ್ನೂ ಧೂಮ್ರಪಾನ, ನಸ್ಯ ಸೇವನೆ, ಹಾಗೆಯೇ ಪತಿ-ಪತ್ನಿಯರು ತಮ್ಮ ದೈಹಿಕ ಸಂಬಂಧವನ್ನು ಪರಿತ್ಯಜಿಸಬೇಕಾದದ್ದು ಇಸ್ಲಾಮಿಕ ವ್ರತಾನುಷ್ಠಾನದ ನಿಯಮವಾಗಿದೆ. ಮನುಷ್ಯನು ಪರಮಾತ್ಮನ ದಯಾಪುರಸ್ಸರವಾದ ಸ್ನೇಹಕ್ಕೆ ಪಾತ್ರನಾಗಲಿಕ್ಕೂ ದೇವನ ಸಾನ್ನಿಧ್ಯವನ್ನು ಪಡೆಯಲಿಕ್ಕೂ ಇಸ್ಲಾಂ ಧರ್ಮ ನಿರ್ದೇಶಿಸುವ ಕರ್ಮಗಳಲ್ಲಿ ವ್ರತಾನುಷ್ಠಾನವು ಒಂದಾಗಿದೆ. ಇಸ್ಲಾಂ ಧರ್ಮದ ತತ್ವ ಪ್ರಕಾರ ಮುಕ್ತಿ ಲಬ್ಧಿಗಾಗಿ ಭಕ್ತಿ ವಿಶ್ವಾಸಗಳಂತೆ ಬಾಹ್ಯಕರ್ಮಗಳೂ ಅತ್ಯಾವಶ್ಯಕ. ಪವಿತ್ರ ಖುರ್‌ಆನ್‌ನಲ್ಲಿಯೂ ಪೈಗಂಬರರ(ಸ) ನುಡಿಗಳಲ್ಲಿಯೂ ಭಕ್ತಿ ವಿಶ್ವಾಸಗಳನ್ನು ಪ್ರತಿಪಾದಿಸುವಾಗ ಸಂಬಂಧಪಟ್ಟ ಕರ್ಮಗಳು ಭಕ್ತಿಯ ಅಖಂಡವಾದ ಭಾಗಗಳೆಂಬಂತೆ ಪ್ರತಿಪಾದಿಸಲ್ಪಟ್ಟಿರುತ್ತವೆ.

ದೇವಪ್ರೀತಿಗಾಗಿ ಯಾವ ತ್ಯಾಗವನ್ನು ಮಾಡಬೇಕೆಂಬ ಪರಿಶುದ್ಧ ಬೋಧವು ವ್ರತದಿಂದ ಉಂಟಾಗುತ್ತದೆ. ಆಗತ್ಯ ಬಂದಲ್ಲಿ ತನ್ನ ದೇಹವನ್ನೂ ಧನವನ್ನೂ ಮಾತ್ರವಲ್ಲ, ತನ್ನ ಸರ್ವಸ್ವವನ್ನೂ ದೇವನಿಗಾಗಿ ಬಲಿಯರ್ಪಿಸುವುದು ಬಹು ದೊಡ್ಡ ಭಾಗ್ಯವೆಂದು ಯಥಾರ್ಥ ಮುಸ್ಲಿಂ

(ಹಿಂದಿನ ಪುಟದಿಂದ)

ಗುರುದಾಸಪುರ ಜಿಲ್ಲೆಯಲ್ಲಿ ಖಾದಿಯಾನ್ ಎಂಬ ಗ್ರಾಮದಲ್ಲಿ ಹಝ್ರತ್ ಮಿರ್ಝಾ ಗುಲಾಮ್ ಅಹ್ಮದ್ (1835 – 1908) ಅವರಿಂದ 1889ರಲ್ಲಿ ಸ್ಥಾಪಿತವಾಯಿತು. ಲೋಕದ ಅಂತಿಮ ಕಾಲಘಟ್ಟದಲ್ಲಿ ಆಗಮಿಸುವುದಾಗಿ ಭವಿಷ್ಯ ನುಡಿಯಲ್ಪಟ್ಟ ಮಹ್‌ದೀ ಮಸೀಹ್ ತಾನೆಂದು ಅವರು ವಾದಿಸಿದರು. ಪರಿಶುದ್ಧ ಇಸ್ಲಾಮ್ ಧರ್ಮ ತತ್ವಗಳನ್ನು ಈ ಜಮಾಅತ್ ಲೋಕದಾದ್ಯಂತ ಪ್ರಚಾರ ಮಾಡುತ್ತಿದೆ. ಶಾಂತಿ ಮತ್ತು ಜಾಗತಿಕ ಭ್ರಾತೃತ್ವವನ್ನು ಅದು ಪರಮ ದಯಾವಂತನೂ ಕಾರುಣ್ಯ ನಿಧಿಯೂ ಆಗಿರುವ ಏಕದೇವನ ಬಗ್ಗೆ ವಿಶ್ವಾಸದ ಅಸ್ತಿಭಾರದಲ್ಲಿ ಪ್ರಚಾರಗೊಳಿಸುತ್ತದೆ.

ಜಾಗತಿಕವಾಗಿ ವಿಸ್ತಾರಗೊಂಡ ಅಹ್ಮದಿಯಾ ಮುಸ್ಲಿಮ್ ಜಮಾಅತ್ ಇಸ್ಲಾಮ್ ಧರ್ಮದ ಶಾಂತಿದಾಯಕ ತತ್ವಗಳನ್ನು ಪ್ರಚಾರಮಾಡುವುದಲ್ಲದೆ ಕೃತಿರೂಪಕ್ಕೆ ಇಳಿಸುತ್ತಿದೆ. ವಿದ್ಯಾಭ್ಯಾಸ ಮತ್ತು ಆರೋಗ್ಯಕ್ಕೆ ಒತ್ತು ನೀಡುತ್ತಾ ಅದು ಶಾಲೆಗಳನ್ನೂ ಆಸ್ಪತ್ರೆಗಳನ್ನೂ ನಿರ್ಮಿಸುತ್ತಿದೆ ಮತ್ತು ವಿವಿಧ ಧರ್ಮಗಳ ಮಧ್ಯೆ ಶಾಂತಿಯುತವಾಗಿ ವಿಚಾರಗೋಷ್ಠಿಗಳನ್ನು ಏರ್ಪಡಿಸುತ್ತದೆ. ಸಂತ್ರಸ್ತ ಜನರ ಸೇವೆಗೋಸ್ಕರ ಸೇವಾಸಂಸ್ಥೆಗಳನ್ನು ಸ್ಥಾಪಿಸಿದೆ.

ಎಪ್ಪತ್ತೈದು ಭಾಷೆಗಳಿಗೆ ಪವಿತ್ರಖುರ್‌ಆನನ್ನು ಭಾಷಾಂತರಿಸಿ ಪ್ರಕಟಿಸಿದ ಏಕಮಾತ್ರ ಜಮಾಅತ್ ಇದಾಗಿದೆ. ಭಾಷಾಂತರಗೊಳಿಸಲಾದ ಭಾಷೆಗಳಲ್ಲಿ ಅಂಧರಿಗೋಸ್ಕರ ಬ್ರೈಲ್ ಭಾಷೆಯೂ ಸೇರಿದೆ. ಈ ಜಮಾಅತ್ MTA ಇಂಟರ್‌ನೇಶನಲ್ ಎಂಬ ದೂರದರ್ಶನ ಪ್ರಸಾರವನ್ನು ಇಪ್ಪತ್ತುನಾಲ್ಕು ಗಂಟೆಗಳಷ್ಟು ಕಾಲ ವಾರದ ಎಲ್ಲ ದಿನಗಳಲ್ಲೂ ಮಾಡುತ್ತಿದ್ದು ಹದಿನಾಲ್ಕು ಭಾಷೆಗಳಲ್ಲಿ ಪ್ರಸಾರಗಳು ಮಾಡಲ್ಪಡುತ್ತವೆ.

www.mta.tv ಯಲ್ಲಿ ಇದನ್ನು ಕಾಣಬಹುದಾಗಿದೆ.

ಸಂಪರ್ಕಿಸಿರಿ:

**AHMADIYYA MUSLIM JAMA'AT**

"DARUSSALAM"

NEAR RAILWAY LEVEL CROSSING
PANDESHWAR, MANGALORE - 575001

MOBILE:9591885489

**AHMADIYYA MUSLIM JAMA'AT**

1, 3rd Cross, Wilson Garden
Bangalore - 560 027.
Phone : 080 - 22246133

**ಭಾರತದ ಮುಖ್ಯಕೇಂದ್ರ :**

**AHAMADIYYA MUSLIM JAMA'AT**

Mohalla Ahmadiyya
Qadian - 143 516, Punjab - India
National Free Toll Number:
1800 3010 2131
Official Website : www.alislam.org

LOVE FOR ALL HATRED FOR NONE

ತಿಳಿಯುತ್ತಾನೆ. ಈ ರೀತಿಯ ತ್ಯಾಗಕ್ಕೆ ಸನ್ನದ್ಧನಾಗದ ಓರ್ವನು ದೇವ ಪ್ರೀತಿಗೆ ಪಾತ್ರನಾಗಲು ಅರ್ಹನಲ್ಲ.

ವ್ರತಕಾಲದಲ್ಲಿ ಒಬ್ಬ ಮುಸ್ಲಿಂ ಆಹಾರ ಪಾನೀಯಗಳಿಲ್ಲದೆಯೂ ಪತ್ನಿಯಿಂದ ದೂರವಿರಲೂ ಅಭ್ಯಸಿಸುತ್ತಾನೆ. ಅದರಿಂದಾಗಿ ದೇವಪಥದಲ್ಲಿ ಹಸಿವು, ಬಾಯಾರಿಕೆಯನ್ನು ಸಹಿಸಲಿಕ್ಕೂ ಪತ್ನಿ ಪುತ್ರಾದಿಗಳಿಂದ ಬೇರ್ಪಡಬೇಕಾಗಿ ಬಂದರೆ ಅವನು ಉತ್ಸಾಹದಿಂದ ಅದಕ್ಕೂ ಸಿದ್ಧನಾಗುತ್ತಾನೆ. ದೇವಪ್ರೀತಿಯನ್ನು ಅಪೇಕ್ಷಿಸಿ ಒಂದು ಕ್ಲಪ್ತ ಸಮಯದ ತನಕ ಭಕ್ಷ್ಯಪೇಯಗಳನ್ನೂ ತನ್ನ ಪತ್ನಿಯನ್ನೂ ತ್ಯಜಿಸುವುದರಿಂದಾಗಿ, ಅಗತ್ಯ ಬಂದಾಗ ಅದಕ್ಕಿಂತ ಹೆಚ್ಚನ್ನು ಮಾಡಲಿಕ್ಕೂ ಅವನು ಸನ್ನದ್ಧನಾಗುವನೆಂದು ಸ್ಪಷ್ಟವಾಗುತ್ತದೆ.

ಲೋಭ, ಮೋಹ, ಕ್ರೋಧ ಮೊದಲಾದ ಅರಿಷಡ್ವರ್ಗಗಳು ಎಲ್ಲ ಪಾಪಗಳಿಗೆ ಮೂಲ ಕಾರಣ. ವ್ರತಾನುಷ್ಠಾನದಿಂದ ಇವು ನಿಯಂತ್ರಿಸಲ್ಪಡುತ್ತವೆ. ಲೋಭದಿಂದ ಓರ್ವನು ಅನ್ಯಾಯವಾಗಿ ಅನ್ಯರ ಸಂಪತ್ತನ್ನು ಆಶಿಸುವನು; ಮೋಹದಿಂದ ಅನೇಕ ಚಪಲ ಪ್ರವೃತ್ತಿಗಳಿಗೆ ವಶನಾಗುವನು; ಕ್ರೋಧವನ್ನು ನಿಯಂತ್ರಿಸಲಾರದೆ ಇರಿತಕ್ಕೂ ಕೊಲೆಪಾತಕಕ್ಕೂ ಕಾರಣನಾಗುವನು. ಆದರೆ ತಾನು ಸ್ವತಃ ಸಂಪಾದಿಸಿದ ಹಾಗೂ ತನಗೆ ಅವಕಾಶವಿರುವ ಭಕ್ಷ್ಯವಸ್ತುಗಳನ್ನೂ ತನ್ನ ಪ್ರೀತಿಯ ಧರ್ಮಪತ್ನಿಯನ್ನೂ ದೇವಪ್ರೀತಿಗಾಗಿ ಉಪೇಕ್ಷಿಸಲು ಸಾಧ್ಯವಾದ ಓರ್ವನಿಗೆ ತನಗವಕಾಶವಿಲ್ಲದ ಅನ್ಯರ ಸಂಪತ್ತಿನಲ್ಲಾಗಲೀ ಸ್ತ್ರೀಯಲ್ಲಾಗಲೀ ಮೋಹವುಂಟಾಗಲಾರದಷ್ಟೆ? ಅವನ ಈ ಸ್ವಭಾವದ ಫಲವಾಗಿ ತನ್ನ ಕ್ರೋಧವನ್ನು ನಿಯಂತ್ರಿಸುವ ಶಕ್ತಿಯೂ ಅವನಿಗೆ ಲಭಿಸುವುದು. ಹೀಗೆ ವ್ರತಾನುಷ್ಠಾನದಿಂದ ಸದ್ಗುಣಗಳು ಸಿದ್ಧಿಸುತ್ತವೆ.

ಮನುಷ್ಯನ ಕೆಲವು ಚಟಗಳು ಆರೋಗ್ಯಕ್ಕೆ ಹಾನಿಕರವೂ ಸತ್ಕರ್ಮಗಳಿಗೆ ಪ್ರತಿಬಂಧಕವೂ ದುಷ್ಕರ್ಮಗಳಿಗೆ ಕಾರಣವೂ ಆಗುತ್ತವೆ. ವ್ರತಾನುಷ್ಠಾನದಿಂದ ಈ ರೀತಿಯ ದುಶ್ಚಟಗಳನ್ನು ನಿವಾರಿಸಲಿಕ್ಕೂ ಆಧ್ಯಾತ್ಮಿಕ ಔನ್ನತ್ಯವನ್ನು ಪಡೆಯಲಿಕ್ಕೂ ಸಾಧ್ಯವಾಗುತ್ತದೆ. ಉದಾಹರಣೆಗೆ, ಬೀಡಿ–ಸಿಗರೇಟು ಸೇದುವುದು, ಅಥವಾ ಇನ್ನಿತರ ಧೂಮ್ರಪಾನ ಇಂತಹ ದುಶ್ಚಟಗಳನ್ನು ಸ್ವಲ್ಪ ಸಮಯದವರೆಗಾದರೂ ದೇವಹಿತಕ್ಕಾಗಿ ತ್ಯಜಿಸುವ ಓರ್ವನು ಅವುಗಳನ್ನು ಸಂಪೂರ್ಣವಾಗಿ ವರ್ಜಿಸಲು ಶಕ್ತನಾಗುವನು. ಬದುಕಲು ಅತ್ಯಾವಶ್ಯಕವೂ ಉಪಯೋಗಿಸಲು ವಿರೋಧವೂ ಇಲ್ಲದ ವಸ್ತುಗಳನ್ನೇ ತ್ಯಜಿಸುವ ವ್ರತಾನುಷ್ಠಾನಿಗೆ ಇಂತಹ ಅನವಶ್ಯಕವೂ ದೋಷಕರವೂ ಆದ ವಸ್ತುಗಳನ್ನು ಪರಿತ್ಯಜಿಸಲು ಪ್ರಯಾಸವಾಗದು.

ವ್ರತಾನುಷ್ಠಾನವು ವಿಧಿಸಲ್ಪಟ್ಟದ್ದು "ನೀವು 'ಮುತ್ತಖೀ'ಗಳಾಗಿರಲಿಕ್ಕೆ ಆಗಿದೆ" ಎಂದು ಪವಿತ್ರ ಖುರ್‌ಆನ್ ಹೇಳುತ್ತದೆ. 'ಮುತ್ತಖೀ' ಎಂಬ ಅರಬಿ ಪದದ ಅರ್ಥ ಕಷ್ಟಾನುಭವದಿಂದ ವಿಮೋಚಿತನು; ಪಾಪದಿಂದ ಮುಕ್ತಿಹೊಂದಿದವನು; ಆಧ್ಯಾತ್ಮಿಕ ಉನ್ನತಿಯನ್ನು ಪಡೆದವನು ಎಂದಾಗಿವೆ.

ಧನಿಕರು ಸದಾ ಒಳ್ಳೆ ಒಳ್ಳೆಯ ಭಕ್ಷ್ಯ ಭೋಜನಾದಿಗಳನ್ನು ಯಥೇಷ್ಟವಾಗಿ ತಿನ್ನುವುದರಿಂದಾಗಿ ಹಸಿವು ಎಂದರೆ ಏನೆಂದು ಅವರಿಗೆ ತಿಳಿಯಲು ಸಾಧ್ಯವಿಲ್ಲ. ಆದುದರಿಂದ ದಾರಿದ್ರ್ಯ ದುಃಖಕ್ಕೆ ಸಿಲುಕಿ ಬಳಲುವ ಬಡವರ ಮೇಲೆ ಅವರಿಗೆ ಅನುಕಂಪವುಂಟಾಗಲು ಕಾರಣವಿಲ್ಲ. ಆದರೆ ಇಸ್ಲಾಮಿಕ ನಿಮಯ ಪ್ರಕಾರ ರಾಜ–ಪ್ರಜೆ, ಧನಿಕ–ದರಿದ್ರ ಎಂಬ ಭೇದಭಾವವಿಲ್ಲದೆ ಸಕಲರೂ ವ್ರತವನ್ನನುಷ್ಠಿಸಬೇಕಾದುದರಿಂದ ಎಲ್ಲರಿಗೂ ಹಸಿವಿನ ಕಠಿಣತೆಯನ್ನು ಅನುಭವಿಸಲು ಸಾಧ್ಯವಾಗುತ್ತದೆ. ಅದರ ಪರಿಣಾಮವಾಗಿ ಧನಿಕರಿಗೆ ದರಿದ್ರರ ಮೇಲೆ ಕರುಣೆಯುಂಟಾಗಿ, ಅವರಿಗೆ ಬೇಕಾದ ಸಹಾಯ ಸಹಕಾರಗಳನ್ನು ನೀಡಲು ಪ್ರೇರಿತರಾಗುತ್ತಾರೆ. ಹಾಗೆ ವ್ರತವು ಬಡ ಜನರ ಸಂರಕ್ಷಣೆಗೂ ಸಮುದಾಯ ಕ್ಷೇಮಕ್ಕೂ ಕಾರಣವಾಗುತ್ತದೆ. ಮನುಷ್ಯನು ಆಲಸಿಯೂ ಸುಖಲೋಲುಪನೂ ಆಗಿರಲಿಕ್ಕೆ ಇಸ್ಲಾಂ ಸತುರಾಂ ಸಮ್ಮತಿಸವುದಿಲ್ಲ. ತದ್ವಿರುದ್ಧವಾಗಿ ಅವನು ಕ್ಲೇಶಗಳನ್ನು ಅನುಭವಿಸಲು ಪ್ರಾಪ್ತನೂ ಶ್ರಮಶೀಲನೂ ಆಗಿರಬೇಕೆಂದು ಇಸ್ಲಾಂ ಉಪದೇಶಿಸುತ್ತದೆ. ಒಂದು ಸಮುದಾಯದ ಸರ್ವರೂ ಶ್ರಮಶಾಲಿಗಳೂ ಸಹನಾ ಶಕ್ತಿಯುಳ್ಳವರೂ ಆಗಿದ್ದರೆ, ಅದು ಸಂಕಷ್ಟಗಳನ್ನು ಎದುರಿಸಲಿಕ್ಕೂ ಅಭಿವೃದ್ಧಿಯನ್ನು ಪಡೆಯಲಿಕ್ಕೂ ಶಕ್ತವಾಗುತ್ತದೆ. ರಮಝಾನ್ ಚಾಂದ್ರಮಾಸವಾದುದರಿಂದ ಕೆಲವೊಮ್ಮೆ ಅದು ಅತೀ ಶೀತಕಾಲದಲ್ಲಿಯೂ ಕೆಲವೊಮ್ಮೆ ಅತೀ ಉಷ್ಣಕಾಲದಲ್ಲಿಯೂ ಬರುತ್ತದೆ. ಋತುಭೇದದಿಂದಾಗಿ ಒಂದು ಕಾಲದಲ್ಲಿ ಇಲ್ಲದ ಕಷ್ಟಕ್ಲೇಶಗಳನ್ನು ಇನ್ನೊಂದು ಕಾಲದಲ್ಲಿ ವ್ರತಾನುಷ್ಠಾನಿಯು ಅನುಭವಿಸಬೇಕಾಗುತ್ತದೆ. ಹೀಗೆ ಅವನು ವರ್ಷದ ಎಲ್ಲ ಋತುಗಳಲ್ಲಿ ಬರುವ ಪ್ರತಿಕೂಲಗಳನ್ನೂ ಕಷ್ಟಕ್ಲೇಶಗಳನ್ನೂ ಸಹಿಸಲು ತರಬೇತಿಯನ್ನು ಪಡೆಯುವನು.

ಮನುಷ್ಯನು ಇಂದ್ರಿಯೇಚ್ಛೆಗೆ ಅಧೀನನಾಗುವುದು ಸಹಜ. ಲೌಕಿಕಾಸಕ್ತಿಯಲ್ಲಿ ಮುಳುಗಿದವನಿಗೆ ಅದರಿಂದ ಮೇಲೇಳುವುದು ಅಷ್ಟು ಸುಲಭವಲ್ಲ. ಆದರೆ ಇಚ್ಛಾ ನಿರೋಧವನ್ನು ಅಭ್ಯಸಿಸಿದ ವ್ರತಾನುಷ್ಠಾನಿಗೆ ಐಹಿಕೇಚ್ಛೆಗಳನ್ನು ನಿಯಂತ್ರಿಸಲಿಕ್ಕೂ ದುಷ್ಪ್ರವೃತ್ತಿಯ ಕಡೆಗೆ ಚಲಿಸುವ ಮನಸ್ಸನ್ನು ಹಿಡಿದು ನಿಲ್ಲಿಸಲಿಕ್ಕೂ ಸಾಧ್ಯವಾಗಿ ಪಾಪಕರ್ಮಗಳಿಂದ ದೂರವಾಗುವನು.

ಲೌಕಿಕ ವಿಷಯಗಳಲ್ಲಿ ಹೆಚ್ಚಿನ ಆಸಕ್ತಿಯಿಲ್ಲದ ವ್ರತಾನುಷ್ಠಾನಿ ಹಗಲು ಹೊತ್ತಿನಲ್ಲಿಡೀ ದೇವರ ಧ್ಯಾನದಲ್ಲಿಯೂ ಮತ್ತಿತರ ಸತ್ಕರ್ಮಗಳಲ್ಲಿಯೂ, ಹಾಗೆಯೇ ರಾತ್ರಿ ಹೊತ್ತಿನಲ್ಲಿ ಹೆಚ್ಚು ನಿದ್ರಿಸದೆ ಪ್ರಾರ್ಥನೆಗಳಲ್ಲಿಯೂ ಮಗ್ನನಾಗುತ್ತಾನೆ. ಅದರ ಪರಿಣಾಮವಾಗಿ ಆತ್ಮಶುದ್ಧಿಯನ್ನು ಪಡೆದ ಅವನಿಗೆ ಕ್ರಮೇಣ ಆಧ್ಯಾತ್ಮಿಕ ಪುರೋಗತಿಯು ಲಭಿಸುವುದು.

ವ್ರತವನ್ನು ಆಚರಿಸುವುದರಿಂದಾಗಿ ಮನುಷ್ಯರು ಪರಮಾತ್ಮನೊಡನೆ ಕೃತಜ್ಞತೆಯುಳ್ಳವರಾಗುತ್ತಾರೆ. ಆಯುರಾರೋಗ್ಯದಿಂದ ಇರುವವನಿಗೆ ಆರೋಗ್ಯದ ಮಹತ್ವವನ್ನೂ ದೃಷ್ಟಿಸರಿಯುಳ್ಳವನಿಗೆ ಕಣ್ಣಿನ ಮಹತ್ವವನ್ನೂ ಅವು ನಷ್ಟವಾದಾಗ ಮನವರಿಕೆಯಾಗುವಷ್ಟು ಬೇರೆ ಯಾವ ಸಂದರ್ಭದಲ್ಲೂ ತಿಳಿಯಲು ಸಾಧ್ಯವಿಲ್ಲವಷ್ಟೇ? ಹಾಗೆಯೇ ಮನುಷ್ಯನ ಜೀವಿತಕ್ಕೆ ಅತ್ಯಾವಶ್ಯಕವಾದ ವಸ್ತುಗಳನ್ನು ವ್ರತವನ್ನಾಚರಿಸುವವನು ವ್ರತಕಾಲದಲ್ಲಿ ತ್ಯಜಿಸಿದಾಗ ಅವನಿಗೆ ಅವುಗಳ ಮಹತ್ವವೇನೆಂಬುದು ಬಹಳ ಸ್ಪಷ್ಟವಾಗಿ ಅರಿವಾಗುತ್ತದೆ. ಆಗ ಅವನು ಆ ಸರ್ವದಾತನಾದ ಪರಿಪಾಲಕನಿಗೆ ಕೃತಜ್ಞತೆಯನ್ನು ಸೂಚಿಸುತ್ತಾನೆ.

ಹೀಗೆ ಪರಮಾತ್ಮನ ಸಂಪ್ರೀತಿಯನ್ನು ಗಳಿಸುವ ಉದ್ದೇಶದಿಂದ ವರ್ಷದಲ್ಲಿ ಒಂದು ತಿಂಗಳು ಎಡೆಬಿಡದೆ ಹಗಲು ಹೊತ್ತಿನಲ್ಲಿ ವ್ರತವನ್ನಾಚರಿಸಿ ಇಚ್ಛಾ ನಿಯಂತ್ರಣವನ್ನು ಮಾಡುತ್ತಿದ್ದರೆ ಈ ಸ್ವಭಾವವು ಒಂದು ಸ್ಥಿರ ಗುಣವಾಗಿ ಮಾರ್ಪಟ್ಟು ದೇವವಿರೋಧವಾದ ಏನನ್ನೂ ಆಶಿಸದಂತೆಯೂ ಪಡೆಯದಂತೆಯೂ ಪ್ರವರ್ತಿಸದಂತೆಯೂ ತಡೆಯುವ ಆತ್ಮಶಕ್ತಿಯು ಲಭಿಸಿ ಸಮಾಧಾನವೂ ಸ್ಥಿರತೆಯೂ ಅವನಲ್ಲಿ ಸ್ಥಾಯಿಯಾಗಿ ವಿರಾಜಿಸುವುದು.

●

# ಇಸ್ಲಾಮಿನ ಪಾಠಗಳು

## ಉಪವಾಸ

ಉಪವಾಸಕ್ಕೆ ಅರಬಿ ಭಾಷೆಯಲ್ಲಿ **"ಸೌಮ್"** ಎಂದು ಹೆಸರು. ಇದರ ಅರ್ಥ ತಡೆದಿಟ್ಟುಕೊಳ್ಳುವುದು ಎಂದಾಗಿದೆ. ಇಸ್ಲಾಮ್ ಧರ್ಮದಲ್ಲಿ ಸೌಮ್ ಎಂಬ ಪದವು ತಿನ್ನುವುದು, ಕುಡಿಯುವುದು ಮತ್ತು ಇಸ್ಲಾಮ್ ಧರ್ಮ ನಿಷಿದ್ಧಗೊಳಿಸಿದ ಕೃತ್ಯಗಳಿಂದ ತಮ್ಮನ್ನು ತಡೆದಿಟ್ಟುಕೊಳ್ಳುವುದಕ್ಕೆ ಪ್ರಯೋಗಿಸಲ್ಪಡುತ್ತದೆ.

ಉಪವಾಸ ಮಾಡುವುದು ಮನುಷ್ಯನ ಆಧ್ಯಾತ್ಮಿಕ ಉನ್ನತಿಗೆ ಅತ್ಯುತ್ತಮವಾದೊಂದು ಮಾರ್ಗವಾಗಿದೆ. ಆಹಾರ ಪದಾರ್ಥಗಳು ಶರೀರಕ್ಕೆ ಆವಶ್ಯಕವಾಗಿರುವ ಹಾಗೆಯೇ ಉಪವಾಸ ಮಾಡುವುದು ಆತ್ಮಕ್ಕೆ ಅವಶ್ಯಕವಾಗಿದೆ. ಶರೀರವು ಆಹಾರವಿಲ್ಲದೆ ಹೇಗೆ ನೆಲೆ ನಿಲ್ಲಲಾರದೋ ಹಾಗೆಯೇ ಆತ್ಮಕ್ಕೆ ನೆಲೆ ನಿಲ್ಲುವಿಕೆಗೆ ಉಪವಾಸವು ಆಗತ್ಯವಾಗಿದೆ.

ಉಪವಾಸ ಮಾಡುವುದರಿಂದ ಮನುಷ್ಯನಿಗೆ ಅಲ್ಲಾಹನ ಸಾಮೀಪ್ಯ ಲಭಿಸುತ್ತದೆ. ಅವನ ಮೇಲೆ ಅಲ್ಲಾಹನ ಅನುಗ್ರಹ ಸುರಿಸಲ್ಪಡುತ್ತದೆ. ಅವನ ಪ್ರಾರ್ಥನೆಗಳು ಅಂಗೀಕರಿಸಲ್ಪಡುತ್ತವೆ. ಅವನು ಪಾಪಗಳಿಂದ ರಕ್ಷಿಸಲ್ಪಡುತ್ತಾನೆ. ಅವನು ಪರಿಶುದ್ಧಗೊಳಿಸಲ್ಪಡುತ್ತಾನೆ. ಪಾಪಗಳಿಂದ ರಕ್ಷಿಸಲ್ಪಡಲಿಕ್ಕಿರುವ ಅತ್ಯುತ್ತಮ ಮಾರ್ಗ ಉಪವಾಸ ಮಾಡುವುದಾಗಿದೆ.

ಅಲ್ಲಾಹನ ಸಂಪ್ರೀತಿಯನ್ನು ಗಳಿಸಲಿಕ್ಕಿರುವ ಬಹಳ ಉತ್ತಮವಾದ ವಿಧಾನ ಉಪವಾಸ ಮಾಡುವುದಾಗಿದೆ. ಅಲ್ಲಾಹನು ಒಬ್ಬನ ಕೃತ್ಯದಿಂದ ಸಂತೃಪ್ತನಾದರೆ ಆ ವ್ಯಕ್ತಿಗೆ ಅದಕ್ಕಿಂತ ಹೆಚ್ಚಿನದೇನೂ ಬೇಕಾಗಿರುವುದಿಲ್ಲ. ಅಲ್ಲಾಹನು ತನ್ನ ದಾಸನ ಸತ್ಕರ್ಮಗಳಿಂದ ಸಂತೋಷಭರಿತನಾದರೆ ಅವನು ತನ್ನ ದಾಸನಿಗೆ ಅನೇಕ ಅನುಗ್ರಹಗಳನ್ನು ದಯಪಾಲಿಸುತ್ತಾನೆ. ಅಂತಹ ದಾಸನ ಹೃದಯವನ್ನೂ ಜೀವವನ್ನೂ ಅಲ್ಲಾಹನು ತನ್ನ ಪ್ರಕಾಶದಿಂದ ಬೆಳಗುತ್ತಾನೆ. ಅವನ ಪ್ರತಿಯೊಂದು ವಸ್ತುವಿನೊಳಗೆ ಅಲ್ಲಾಹನು ಅನುಗ್ರಹ ಸುರಿಸುತ್ತಾನೆ. ಅವನೊಂದಿಗೆ ಸಂಬಂಧ ಜೋಡಿಸಿದ ವಸ್ತು ಸಹಅನುಗ್ರಹ ಭರಿತವಾಗುತ್ತದೆ.

ಉಪವಾಸವನ್ನು ಅನುಷ್ಠಿಸುವುದು ಎಲ್ಲ ಪ್ರವಾದಿಗಳ ನಡೆವಳಿಕೆಗಳಿಗೆ ಸೇರಿದುದಾಗಿದೆ. ಅದರ ಮೂಲಕ ಅಲ್ಲಾಹನ ಸಾಮೀಪ್ಯ, ಅವನ ಸಂಪ್ರೀತಿ ಮತ್ತು ಅವನ ಕುರಿತು ಜ್ಞಾನ ಲಭಿಸುತ್ತದೆ.

## ರಮಝಾನ್ ತಿಂಗಳ ಉಪವಾಸ

ರಮಝಾನ್ ತಿಂಗಳಲ್ಲಿ ಪ್ರತಿಯೊಬ್ಬ ಪ್ರಾಪ್ತ ವಯಸ್ಕ ಮುಸ್ಲಿಮನು ಉಪವಾಸವನ್ನು ಕಡ್ಡಾಯವಾಗಿ ಅನುಷ್ಠಿಸಬೇಕು. ಯಾರಾದರೂ ಪ್ರಯಾಣ ಮಾಡುತ್ತಿದ್ದರೆ ಅಥವಾ ರೋಗಿಯಾಗಿದ್ದರೆ ರಮಝಾನ್ ತಿಂಗಳಲ್ಲಿ ಉಪವಾಸ ಅನುಷ್ಠಿಸಬಾರದು. ಆದರೆ ಪ್ರಯಾಣ ಮುಗಿದ ನಂತರ ಅಥವಾ ರೋಗವಿಮುಕ್ತನಾದ ನಂತರ ಬಿಟ್ಟು ಹೋದ ದಿನಗಳ ಉಪವಾಸ ಅನುಷ್ಠಿಸಬೇಕು. ಮಹಿಳೆಯರು ಮುಟ್ಟಿನ ಕಾಲದಲ್ಲಿ ಮತ್ತು ಮಗುವಿಗೆ ಹಾಲೂಡಿಸುತ್ತಿರುವಾಗ ರಮಝಾನ್ ತಿಂಗಳಲ್ಲಿ ಉಪವಾಸ ಮಾಡಬಾರದು. ಯಾರಾದರೂ ಯಾವುದಾದರೂ ಯೋಗ್ಯ ಕಾರಣವಿಲ್ಲದೆ ಉದ್ದೇಶಪೂರ್ವಕವಾಗಿ ಉಪವಾಸ ಅನುಷ್ಠಿಸದಿದ್ದರೆ ಅಂತಹ ವ್ಯಕ್ತಿ ಅಲ್ಲಾಹನ ಆಜ್ಞೆಯನ್ನು ತೀವ್ರವಾಗಿ ಉಲ್ಲಂಘಿಸುವವನೆಂದು ಪರಿಗಣಿಸಲ್ಪಡುವುದು. ಅಲ್ಲಾಹನ ಕೋಪಕ್ಕೆ ಅವನು ಪಾತ್ರನಾಗುವನು. ಅವನು ಅಲ್ಲಾಹನಿಂದ ದೂರ ಸರಿಸಲ್ಪಡುತ್ತಾನೆ. ಅವನು ಅಲ್ಲಾಹನ ಆಜ್ಞೆಯನ್ನು ಪಾಲಿಸುವುದಿಲ್ಲವಾದುದರಿಂದ ಅವನು ಮುಸ್ಲಿಮನೂ ಅಲ್ಲ.

ರಮಝಾನ್ ತಿಂಗಳು ಬಹಳ ಅನುಗ್ರಹಭರಿತ ತಿಂಗಳಾಗಿದೆ. ಈ ತಿಂಗಳಲ್ಲಿ ಸ್ವರ್ಗದ ಬಾಗಿಲುಗಳು ತೆರೆಯಲ್ಪಡುತ್ತವೆ. ಶೈತಾನನು ಬಂಧಿಸಲ್ಪಡುತ್ತಾನೆ. ಇದೇ ತಿಂಗಳಲ್ಲಿ ಪವಿತ್ರ ಖುರ್‌ಆನ್ ಅವತೀರ್ಣವಾಗಲು ಪ್ರಾರಂಭವಾಯಿತು. ಇದೇ ತಿಂಗಳಲ್ಲಿ ಲೈಲತುಲ್ ಖದ್ರ್ ಎಂಬ ವಿಶಿಷ್ಟ ರಾತ್ರಿ ಇರುತ್ತದೆ. ರಮಝಾನ್ ತಿಂಗಳ ಕೊನೆಯ ಹತ್ತು ದಿವಸಗಳ ಬಿಡಿ ರಾತ್ರಿಗಳಲ್ಲಿ ಎಂದರೆ 21, 23, 25, 27 ಮತ್ತು 29ನೇ ರಾತ್ರಿಗಳಲ್ಲಿ ಯಾವುದಾದರೊಂದು ರಾತ್ರಿ ಈ ಮಹತ್ವಪೂರ್ಣ ರಾತ್ರಿ ಇರುತ್ತದೆ. ಈ ತಿಂಗಳ ಕೊನೆಯ ಹತ್ತು ದಿನಗಳಲ್ಲಿ ಇಅ್‌ತಿಕಾಫ್ ಎಂದು ಕರೆಯಲ್ಪಡುವ, ಮಸ್‌ಜಿದ್‌ನಲ್ಲಿಯೇ ಇದ್ದು ಹೊರಗೆ ಹೋಗದೆ ಅಲ್ಲಾಹನ ಧ್ಯಾನ ಆರಾಧನೆಗಳನ್ನು ಮಾಡಲಾಗುತ್ತದೆ.

## ಉಪವಾಸ ಮಾಡುವ ರೀತಿ

ಶಅಬಾನ್ ತಿಂಗಳು 29ನೇ ದಿನಾಂಕ ಕೊನೆಗೊಂಡು ಮೂವತ್ತನೆಯ ದಿನಾರಂಭದಲ್ಲಿ ಚಂದ್ರನು ಕಾಣಿಸಿಕೊಂಡರೆ ರಮಝಾನ್ ತಿಂಗಳು ಆರಂಭವಾಯಿತೆಂದು ತಿಳಿದುಕೊಳ್ಳಬೇಕು. ಅಥವಾ ಶಅಬಾನ್ ತಿಂಗಳ ಮೂವತ್ತು ದಿವಸಗಳು ಪೂರ್ಣವಾದರೆ ಚಂದ್ರನು ಕಾಣಿಸಿಕೊಳ್ಳುವಷ್ಟು ಆಕಾಶವು ಶುಭ್ರವಾಗಿಲ್ಲವಾದರೂ ರಮಝಾನ್ ತಿಂಗಳು ಆರಂಭವಾಯಿತೆಂದು ಗಣಿಸಬೇಕು. ರಮಝಾನ್ ತಿಂಗಳು ಪ್ರಾರಂಭವಾದ ರಾತ್ರಿ ಇಶಾ ಪ್ರಾರ್ಥನೆಯ ನಂತರ ತರಾವೀಹ್ ಪ್ರಾರ್ಥನೆ ಮಾಡಬೇಕು. ಉಪವಾಸ ಮಾಡುವ ನಿಯ್ಯತ್ (ಸಂಕಲ್ಪ) ಹೀಗೆ ಮಾಡಬೇಕು:

وَبِصَوْمِ غَدٍ نَوَيْتُ مِنْ شَهْرِ رَمَضَانَ

**ವ ಬಿಸೌಮಿ ಗದಿನ್ ನವಯ್‌ತು ಮಿನ್ ಶಹ್‌ರಿ ರಮಝಾನ**

ಅರ್ಥ: ನಾನು ರಮಝಾನ್ ತಿಂಗಳ ಉಪವಾಸವನ್ನು ನಾಳೆ ಅನುಷ್ಠಿಸುವ ಸಂಕಲ್ಪ ಮಾಡಿರುವೆನು.

ಪೂರ್ವದಿಕ್ಕಿನಲ್ಲಿ ಸೂರ್ಯ ಪ್ರಕಾಶ ಕಾಣಿಸುವ ಮೊದಲೇ ನಸುಕಿನಲ್ಲಿ ಎದ್ದು ಆಹಾರವನ್ನು ತಿನ್ನಬೇಕು. ಹೀಗೆ ತಿನ್ನುವ ಆಹಾರ, ಕುಡಿಯುವ ಪಾನೀಯ ಮೊದಲಾದವುಗಳನ್ನು ಸಹ್‌ರೀ ಎಂದು ಹೇಳುತ್ತಾರೆ.

ನಸುಕಿನಿಂದ ಸೂರ್ಯಾಸ್ತಮಾನದ ತನಕ ತಿನ್ನುವುದು, ಕುಡಿಯುವುದು ನಿಷಿದ್ಧವಾಗಿದೆ. ಸೂರ್ಯಾಸ್ತಮಾನವಾದ ಕೂಡಲೇ

ಆಹಾರ ಪಾನೀಯಾದಿಗಳನ್ನು ಸೇವಿಸಿ ಉಪವಾಸವನ್ನು ಮುಕ್ತಾಯಗೊಳಿಸಲಾಗುತ್ತದೆ. ಆಗ ಹೀಗೆ ಪ್ರಾರ್ಥಿಸಬೇಕು:

اَللّٰهُمَّ لَكَ صُمْتُ وَعَلٰى رِزْقِكَ

اَفْطَرْتُ ذَهَبَ الظَّمَأُ وَابْتَلَّتِ الْعُرُوْقُ وَثَبَتَ الْاَجْرُ

اِنْ شَاءَ اللّٰهُ اَللّٰهُمَّ اِنِّيْ اَسْئَلُكَ بِرَحْمَتِكَ الَّتِيْ

وَسِعَتْ كُلَّ شَيْءٍ اَنْ تَغْفِرَ لِيْ ذُنُوْبِيْ.

**ಅಲ್ಲಾಹುಮ್ಮ ಲಕ ಸುಮ್ತು ವ ಅಲಾ ರಿಝ್‌ಖಿಕ ಅಫ್ತರ್‌ತು ಧಹಬ ಝ್ಝಮಉ ವಬ್ತಲ್ಲತಿಲ್ ಉರೂಖು ವ ಸಬತಲ್ ಅಜ್‌ರು ಇನ್‌ಶಾ ಅಲ್ಲಾಹು ಅಲ್ಲಾಹುಮ್ಮ ಇನ್ನೀ ಅಸ್‌ಅಲುಕ ಬಿರಹ್ಮತಿಕಲ್ಲತೀ ವಸಿಅತ್ ಕುಲ್ಲ ಶೈಯಿನ್ ಅನ್ ತಗ್‌ಫಿರ ಲೀ ಧ್ಹುನೂಬಿ.**

ಅರ್ಥ: 'ಓ ಅಲ್ಲಾಹ್, ನಾನು ನಿನಗಾಗಿ ಉಪವಾಸ ಮಾಡಿದೆ. ನಾನು ನಿನ್ನ ಆಹಾರದಿಂದಲೇ ನನ್ನ ಉಪವಾಸ ಮುಕ್ತಾಯಗೊಳಿಸಿದೆ. ದಾಹ ಶಮನವಾಯಿತು. ರಕ್ತನಾಳಗಳು ಚೇತನಗೊಂಡುವು. ನೀನು ಇಚ್ಛಿಸುವುದಾದರೆ ತಕ್ಕುದಾದ ಪ್ರತಿಫಲವೂ ಸಿಗುವುದು. ಓ ಅಲ್ಲಾಹ್, ಎಲ್ಲ ವಸ್ತುಗಳನ್ನು ಆವರಿಸಿರುವ ನಿನ್ನ ಕಾರುಣ್ಯದ ಮೂಲಕ ನೀನು ನನ್ನ ಪಾಪಗಳನ್ನು ಕ್ಷಮಿಸಬೇಕೆಂದು ನಾನು ನಿನ್ನನ್ನು ಪ್ರಾರ್ಥಿಸುತ್ತೇನೆ."

ಉಪವಾಸವನ್ನು ಮುಕ್ತಾಯಗೊಳಿಸುವುದನ್ನು ಇಫ್ತಾರ್ ಎಂದು ಹೇಳುತ್ತಾರೆ. ಖರ್ಜೂರ ತಿಂದು ಉಪವಾಸವನ್ನು ಬಿಡುವುದು ಉತ್ತಮವಾಗಿದೆ. ಹಝ್ರತ್ ಮುಹಮ್ಮದ್ ಪೈಗಂಬರ್(ಸ) ಹೀಗೆಯೇ ಮಾಡುತ್ತಿದ್ದರು. ಖರ್ಜೂರ ಸಿಗದಿದ್ದರೆ ನೀರನ್ನು ಕುಡಿದು ಉಪವಾಸವನ್ನು ಕೊನೆಗೊಳಿಸಬಹುದು.

ಉಪವಾಸ ಮಾಡುವವನು ಧಿಕ್ರೆ ಇಲಾಹೀ ( ಅಲ್ಲಾಹನ ಸ್ಮರಣೆ) ಮಾಡುತ್ತಾ ಇರಬೇಕಾದುದು ಕಡ್ಡಾಯವಾಗಿದೆ. ಅವನು ಸುಳ್ಳು ಹೇಳಬಾರದು, ಪರರನ್ನು ದೂಷಿಸಬಾರದು, ಅಸೂಯೆಪಡಬಾರದು, ದ್ವೇಷಿಸಬಾರದು, ಜಗಳ ಮಾಡಬಾರದು. ಎಲ್ಲ ವಿಧದ ನಿಷಿದ್ಧ ಕೆಲಸಗಳನ್ನು ಮಾಡಬಾರದು. ಯಾರು ಉಪವಾಸ ಆಚರಿಸಿ ಈ ಎಲ್ಲ ಕೆಲಸಗಳನ್ನು ಮಾಡುತ್ತಾನೋ ಅವನು ಯಥಾರ್ಥವಾಗಿ ಉಪವಾಸ ಅನುಷ್ಠಿಸುವವನಾಗಿರುವುದಿಲ್ಲ. ಅವನು ಕೇವಲ ಹಸಿವೆ ಮತ್ತು ಬಾಯರಿಕೆಯಿಂದ ನಿಷ್ಪ್ರಯೋಜಕವಾಗಿ ಬಳಲುತ್ತಾನೆ. ಅಂತಹ ವ್ಯಕ್ತಿಯ ಉಪವಾಸ ಅಲ್ಲಾಹನ ಸನ್ನಿಧಿಯಲ್ಲಿ ಅಂಗೀಕಾರ ಪಡೆಯುವುದಿಲ್ಲ. ಅವನು ಯಾವ ಉತ್ತಮ ಪ್ರತಿಫಲಕ್ಕೂ ಅರ್ಹನಾಗುವುದಿಲ್ಲ. ಅವನೊಬ್ಬ ಪಾಪಿಯಾಗುತ್ತಾನೆ.

## ಉಪವಾಸವನ್ನು ಮಧ್ಯದಲ್ಲಿ ಬಿಡುವುದಕ್ಕೆ ಶಿಕ್ಷೆ

ಉಪವಾಸ ಮಾಡಿ ಧಾರ್ಮಿಕ ನಿಯಮಗಳಿಗೆ ಅನುಸಾರವಾದ ಅಂಗೀಕಾರವಿಲ್ಲದೆ ಮಧ್ಯದಲ್ಲಿ ಬಿಟ್ಟುಬಿಡುವುದು ಪಾಪಕೃತ್ಯವಾಗಿದೆ. ಅಲ್ಲಾಹನ ಕೋಪಕ್ಕೆ ಅಂತಹ ವ್ಯಕ್ತಿ ಗುರಿಯಾಗುತ್ತಾನೆ. ಉಪವಾಸ ಮಾಡಿ ಅದನ್ನು ಪೂರ್ಣಗೊಳಿಸದೆ ಮಧ್ಯದಲ್ಲಿ ಬಿಡುವವನು ಅದಕ್ಕೆ ಪರಿಹಾರ ಕೊಡಬೇಕು. ಅದಕ್ಕಿರುವ ಪರಿಹಾರ ಒಬ್ಬ ಗುಲಾಮನನ್ನು ವಿಮೋಚನೆ ಮಾಡುವುದಾಗಿದೆ. ಗುಲಾಮನನ್ನು ವಿಮೋಚಿಸುವ ಶಕ್ತಿಯಿಲ್ಲದಿದ್ದರೆ ಅಥವಾ ವಿಮೋಚಿಸಲು ಗುಲಾಮನು ಸಿಗಲಿಲ್ಲವಾದರೆ ಅಂತಹ ವ್ಯಕ್ತಿ ನಿರಂತರವಾಗಿ ಅರುವತ್ತು ದಿನಗಳ ಉಪವಾಸ ಮಾಡಬೇಕು. ಮಧ್ಯದಲ್ಲಿ ಒಂದು ಉಪವಾಸ ಬಿಟ್ಟು ಹೋದರೆ ಪುನಃ ಅರುವತ್ತು ದಿನಗಳ ಉಪವಾಸ ನಿರಂತರವಾಗಿ ಅನುಷ್ಠಿಸಬೇಕು. ಉಪವಾಸ ಅನುಷ್ಠಿಸುವ ಶಕ್ತಿಯಿಲ್ಲವಾದರೆ ಅರುವತ್ತು ಬಡಜನರಿಗೆ ಆಹಾರ ನೀಡಬೇಕು.

## ಉಪವಾಸ ಭಂಗವಾಗುವ ಕೃತ್ಯಗಳು

ಉದ್ದೇಶಪೂರ್ವಕವಾಗಿ ತಿನ್ನುವುದರಿಂದ, ಕುಡಿಯುವುದರಿಂದ, ಲೈಂಗಿಕ ಸಂಪರ್ಕ ಮಾಡುವುದರಿಂದ, ಮುಟ್ಟು ಅಥವಾ ಹೆರಿಗೆಯ ರಕ್ತ ಸ್ರಾವದಿಂದ ಉಪವಾಸಕ್ಕೆ ಭಂಗವುಂಟಾಗುತ್ತದೆ. ಮರೆತು ತಿಂದರೆ, ಕುಡಿದರೆ, ವಾಂತಿಯಾದರೆ, ಸ್ವಪ್ನಸ್ಖಲನವಾದರೆ ಉಪವಾಸ ಭಂಗವಾಗಲಾರದು.

ಉಪವಾಸ ಅನುಷ್ಠಿಸಿರುವಾಗ ಹಲ್ಲು ಶುಚಿಮಾಡುವುದು, ಮೀಯುವುದು, ಶರೀರಕ್ಕೆ ಎಣ್ಣೆ ಸವರುವುದು, ಒದ್ದೆ ಬಟ್ಟೆ ಶರೀರದ ಮೇಲೆ ಹಾಕಿಕೊಳ್ಳುವುದು, ಕಣ್ಣಿಗೆ ಸುರ್ಮ ಹಾಕುವುದು, ಕನ್ನಡಿ ನೋಡುವುದು, ಸುವಾಸನೆಯ ದ್ರವ್ಯ ಮೂಸುವುದು ಅಥವಾ ಬಟ್ಟೆಗೆ ತಗಲಿಸುವುದು ನಿಷಿದ್ಧವಲ್ಲ. ಈ ಕೆಲಸಗಳಿಂದ ಉಪವಾಸ ಭಂಗವಾಗಲಾರದು.

## ವಿವಿಧ ರೀತಿಯ ಉಪವಾಸಗಳು

**ಫರ್ಝ್ ಉಪವಾಸ:** ರಮಝಾನ್ ತಿಂಗಳಲ್ಲಿ ಅನುಷ್ಠಿಸಲಾಗುವ ಉಪವಾಸ ಪ್ರತಿಯೊಬ್ಬ ಮುಸ್ಲಿಮನಿಗೆ ಫರ್ಝ್ ಆಗಿದೆ. ಎಂದರೆ ಕಡ್ಡಾಯವಾಗಿ ಅನುಷ್ಠಿಸಬೇಕಾದುದು.

**ನಫ್‌ಲ್ ಉಪವಾಸ:** ನಫ್‌ಲ್ ಉಪವಾಸ ಐಚ್ಛಿಕ ಉಪವಾಸವಾಗಿದೆ. ಈ ಉಪವಾಸ ಅನುಷ್ಠಿಸಿದರೆ ಪುಣ್ಯ ಸಿಗುವುದು. ಅನುಷ್ಠಿಸದಿದ್ದರೆ ಪಾಪದೋಷವಿರಲಾರದು. ಹಝ್ರತ್ ಮುಹಮ್ಮದ್ ರಸೂಲುಲ್ಲಾಹ್ ಸಲ್ಲಲ್ಲಾಹು ಅಲೈಹಿ ವ ಸಲ್ಲಮ್ ನಫ್‌ಲ್ ಉಪವಾಸ ಅನುಷ್ಠಿಸುತ್ತಿದ್ದರು. ಅವರು ಅನುಷ್ಠಿಸುತ್ತಿದ್ದ ನಫ್‌ಲ್ ಉಪವಾಸ ಈ ಕೆಳಗಿನವುಗಳಾಗಿವೆ:

1. ಶವ್ವಾಲ್ ತಿಂಗಳ ಪ್ರಾರಂಭದ ಆರು ದಿನ.

2. ಪ್ರತಿ ತಿಂಗಳು 13, 14, 15 ದಿನಾಂಕಗಳಲ್ಲಿ ಮೂರು ದಿನ.

3. ಅರಫದ ದಿನ ಎಂದರೆ ಝುಲ್‌ಹಜ್ಜ್ ತಿಂಗಳ 9ನೇ ದಿನಾಂಕ.

4. ಮುಹರ್ರಮ್ ತಿಂಗಳ 9ನೇ ಮತ್ತು 10ನೇ ದಿನಾಂಕ.

5. ಕೆಲವು ಸಾರಿ ಒಂದು ದಿನ ಉಪವಾಸ ಮಾಡಿ ಮರುದಿನ ಉಪವಾಸ ಅನುಷ್ಠಿಸುತ್ತಿರಲಿಲ್ಲ. ಹೀಗೆಯೇ ಹಲವಾರು ದಿನ ಉಪವಾಸ ಮಾಡುತ್ತಾ ಇದ್ದರು.

ವರ್ಷವಿಡೀ ಎಡೆಬಿಡದೆ ಪ್ರತಿದಿನ ಉಪವಾಸ ಮಾಡುವುದು, ಈದುಲ್ ಫಿತರ್ ಮತ್ತು ಈದುಲ್ ಅಝ್‌ಹಾ ದಿನ ಉಪವಾಸ ಮಾಡುವುದು ನಿಷಿದ್ಧವಾಗಿದೆ. ನಫಲ್ ಉಪವಾಸ ಪೂರ್ಣಗೊಳಿಸದೆ ಮಧ್ಯದಲ್ಲಿ ಅದಕ್ಕೆ ಭಂಗವನ್ನುಂಟು ಮಾಡಿದರೆ ಅದಕ್ಕೆ ಪರಿಹಾರ ಕೊಡಬೇಕಾಗಿಲ್ಲ. ಇಷ್ಟವಿದ್ದರೆ ಕೊಡಬಹುದು.

**ಕಫ್ಫಾರ ಉಪವಾಸ:** ಯಾವುದಾದರೂ ಒಂದು ಆಜ್ಞೆ ಉಲ್ಲಂಘಿಸಿದುದಕ್ಕಾಗಿ ಅಥವಾ ಫರ್ಝ್ (ಕಡ್ಡಾಯ) ಕೃತ್ಯ ನೆರವೇರಿಸದಿದ್ದುದಕ್ಕಾಗಿ ಪರಿಹಾರವಾಗಿ ನಿಗದಿಪಡಿಸಲಾದ ಉಪವಾಸ ಈ ಮುಂದಿನವುಗಳಾಗಿವೆ:

1. ಯಾರಾದರೂ ಆಣೆ ಹಾಕಿ ಒಂದು ಮಾತನ್ನು ಹೇಳಿ ಅನಂತರ ಅದನ್ನು ಉಲ್ಲಂಘಿಸಿ ವರ್ತಿಸಿದರೆ ಅಂತಹ ವ್ಯಕ್ತಿ ಹತ್ತು ಬಡಜನರಿಗೆ ಊಟ ಕೊಡಬೇಕು. ಅಥವಾ ಅವರಿಗೆ ವಸ್ತ್ರದಾನ ಮಾಡಬೇಕು. ಅಥವಾ ಗುಲಾಮನನ್ನು ವಿಮೋಚಿಸಬೇಕು. ಹೀಗೆ ಮಾಡಲು ಶಕ್ತಿ ಇಲ್ಲದಿದ್ದರೆ ಮೂರು ದಿನ ಉಪವಾಸ ಮಾಡಬೇಕು.

2. ಯಾರಾದರೂ ಪೂರ್ಣಪ್ರಜ್ಞೆಯಿಂದ ರಮಝಾನ್ ತಿಂಗಳ ಉಪವಾಸವನ್ನು ಮಧ್ಯದಲ್ಲಿ ಬಿಟ್ಟರೆ ಅಥವಾ ಯಾವುದಾದರೂ ಸತ್ಯ ವಿಶ್ವಾಸಿಯನ್ನು ತಪ್ಪುಗ್ರಹಿಕೆಯಿಂದ ಕೊಂದರೆ ಮತ್ತು ಕೊಲ್ಲಲ್ಪಟ್ಟವನ ಸಂಬಂಧಿಕರಿಗೆ ಪರಿಹಾರ ಕೊಡಲು ಶಕ್ತಿಯಿಲ್ಲದವನಾಗಿದ್ದರೆ ಅಥವಾ ತನ್ನ ಪತ್ನಿಯೊಂದಿಗೆ "ನೀನು ನನ್ನ ತಾಯಿ ಅಥವಾ ಸಹೋದರಿಯ ಹಾಗೆ" ಎಂದು ಹೇಳಿದರೆ (ಇದನ್ನು ಝಿಹಾರ್ ಎಂದು ಹೇಳುತ್ತಾರೆ) ಅವನು ಅದಕ್ಕೆ ಪರಿಹಾರವಾಗಿ, ಕಡ್ಡಾಯವಾಗಿ ಒಬ್ಬ ಗುಲಾಮನನ್ನು ವಿಮೋಚನೆಗೊಳಿಸಬೇಕು, ಅಥವಾ ಅರುವತ್ತು ಬಡವರಿಗೆ ಆಹಾರ ನೀಡಬೇಕು. ಹೀಗೆ ಮಾಡಲು ಅವನಿಗೆ ಶಕ್ತಿಯಿಲ್ಲವಾದರೆ ಅವನು ಎರಡು ತಿಂಗಳು ನಿರಂತರವಾಗಿ ಉಪವಾಸ ಅನುಷ್ಠಿಸಬೇಕು. ಯಾವುದಾದರೂ ಒಂದು ದಿನದ ಉಪವಾಸ ಮಧ್ಯದಲ್ಲಿ ಬಿಟ್ಟರೆ ಪುನಃ ಅರುವತ್ತು ದಿವಸಗಳ ಉಪವಾಸ ಮಾಡಬೇಕು.

ಯಾರಾದರೂ ಹಜ್ಜ್ ಮಾಡಿದ ನಂತರ ಮೃಗವನ್ನು ಬಲಿದಾನವಾಗಿ ಅರ್ಪಿಸಲು ಅಸಮರ್ಥನಾದರೆ ಅಂತಹ ವ್ಯಕ್ತಿ ಹತ್ತು ದಿವಸ ಉಪವಾಸ ಮಾಡಬೇಕು - ಮೂರು ದಿನ ಪವಿತ್ರ ಮಕ್ಕ ನಗರದಲ್ಲಿ ಮತ್ತು ಏಳು ದಿನ ಮನೆಗೆ ತಲುಪಿದ ನಂತರ.

ಯಾರಾದರೂ ಇಹ್‌ರಾಮ್ (ಹಜ್ಜ್ ಮಾಡುವವರು ಧರಿಸುವ ಪೋಷಾಕು) ಧರಿಸಿದ ನಂತರ ಯಾವುದಾದರೂ ತೊಂದರೆಯ ಕಾರಣದಿಂದ ಇಹ್‌ರಾಮ್ ಧರಿಸಿರುವ ಕಾಲದಲ್ಲಿಯೇ ತಲೆಯನ್ನು ಬೋಳಿಸಬೇಕಾಗಿ ಬಂದರೆ ಅದು ನಿಷಿದ್ಧವಾದ ಕೆಲಸವಾದುದರಿಂದ ಅದಕ್ಕೆ ಪರಿಹಾರವಾಗಿ ಮೂರು ದಿನ ಉಪವಾಸ ಅನುಷ್ಠಿಸಬೇಕು.

## ತರಾವೀಹ್ ನಮಾಝ್

ರಮಝಾನ್ ತಿಂಗಳಲ್ಲಿ ಖಿಯಾಮುಲ್ಲೈಲ್ ಎಂದರೆ ರಾತ್ರಿ ಹೊತ್ತು ನಿದ್ರೆಯಿಂದೆಚ್ಚೆತ್ತು ಪ್ರಾರ್ಥಿಸುವುದು ಬಹಳ ಮುಖ್ಯ ಸಂಗತಿಯಾಗಿದೆ. ಇದಕ್ಕೆ ಸಂಬಂಧಿಸಿಯೇ ರಮಝಾನ್ ತಿಂಗಳಲ್ಲಿ ತರಾವೀಹ್ ನಮಾಝ್ ಅನುಷ್ಠಿಸಲಾಗುತ್ತಿದೆ. ತರಾವೀಹ್ ನಮಾಝ್ ಯಥಾರ್ಥವಾಗಿ ತಹಜ್ಜುದ್ ನಮಾಝ್ ಆಗಿದೆ. ಅದನ್ನು ರಾತ್ರಿಯ ಅಂತಿಮ ಯಾಮದ ಬದಲಾಗಿ ರಮಝಾನ್ ತಿಂಗಳಲ್ಲಿ ಇಶಾ ನಮಾಝ್ ನಂತರ ಅನುಷ್ಠಿಸಲಾಗುತ್ತದೆ. ಈ ನಮಾಝ್ ಮಾಡುವಾಗ ಪ್ರತಿ ಎರಡು ರಕ್‌ಅತ್ ನಮಾಝ್ ಮಾಡಿದ ನಂತರ ಸ್ವಲ್ಪಕಾಲ ವಿಶ್ರಾಂತಿ ಪಡೆಯುವ ಕಾರಣದಿಂದ ಈ ನಮಾಝ್‌ನ್ನು ತರಾವೀಹ್ ಎಂದು ಕರೆಯುತ್ತಾರೆ. ತರಾವೀಹ್ ನಮಾಝ್‌ಗೆ ಎಂಟು ರಕ್‌ಅತ್‌ಗಳಿವೆ. ಎರಡೆರಡು ರಕ್‌ಅತ್‌ಗಳ ಹಾಗೆ ಅನುಷ್ಠಿಸಲಾಗುತ್ತದೆ. ಸಾಮೂಹಿಕವಾಗಿ ಎಂದರೆ ಜಮಾಅತ್‌ನೊಂದಿಗೆ ಈ ನಮಾಝ್ ಅನುಷ್ಠಿಸುವುದು ಉತ್ತಮವಾಗಿದೆ. ತರಾವೀಹ್ ನಮಾಝ್ ನಂತರ ವಿತ್ರ್ ನಮಾಝ್ ಸಹ ಸಾಮೂಹಿಕವಾಗಿ ಅನುಷ್ಠಿಸಲಾಗುತ್ತದೆ. ರಮಝಾನ್ ತಿಂಗಳಲ್ಲಿ ಮಾತ್ರ ವಿತ್ರ್ ನಮಾಝ್ ಸಾಮೂಹಿಕವಾಗಿ ಅನುಷ್ಠಿಸಲಾಗುತ್ತದೆ. ವಿತ್ರ್ ನಮಾಝ್ ಮೂರು ರಕ್‌ಅತ್‌ಗಳಲ್ಲಿ ಅನುಷ್ಠಿಸಲಾಗುತ್ತದೆ. ತರಾವೀಹ್ ನಮಾಝ್ ಇಶಾ ನಮಾಝ್ ನಂತರ ಅನುಷ್ಠಿಸುವ ಹಾಗೆ ರಾತ್ರಿಯ ಅಂತಿಮ ಭಾಗದಲ್ಲಿಯೂ ಅನುಷ್ಠಿಸಬಹುದಾಗಿದೆ. ತರಾವೀಹ್ ನಮಾಝ್ ರಮಝಾನ್ ತಿಂಗಳಲ್ಲಿ ಮಾತ್ರ ಅನುಷ್ಠಿಸಲಾಗುತ್ತದೆ. ಆ ನಮಾಝ್‌ನಲ್ಲಿ ಪವಿತ್ರ ಖುರ್‌ಆನಿನ ವಚನಗಳನ್ನು ಹೆಚ್ಚು ಹೆಚ್ಚಾಗಿ ಪಾರಾಯಣ ಮಾಡಲಾಗುತ್ತದೆ.

## ಉಪವಾಸದ ಕುರಿತು ಕೆಲವು ವಿವರಣೆ

1. ರಮಝಾನ್ ತಿಂಗಳ ಚಂದ್ರ ದರ್ಶನದ ಕಾಲದಲ್ಲಿ ದಿಂಗತವು ಮೋಡದಿಂದ ವಿರಹಿತವಾಗಿ ಶುಭ್ರವಾಗಿದ್ದರೆ ಚಂದ್ರದರ್ಶನದ ಕುರಿತು ಕನಿಷ್ಠ ಇಬ್ಬರು ಸಾಕ್ಷಿ ಹೇಳಬೇಕು. ದಿಗಂತವು ಮೋಡ ಮುಸುಕಿದ್ದು ಚಂದ್ರದರ್ಶನವಾಗದಿದ್ದರೆ ಶಅಬಾನ್ ತಿಂಗಳ ಮೂವತ್ತು ದಿನಗಳನ್ನು ಪೂರ್ಣ ಮಾಡಬೇಕು. ಇದೇ ರೀತಿ ಈದ್ ದಿನದ ಚಂದ್ರದರ್ಶನ ಮಾಡುವಾಗ ದಿಗಂತವು ಮೋಡಗಳಿಂದ ವಿರಹಿತವಾಗಿ ಶುಭ್ರವಾಗಿದ್ದರೆ ಚಂದ್ರದರ್ಶನದ ಕುರಿತು ಕನಿಷ್ಠ ಇಬ್ಬರು ಸಾಕ್ಷಿ ಹೇಳಬೇಕು. ಮೋಡ ಮುಸುಕಿದ್ದು ಚಂದ್ರದರ್ಶನವಾಗದಿದ್ದರೆ ರಮಝಾನ್ ಉಪವಾಸ ಮೂವತ್ತು ದಿನ ಪೂರ್ಣಗೊಳಿಸಬೇಕು.

2. ಮುಟ್ಟು ಸ್ರಾವವಾಗುತ್ತಿರುವ ಸ್ತ್ರೀ ಉಪವಾಸ ಮಾಡಬಾರದು. ರಮಝಾನ್ ತಿಂಗಳ ನಂತರ, ಬಿಟ್ಟು ಹೋದ ಉಪವಾಸ ಅನುಷ್ಠಿಸಬೇಕು.

3. ರಮಝಾನ್ ತಿಂಗಳಲ್ಲಿ ಯಾರಿಗಾದರೂ ಉಪವಾಸ ಮಾಡಲು ಸಾಧ್ಯವಾಗದಿದ್ದರೆ ಮುಂದಿನ ರಮಝಾನ್ ತಿಂಗಳು ಬರುವುದರೊಳಗೆ, ಬಿಟ್ಟು ಹೋದ ಉಪವಾಸವನ್ನು ಸಂದರ್ಭಕ್ಕೆ ಅನುಸಾರವಾಗಿ ಒಟ್ಟಿಗೆ ಅಥವಾ ಒಂದೊಂದಾಗಿ ಅನುಷ್ಠಿಸಬಹುದಾಗಿದೆ.

4. ಗರ್ಭಿಣಿ ಮತ್ತು ಹಾಲೂಡಿಸುತ್ತಿರುವ ಮಹಿಳೆಗೆ ರಮಝಾನ್ ತಿಂಗಳಲ್ಲಿ ಉಪವಾಸ ಮಾಡಲು ಸಾಧ್ಯವಾಗದಿದ್ದರೆ ಬೇರೆ ಸಂದರ್ಭಗಳಲ್ಲಿ ಉಪವಾಸ ಮಾಡಬಹುದು. ಬೇರೆ ಸಮಯದಲ್ಲಿ ಸಹ ಉಪವಾಸ ಮಾಡಲು ಸಾಧ್ಯವಾಗದಿದ್ದರೆ ಅದಕ್ಕೆ ಫಿದ್‌ಯ (ಪರಿಹಾರ) ಕೊಡಬೇಕು. ಒಂದು ಉಪವಾಸಕ್ಕೆ ಬದಲಾಗಿ ಒಬ್ಬ ಬಡವನಿಗೆ ಆಹಾರ ನೀಡಬೇಕು. ಇದೇ ರೀತಿ ಸ್ಥಿರವಾಗಿ ರೋಗಿಯಾಗಿರುವ ವ್ಯಕ್ತಿ ಮತ್ತು ಉಪವಾಸ ಮಾಡಲು ಅಸಮರ್ಥನಾದ ವೃದ್ಧ ವ್ಯಕ್ತಿ ಒಂದು ದಿನದ ಉಪವಾಸಕ್ಕೆ ಒಬ್ಬ ಬಡವನಿಗೆ ಆಹಾರ ನೀಡುವ ಮೂಲಕ ತನ್ನ ಉಪವಾಸಗಳಿಗೆ ಪರಿಹಾರ ಕೊಡಬಹುದು.

5. ಪ್ರಯಾಣದ ಅಂದಾಜು ಸ್ವತಃ ಹೃದಯದೊಂದಿಗೆ ಅನ್ವೇಷಿಸಿ ನಿರ್ಧರಿಸಬೇಕು. ಯಾವುದು ಪ್ರಯಾಣವೆಂದು ಹೃದಯಕ್ಕೆ ತೋಚುತ್ತದೆಯೋ ಅದೇ ಪ್ರಯಾಣ (ಸಫರ್) ಆಗಿದೆ. ದೂರ ಕಡಿಮೆಯಾಗಿದ್ದರೂ ಸಹ ಹೀಗೆಯೇ ಮಾಡಬೇಕು. ರೈಲು ಬಂಡಿ,

ಮೋಟಾರು ವಾಹನ ಮತ್ತು ವಿಮಾನ ಮೊದಲಾದವುಗಳಲ್ಲಿ ಮಾಡುವ ಪ್ರಯಾಣ ಸಹ ಪ್ರಯಾಣವೇ ಆಗಿದೆ.

6. ಸೂರ್ಯನು ಅಸ್ತಮಿಸಿರುವನೆಂದು ತಪ್ಪಾಗಿ ಗ್ರಹಿಸಿ ಯಾರಾದರೂ ಉಪವಾಸ ಮುಕ್ತಾಯಗೊಳಿಸಿದರೆ ಮತ್ತು ಯಥಾರ್ಥವಾಗಿ ಸೂರ್ಯನು ಆ ಸಮಯದಲ್ಲಿ ಅಸ್ತಮಿಸಿಲ್ಲವಾದರೆ ಅವನು ಇನ್ನೊಂದು ದಿನ ಅದಕ್ಕೆ ಬದಲಿಯಾಗಿ ಉಪವಾಸ ಮಾಡಬೇಕು. ಅವನು ಉಪವಾಸ ಮಧ್ಯದಲ್ಲಿ ಬಿಟ್ಟುದಕ್ಕೆ ಪರಿಹಾರ ನೀಡಬೇಕಾಗಿಲ್ಲ.

7. ನಸುಕಿನ ಹೊತ್ತು ಉಪವಾಸ ಪ್ರಾರಂಭಿಸುವ ಮೊದಲು ಮಾಡುವ ಊಟ ಎಂದರೆ ಸಹ್‌ರಿಯನ್ನು ಅದರ ಸಮಯ ದಾಟಿಹೋದ ನಂತರ ಇನ್ನೂ ಸಮಯವಿದೆ ಎಂಬ ತಪ್ಪುಗ್ರಹಿಕೆಯಿಂದ ಉಂಡರೆ ಅವನು ಆ ದಿನದ ಉಪವಾಸಕ್ಕೆ ಪ್ರತಿಯಾಗಿ ಬೇರೊಂದು ದಿನ ಉಪವಾಸ ಮಾಡಬೇಕು. ಅವನು ಅದಕ್ಕೆ ಪರಿಹಾರ ನೀಡಬೇಕಾಗಿಲ್ಲ.

8. ಯಾರು ಯಾವಾಗಲೂ ಪ್ರಯಾಣ ಮಾಡುತ್ತಾ ಇರುವ ಕೆಲಸ ಮಾಡುತ್ತಾನೋ ಅವನು ಪ್ರಯಾಣಿಕ (ಮುಸಾಫಿರ್) ನಿಗೆ ಲಭಿಸಿರುವ ಸವಲತ್ತಿಗೆ ಅರ್ಹನಾಗುವುದಿಲ್ಲ. ಅವನು ರಮಝಾನ್ ತಿಂಗಳಲ್ಲಿ ಪ್ರಯಾಣ ಕಾಲದಲ್ಲಿಯೇ ಉಪವಾಸ ಮಾಡಬೇಕು.

9. ಯಾರಾದರೂ ಪ್ರಯಾಣಿಕ ಅಥವಾ ರೋಗಿ ಉಪವಾಸ ಮಾಡಿದರೆ ಅವನು ಉಪವಾಸ ಮಾಡಿದವನ ಹಾಗೆ ಗಣಿಸಲ್ಪಡಲಾರನು. ಪವಿತ್ರ ಖುರ್‌ಆನ್‌ನಲ್ಲಿ "ಇದ್ದತುನ್ ಮಿನ್ ಅಯ್ಯಾಮಿನ್ ಉಖ್‌ರ" (ಬೇರೆ ದಿನಗಳಲ್ಲಿ ಎಣಿಕೆಯನ್ನು ಪೂರ್ಣಗೊಳಿಸಬೇಕು) ಎಂದು ಆಜ್ಞೆ ಲಭಿಸಿರುವ ಪ್ರಕಾರ ಬೇರೆ ದಿನಗಳಲ್ಲಿ ಉಪವಾಸ ಮಾಡಬೇಕು.

## ಇಅ್‌ತಿಕಾಫ್
## (ಮಸ್‌ಜಿದ್‌ನಲ್ಲಿ ವಾಸಿಸಿ ಧ್ಯಾನಾರಾಧನೆ ಮಾಡುವುದು)

ಪವಿತ್ರ ರಮಝಾನ್ ತಿಂಗಳ ಕೊನೆಯ ಭಾಗದ ಹತ್ತು ದಿನಗಳಲ್ಲಿ ಉಪವಾಸ ಅನುಷ್ಠಿಸಿ ಮಸ್‌ಜಿದ್‌ನಲ್ಲಿ ಕುಳಿತು ಅಲ್ಲಾಹನ ಧ್ಯಾನ ಮಾಡುವುದು ಮತ್ತು ನಮಾಝ್ ಮಾಡುವುದು ಹಝ್ರತ್ ಮುಹಮ್ಮದ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ನಡೆವಳಿಕೆ (ಸುನ್ನತ್) ಆಗಿತ್ತು. ಈ ಸಮಯದಲ್ಲಿ ಅಲ್ಲಾಹನಿಂದ ಕ್ಷಮೆ ಯಾಚನೆ (ಇಸ್ತಿಗ್‌ಫಾರ್) ಮತ್ತು ಅಲ್ಲಾಹನ ಧ್ಯಾನ ಹೆಚ್ಚು ಹೆಚ್ಚಾಗಿ ಮಾಡಲಾಗುತ್ತದೆ. ಈ ಕಾಲಾವಧಿಯಲ್ಲಿ ಹಗಲು ರಾತ್ರಿ ಇಸ್ತಿಗ್‌ಫಾರ್ (ಕ್ಷಮೆಯಾಚನೆ), ಧಿಕ್ರೆ ಇಲಾಹಿ (ಅಲ್ಲಾಹನ ಧ್ಯಾನ), ಪವಿತ್ರ ಖುರ್‌ಆನಿನ ತಿಲಾವತ್ (ಪಾರಾಯಣ) ಮತ್ತು ಪ್ರಾರ್ಥನೆಯಲ್ಲಿ ಮುಅ್‌ತಕಿಫ್(ಇಅ್‌ತಿಕಾಫ್ ಅನುಷ್ಠಿಸುವವನು) ಮಗ್ನನಾಗಿರಬೇಕು. ಈ ಸಮಯದಲ್ಲಿ ಒಳ್ಳೆಯ ಮತ್ತು ಅತ್ಯಾವಶ್ಯಕ ಮಾತುಗಳನ್ನು ಮಾತ್ರ ಹೇಳಬೇಕು. ಮುಅ್‌ತಕಿಫ್ ಮಲಮೂತ್ರ ವಿಸರ್ಜನೆಗಳಿಗಾಗಿ ಮತ್ತು ಅವನು ಕುಳಿತಿರುವ ಮಸ್‌ಜಿದ್‌ನಲ್ಲಿ ಜುಮುಅ ನಮಾಝ್ ನಡೆಯುತ್ತಾ ಇಲ್ಲವಾದರೆ ಜುಮುಅ ನಮಾಝ್‌ಗಾಗಿ ಮಾತ್ರ ಹೊರಗೆ ಹೋಗಬಹುದು. ಆ ಆವಶ್ಯಕತೆಗಳಿಗಾಗಿ ಹೊರಗೆ ಹೋಗುವಾಗ ಯಾರಾದರೂ ರೋಗಿಯನ್ನು ಕಂಡರೆ ಅವನ ರೋಗದ ಬಗ್ಗೆ ನಡೆಯುತ್ತಾ ಇರುವಾಗಲೇ ಅನ್ವೇಷಿಸಬಹುದಾಗಿದೆ.

ಇಅ್‌ತಿಕಾಫ್ ಮಾಡುವವನು ಪರದೆಯನ್ನು ಕಟ್ಟಿ ಅದರೊಳಗೆ ಕುಳಿತುಕೊಳ್ಳುವುದು ಉತ್ತಮವಾಗಿದೆ. ರಮಝಾನ್ ತಿಂಗಳ 20ನೇ ದಿನಾಂಕ ಸುಬ್‌ಹ್ (ಫಜ್‌ರ್) ನಮಾಝ್ ನಂತರ ಮಸ್‌ಜಿದ್‌ನಲ್ಲಿ ನಿಗದಿತ ಸ್ಥಳದಲ್ಲಿ ಇಅ್‌ಕಾಫ್‌ಗಾಗಿ ಕುಳಿತುಕೊಳ್ಳಬೇಕು. ಐದು ಹೊತ್ತಿನ ನಮಾಝ್ ಸಾಮೂಹಿಕವಾಗಿ ಜಾರಿಯಲ್ಲಿರುವ ಮಸ್‌ಜಿದ್‌ನಲ್ಲಿ ಇಅ್‌ತಿಕಾಫ್‌ಗಾಗಿ ಕುಳಿತುಕೊಳ್ಳಬೇಕು. ಜುಮುಅ ನಮಾಝ್ ಸಹ ಆ ಮಸ್‌ಜಿದ್‌ನಲ್ಲಿ ಅನುಷ್ಠಿಸಲ್ಪಡುತ್ತಿದ್ದರೆ ಅದು ಉತ್ತಮವಾಗಿದೆ. ಚಂದ್ರದರ್ಶನವಾಗಿ ಈದ್ ಘೋಷಿಸಲ್ಪಟ್ಟ ನಂತರ ಇಅ್‌ತಿಕಾಫ್ ಕುಳಿತಲ್ಲಿಂದ ಹೊರಗೆ ಹೋಗಬೇಕು.

ಇಅ್‌ತಿಕಾಫ್ ಕುಳಿತಿರುವ ಕಾಲದಲ್ಲಿ ಉದ್ದೇಶಪೂರ್ವಕವಾಗಿ ಅಥವಾ ಮರವೆಯಿಂದ ಹಗಲು ಅಥವಾ ರಾತ್ರಿ ಲೈಂಗಿಕ ಸಂಪರ್ಕ ಮಾಡಿದರೆ ಇಅ್‌ತಿಕಾಫ್‌ಗೆ ಭಂಗವುಂಟಾಗುತ್ತದೆ. ಸರಿಯಾದ ಕಾರಣವಿಲ್ಲದೆ ಮಸ್‌ಜಿದ್‌ನಿಂದ ಹೊರಗೆ ಹೋಗುವುದರಿಂದಲೂ ಇಅ್‌ತಿಕಾಫ್ ಭಂಗವಾಗುತ್ತದೆ.

## ಸದಕತುಲ್ ಫಿತ್‌ರ್

ಇಸ್ಲಾಮ್ ಧರ್ಮವು ಬಡವರಿಗೆ ಮತ್ತು ನಿರ್ಗತಿಕರಿಗಾಗಿ ದಾನಧರ್ಮಗಳನ್ನು ನಿಶ್ಚಯಿಸಿದೆ. ಈ ದಾನ ಧರ್ಮಗಳಲ್ಲಿ ಒಂದು 'ಸದಕತುಲ್ ಫಿತ್‌ರ್' ಆಗಿದೆ. ಪ್ರತಿಯೊಬ್ಬ ಮುಸ್ಲಿಮ್ ಸ್ತ್ರೀ ಮತ್ತು ಪುರುಷ, ಬಡವ, ಐಶ್ವರ್ಯವಂತ, ಚಿಕ್ಕವ, ದೊಡ್ಡವ, ಸ್ವತಂತ್ರ ಮತ್ತು ಗುಲಾಮ ಈ ದಾನವನ್ನು ಕಡ್ಡಾಯವಾಗಿ ನೀಡಬೇಕು. ಇನ್ನೊಬ್ಬನ ರಕ್ಷಕ ಅಥವಾ ಪೋಷಕ ಅದನ್ನು ತನ್ನ ಅಧೀನದಲ್ಲಿರುವವರ ಪರವಾಗಿ ಕೊಡಬೇಕು. ಸದಕತುಲ್ ಫಿತ್‌ರ್ ಈದುಲ್ ಫಿತ್‌ರ್‌ಗೆ (ರಮಝಾನ್ ತಿಂಗಳು ಕೊನೆಗೊಂಡಾಗ ಬರುವ ಹಬ್ಬ) ಮೊದಲು ಕೊಡಬೇಕಾದುದು ಆವಶ್ಯವಾಗಿದೆ. ಎದೆ ಹಾಲು ಕುಡಿಯುವ ಶಿಶುವಿನ ಪರವಾಗಿಯೂ ಸದಕತುಲ್ ಫಿತ್ರ್ ಕೊಡಬೇಕು. ಶಿಶುವು ರಮಝಾನ್ ತಿಂಗಳ ಅಂತಿಮ ದಿನದಂದು ಜನಿಸಿದ್ದರೂ ಈ ದಾನ ಅದರ ಪರವಾಗಿ ಕೊಡಬೇಕು.

ಸದಕತುಲ್ ಫಿತ್‌ರ್ ಒಂದು ಸಾಅ್ ಧಾನ್ಯ ಆಗಿದೆ. ಈಗಿನ ಅಳತೆ ಪ್ರಕಾರ ಅಂದಾಜು ಎರಡೂ ಮುಕ್ಕಾಲು ಕಿಲೋಗ್ರಾಂ ಆಗುತ್ತದೆ. ಆರ್ಥಿಕವಾಗಿ ಅನುಕೂಲತೆ ಇಲ್ಲದವರು ಇದರ ಅರ್ಧಾಂಶ ಸಹ ದಾನವಾಗಿ ಕೊಡಬಹುದು. ಆಯಾ ಪ್ರದೇಶದ ಆಹಾರ ಪ್ರಕಾರ ಗೋದಿ ಅಥವಾ ಅಕ್ಕಿ ದಾನವಾಗಿ ಕೊಡಬಹುದು.


ಯುಗರಶ್ಮಿಗೆ ಚಂದಾದಾರರಾಗಿರಿ

**ವಾರ್ಷಿಕ ಚಂದಾ: ರೂ. 60/-**

**ಅಂಚೆ ಮೂಲಕ: ರೂ. 70/-**

ಸಂಪರ್ಕಿಸಿರಿ: 99004 10789

ಓದಿದ್ದು

# "ಮಕ್ಕಳನ್ನು ಲೈಂಗಿಕವಾಗಿ ಶೋಷಿಸುವವರನ್ನು ಪೋಲೀಸರ ವಶಕ್ಕೆ ನೀಡಿರಿ." ವಿಶ್ವಸಂಸ್ಥೆ ವ್ಯಾಟಿಕನ್‌ಗೆ ನೀಡಿದ ಆದೇಶ.

## ಮಕ್ಕಳನ್ನು ಲೈಂಗಿಕವಾಗಿ ಪೀಡಿಸುವವರ ಬಗ್ಗೆ ಚರ್ಚ್ ಅವಲಂಬಿಸಿದ ಮೌನಧಾರಣೆಯನ್ನು ವಿಶ್ವಸಂಸ್ಥೆಯ ವರದಿ ಖಂಡಿಸಿದೆ

(ಜಿನೀವ ಮತ್ತು ವ್ಯಾಟಿಕನ್‌ನಿಂದ ವರದಿ)

ಮಕ್ಕಳನ್ನು ಲೈಂಗಿಕವಾಗಿ ಪೀಡಿಸುವವರೆಂದು ಗಣಿಸಲಾಗುವ ಅಥವಾ ಸಂಶಯಿಸಲಾಗುವ ಪಾದರಿಗಳನ್ನು ಕೂಡಲೆ ಉಚ್ಚಾಟನೆ ಮಾಡಿ ಪೊಲೀಸರಿಗೆ ಒಪ್ಪಿಸಬೇಕೆಂದು ವಿಶ್ವಸಂಸ್ಥೆ ತನ್ನ ಅಭೂತಪೂರ್ವ ಖಂಡನೆಯ ವರದಿಯಲ್ಲಿ ವ್ಯಾಟಿಕನ್‌ನೊಂದಿಗೆ ಆವಶ್ಯಪಟ್ಟಿದೆ. "ಮೌನವನ್ನು ಅವಲಂಬಿಸಿರಿ" ಎಂದು ಚರ್ಚ್ ಆಡಳಿತಾಧಿಕಾರಿಗಳು ಪಾದರಿಗಳಿಗೆ ಆದೇಶಿಸಿ, ಇಂತಹ ಘಟನೆಗಳ ಬಗ್ಗೆ ಪೊಲೀಸರಿಗೆ ದೂರು ನೀಡುವುದನ್ನು ತಡೆಗಟ್ಟಿರುವರು ಮತ್ತು ಇಂತಹ ಆಕ್ರಮಣಗಾರರರನ್ನು ಒಂದು ಚರ್ಚ್ ವಲಯದಿಂದ ಇನ್ನೊಂದಕ್ಕೆ ವರ್ಗಾಯಿಸಿ ಅಪರಾಧಗಳನ್ನು ಮರೆಮಾಡಲು ಪ್ರಯತ್ನಿಸಿದ್ದಾರೆ ಎಂದು ವರದಿಯಲ್ಲಿ ಹೇಳಲಾಗಿದೆ.

ಸಹಸ್ರಗಟ್ಟಲೆ ಮಕ್ಕಳನ್ನು ಲೈಂಗಿಕವಾಗಿ ಪಾದರಿಗಳು ಪೀಡಿಸಿದ ಬಗ್ಗೆ ದಾಖಲಿಸಲಾದ ಸಾಕ್ಷ್ಯಗಳನ್ನು ಪೋಪರ ಆಡಳಿತೆ ಮಂಡಳಿ ಪೊಲೀಸರಿಗೊಪ್ಪಿಸಬೇಕೆಂದೂ ಚರ್ಚ್ ಸಂಸ್ಥೆಗಳಲ್ಲಿ ಹುಡುಗಿಯರನ್ನು ಬಲಾತ್ಕಾರದಿಂದ ಕೆಲಸ ಮಾಡಿಸಿದಂತಹ ಐಯರ್‌ಲೇಂಡಿನ ಮ್ಯಾಗ್‌ಡಲೀನ ಲಾಂಡ್ರೀಸ್ ಹಗರಣದಂತಹ ಘಟನೆಗಳು ಮರುಕಳಿಸದಂತೆ ತಡೆಗಟ್ಟಬೇಕೆಂದೂ ಮೇಲೆ ಉಲ್ಲೇಖಿಸಿದ ವರದಿ ಅಗತ್ಯಪಡಿಸಿದೆ.

ವ್ಯಾಟಿಕನ್ ಶೀಘ್ರವಾಗಿ ಪ್ರತಿಕ್ರಿಯ ನೀಡಿ, "ರೋಮನ್ ಕ್ಯಾಥೋಲಿಕ್ ಚರ್ಚ್ ಮಕ್ಕಳ ಹಕ್ಕುಗಳನ್ನು ಅನುಮೋದಿಸಿ ಸಂರಕ್ಷಿಸುವ ಬಗ್ಗೆ ಬದ್ಧವಾಗಿದೆ" ಎಂದು ಹೇಳಿ ಮೇಲೆ ಉಲ್ಲೇಖಿಸಿದ ವರದಿಯನ್ನು ತಳಸ್ಪರ್ಶಿಯಾಗಿ ಅಧ್ಯಯನ ಮಾಡುವುದಾಗಿ ವಾಗ್ದಾನ ಮಾಡಿದೆ.

ಅಸಾಮಾನ್ಯವಾಗಿ ಕಟುವಾಗಿರುವ ವರದಿ – ಚರ್ಚ್ ಆಡಳಿತೆಯ ಬಗ್ಗೆ ವಿಸ್ತೃತವಾಗಿ ಚರ್ಚಿಸಿರುವ ವರದಿ – ಕಳೆದ ತಿಂಗಳು ವ್ಯಾಟಿಕನ್ ಚರ್ಚ್ ಆಡಳಿತಾಧಿಕಾರಿಗಳನ್ನು ತೀವ್ರವಾಗಿ ಪ್ರಶ್ನಿಸಿದ ನಂತರ ಸಿದ್ಧಪಡಿಸಿದುದಾಗಿದೆ.

"ಅಪರಾಧಗಳನ್ನು ಎಷ್ಟು ವ್ಯಾಪಕವಾಗಿ ಮಾಡಲಾಗಿದೆ ಎಂಬುದನ್ನು ಪರಿಗಣಿಸದೆ, ಮಕ್ಕಳನ್ನು ಲೈಂಗಿಕವಾಗಿ ಪೀಡಿಸಿದ ಪ್ರಕರಣಗಳ ಬಗ್ಗೆ ಆವಶ್ಯಕ ಕ್ರಮಗಳನ್ನು ಕೈಗೊಂಡು ಮಕ್ಕಳ ಹಕ್ಕುಗಳನ್ನು ರಕ್ಷಿಸದೆ, ಈ ಪ್ರಕರಣಗಳಲ್ಲಿ ಭಾಗಿಗಳಾದವರು ತಮ್ಮ ಅಕ್ರಮಗಳನ್ನು ಶಿಕ್ಷಿಸಲ್ಪಡುವ ಭಯವಿಲ್ಲದೆ ಮುಂದುವರಿಸುವಂತಹ ಧೋರಣೆಗಳನ್ನೂ ಕ್ರಮಗಳನ್ನೂ ಪೋಪರ ಆಡಳಿತ ಮಂಡಳಿ ಕೈಗೊಂಡುದರ ಬಗ್ಗೆ ಮಕ್ಕಳ ಹಕ್ಕುಗಳ ವಿಶ್ವಸಂಸ್ಥೆಯ ಸಮಿತಿ ತೀವ್ರವಾಗಿ ಆತಂಕಭರಿತವಾಗಿದೆ' ಎಂದು ವರದಿಯಲ್ಲಿ ಪ್ರಸ್ತಾಪಿಸಲಾಗಿದೆ.

ವರದಿ ವ್ಯಾಟಿಕನ್ ಆಡಳಿತೆಯೊಂದಿಗೆ ಹೀಗೆ ಆಗ್ರಹಪಡಿಸಿತು: "ಮಕ್ಕಳನ್ನು ಲೈಂಗಿಕವಾಗಿ ಪೀಡಿಸುವವರೆಂದು ಗಣಿಸಲ್ಪಡುವ ಮತ್ತು ಸಂಶಯಿಸಲ್ಪಡುವ ಎಲ್ಲ ಪಾದರಿಗಳನ್ನು ಅವರ ಕೆಲಸಗಳಿಂದ ತೆಗೆದು ಹಾಕಿ ಅವರ ಕೃತ್ಯಗಳ ಬಗ್ಗೆ ತಪಾಸಣೆ ನಡೆಸಲು ಮತ್ತು ಮೊಕದ್ದಮೆ ಹೂಡಲು ಆಯಾ ಪ್ರದೇಶದ ಪೋಲೀಸು ಅಧಿಕಾರಿಗಳಿಗೆ ವಹಿಸಿ ಕೊಡಬೇಕು".

ಮಕ್ಕಳನ್ನು ಲೈಂಗಿಕವಾಗಿ ಪೀಡಿಸುವುದನ್ನು "ಚರ್ಚ್ ನಾಚಿಕೆಪಡುವ ಕೆಲಸ" ಎಂದು ಹೇಳಿ ತನ್ನ ಹಿಂದಿನ ಪೋಪ್ ಬೆನಡಿಕ್ಟ್ ಕೈಗೊಂಡ ಕ್ರಮಗಳನ್ನು ಮುಂದುವರಿಸುವುದಾಗಿ ಪೋಪ್ ಫ್ರಾನ್ಸಿಸ್ ಪ್ರತಿಜ್ಞೆ ಮಾಡಿದ್ದಾರೆ.

ಪೋಪ್ ಫ್ರಾನ್ಸಿಸ್ ಡಿಸೆಂಬರ್ ತಿಂಗಳಲ್ಲಿ ನೇಮಿಸಿದ ಸಮಿತಿ ಲೈಂಗಿಕ ದೌರ್ಜನ್ಯಗಾರರನ್ನೂ ಕ್ಯಾಥೋಲಿಕ್ ಚರ್ಚ್ ಆಡಳಿತ ಮಂಡಳಿ ಅವರೊಂದಿಗೆ ವರ್ತಿಸಿದ ರೀತಿಯನ್ನೂ ಪರಿಶೋಧಿಸುವಾಗ ಹೊರಗಿನ ಪರಿಣಿತರನ್ನೂ ದೌರ್ಜನ್ಯ ಪೀಡಿತರನ್ನೂ ಆಮಂತ್ರಿಸಬೇಕೆಂದು ವರದಿ ಆವಶ್ಯಪಟ್ಟಿದೆ. (Reuters)

(ಡೆಕ್ಕಾನ್ ಹೆರಾಲ್ಡ್ 6–2–2014)

## ಮುಸ್ಲಿಮರು ಫೋಟೋ ತೆಗೆಸಿಕೊಳ್ಳಬಾರದು: ಫತ್ವಾ

**ಹೊಸದಿಲ್ಲಿ:** ಇಸ್ಲಾಂನ ಪ್ರಮುಖ ಧಾರ್ಮಿಕ ಸಂಘಟನೆ ದಾರೂಲ್ ಉಲೂಂ ದೇವಬಂದ್, ಛಾಯಾಚಿತ್ರ ತೆಗೆಸಿಕೊಳ್ಳದಂತೆ ಫತ್ವಾ ಹೊರಡಿಸಿದ್ದು, ಇದು ಇಸ್ಲಾಂ ಕಾನೂನಿಗೆ ವಿರುದ್ಧ ಮತ್ತು ಪಾಪ ಎಂದು ಹೇಳಿದೆ. ಮುಸಲ್ಮಾನರು ಪಾಸ್‌ಪೋರ್ಟ್ ಮತ್ತು ಗುರುತಿನ ಚೀಟಿ ಬಿಟ್ಟು ಬೇರೆ ಸಂದರ್ಭಗಳಲ್ಲಿ ಫೋಟೋ ತೆಗೆಸಿಕೊಳ್ಳಬಾರದು. ಮದುವೆ ಮತ್ತು ಶುಭ ವೇಳೆ ಫೋಟೋ ಮತ್ತು ವಿಡಿಯೋ ತೆಗೆಯುವುದಕ್ಕೆ ಇಸ್ಲಾಂನಲ್ಲಿ ಅನುಮತಿಯಿಲ್ಲ ಎಂದು ಸಂಘಟನೆ ಉಪಕುಲಪತಿಯಾದ ಧಾರ್ಮಿಕ ಗುರು ಮುಫ್ತಿ ಅಬ್ದುಲ್ ಕಸಿಮ್ ನೊಮನಿ ಹೇಳಿದ್ದಾರೆ. ಆದರೆ ಮಕ್ಕಾದಲ್ಲಿ ಪ್ರಾರ್ಥನೆ ವೇಳೆ ಟಿವಿಗಳಲ್ಲಿ ನೇರಪ್ರಸಾರ ಮಾಡಲಾಗುತ್ತದೆ, ಮತ್ತು ಫೋಟೋಗಳನ್ನು ತೆಗೆಯಲಾಗುತ್ತದೆ ಎಂಬುದಕ್ಕೆ ಪ್ರತಿಕ್ರಿಯಿಸಿದ ನೊಮನಿ, ಅವರು ಮಾಡುವುದೆಲ್ಲ ಸರಿ ಅಂತಲ್ಲ, ಅವರು ಮಾಡಬಹುದು, ಆದರೆ ನಾವು ಅದಕ್ಕೆ ಅವಕಾಶ ನೀಡಲ್ಲ ಎಂದಿದ್ದಾರೆ. ಒಂದು ವೇಳೆ ಫೋಟೋ ತೆಗೆದರೆ ಅವರು ದೇವರಿಗೇ ಉತ್ತರಿಸಬೇಕು ಎಂದಿದ್ದಾರೆ. (ಉದಯವಾಣಿ 12–09–2013)

## ಓದಿದ್ದು

# ಮುಸ್ಲಿಮರ ಬೆಂಬಲ : ಸತ್ಯವೋ? ಮಿಥ್ಯವೋ?

ಭಾರತದ ಅತಿ ದೊಡ್ಡ ಮತೀಯ ಅಲ್ಪಸಂಖ್ಯಾಕ ಸಮುದಾಯವಾದ ಮುಸ್ಲಿಮರ ಬೆಂಬಲವಿಲ್ಲದೆಯೇ ಯಾವುದೇ ರಾಷ್ಟ್ರೀಯ ಪಕ್ಷ ರಾಷ್ಟ್ರೀಯ ಚುನಾವಣೆಗಳನ್ನು ಗೆದ್ದು ಸರಕಾರ ರಚಿಸಲು ಸಾಧ್ಯವೇನು? ಸೆಕ್ಯುಲರ್ ಪಕ್ಷಗಳು ಮತ್ತು ರಾಜಕಾರಣಿಗಳ ಪ್ರಕಾರ ಅದು ಸಾಧ್ಯವೇ ಇಲ್ಲ. ಅವರಿಗೆ ಅದು ಊಹೆಗೂ ನಿಲುಕದ್ದು. ಆದರೆ ಬಲಪಂಥೀಯ ರಾಷ್ಟ್ರೀಯ ಹಿಂದೂವಾದದ ಭಾರತೀಯ ಜನತಾ ಪಕ್ಷ ಅದನ್ನು 16ನೆಯ ಲೋಕಸಭಾ ಚುನಾವಣೆಯಲ್ಲಿ ಸಾಧ್ಯವೆಂದು ಸಾಧಿಸಿ ತೋರಿಸಿರುವುದು ಎಲ್ಲರ ಹುಬ್ಬೇರುವಂತೆ ಮಾಡಿದೆ.

ತನ್ನ ಸ್ವಂತ ಬಲದ ಮೇಲೆ 282 ಸ್ಥಾನಗಳನ್ನು ಗೆದ್ದು ಸ್ಪಷ್ಟ ಬಹುಮತವನ್ನು ಪಡೆದಿರುವ ಬಿಜೆಪಿಯ ಒಂದು ಅಚ್ಚರಿಯ ಹೆಗ್ಗಳಿಕೆ ಎಂದರೆ, ಕಡೆಯ ಪಕ್ಷ ಒಬ್ಬನಾದರೂ ಮುಸ್ಲಿಮ್ ಲೋಕಸಭಾ ಸಂಸದ ಅವರಲ್ಲಿ ಇಲ್ಲದಿರುವುದು! ಪಕ್ಷದ ಉಪಾಧ್ಯಕ್ಷರಾದ ಶಹನವಾಜ್ ಹುಸೇನ್ ಅವರಿಗೆ ಬಿಹಾರದ ಭಾಗಲ್ಪುರದಿಂದ ಸ್ಪರ್ಧಿಸಲು ಟಿಕೆಟ್ ನೀಡಲಾಗಿತ್ತು. ಆದರೆ ದುರದೃಷ್ಟವಶಾತ್ ಅವರೂ ಸೋತುಹೋಗಿದ್ದಾರೆ.

ಅದಿರಲಿ, ಅತ್ಯಂತ ಆಶ್ಚರ್ಯಕರ ಬೆಳವಣಿಗೆ ಎಂದರೆ, ಉತ್ತರಪ್ರದೇಶದಂಥ ಮುಸ್ಲಿಮ್ ಪ್ರಾಬಲ್ಯದ ಬೃಹತ್ ರಾಜ್ಯದಲ್ಲಿ ಸಾಂಕೇತಿಕವಾಗಿಯಾದರೂ ಒಬ್ಬನೇ ಒಬ್ಬ ಮುಸ್ಲಿಮ್ ಅಭ್ಯರ್ಥಿಯೂ ಚುನಾಯಿತನಾಗಿ ಬಂದಿಲ್ಲ. ಮುಸ್ಲಿಮರ ತುಷ್ಟೀಕರಣ ಮತ್ತು ಓಲೈಕೆಯ ತೀವ್ರ ಪೈಪೋಟಿಯಲ್ಲಿ ತೊಡಗಿಕೊಳ್ಳುವ ಸಮಾಜವಾದಿ ಪಕ್ಷ, ಬಹುಜನ ಸಮಾಜ ಪಕ್ಷ ಮತ್ತು ಕಾಂಗ್ರೆಸ್ ಸಾಕಷ್ಟು ಸಂಖ್ಯೆಯಲ್ಲಿ ಅಭ್ಯರ್ಥಿಗಳನ್ನು ಕಣಕ್ಕಿಳಿಸಿತ್ತು. ಅವರಲ್ಲಿ ಒಬ್ಬರೂ ಆರಿಸಿ ಬರಲಾಗಲಿಲ್ಲ. ಒಟ್ಟು 80 ಕ್ಷೇತ್ರಗಳಿರುವ ಯುಪಿಯಲ್ಲಿ ಮುಸ್ಲಿಮ್ ಮತದಾರರು ಶೇ.18ರಷ್ಟಿದ್ದಾರೆ. ದೇಶದಲ್ಲಿನ ಅವರ ಜನಸಂಖ್ಯಾ ಪ್ರಮಾಣ ಶೇ.13.4ಕ್ಕೆ ಹೋಲಿಸಿದರೆ ಉತ್ತರಪ್ರದೇಶದಲ್ಲಿ ಅವರ ಸಂಖ್ಯೆ ಗರಿಷ್ಠ ಮಟ್ಟದಲ್ಲಿಯೇ ಇದೆ. ರಾಷ್ಟ್ರದ ಚುನಾವಣಾ ಇತಿಹಾಸದಲ್ಲಿ ಇದೇ ಮೊದಲಬಾರಿಗೆ ಭಾರತದ ಅತಿ ದೊಡ್ಡ ರಾಜ್ಯದಿಂದ ಯಾವುದೇ ಮುಸ್ಲಿಮ್ ಸಂಸದ ಆಯ್ಕೆಯಾಗಿಲ್ಲ. ಇದು ಇಡೀ ಮುಸ್ಲಿಮ್ ಸಮುದಾಯಕ್ಕೇ ಮರ್ಮಾಘಾತವನ್ನುಂಟು ಮಾಡಿದೆ.

ಕಳೆದ 2009 ರ ಚುನಾವಣೆಯಲ್ಲಿ ಈ ರಾಜ್ಯದಿಂದ ಏಳು ಮುಸ್ಲಿಮ್ ಸಂಸದರು ಆಯ್ಕೆಯಾಗಿದ್ದರು. ಅವರಲ್ಲಿ ನಾಲ್ವರು ಬಿಎಸ್‌ಪಿ ಮತ್ತು ಮೂವರು ಕಾಂಗ್ರೆಸ್‌ಗೆ ಸೇರಿದವರಾಗಿದ್ದರು. ಈ ಚುನಾವಣೆಯಲ್ಲಿ ಬಿಎಸ್ಪಿ ಅತ್ಯಧಿಕ 19 ಮುಸ್ಲಿಮ್ ಅಭ್ಯರ್ಥಿಗಳನ್ನು ಕಣಕ್ಕಿಳಿಸಿತ್ತು. ಅವರಲ್ಲಿ ಒಬ್ಬರೂ ಆಯ್ಕೆ ಆಗಲಿಲ್ಲ. ಅಷ್ಟೇ ಏಕೆ, ಬಿಎಸ್‌ಪಿಯ ಯಾವೊಬ್ಬ ಸದಸ್ಯನೂ ಆಯ್ಕೆಯಾಗಲಿಲ್ಲ! ಸಮಾಜವಾದಿ ಪಕ್ಷ 13, ಕಾಂಗ್ರೆಸ್ 11 ಮತ್ತು ಆಮ್ ಆದ್ಮಿ ಪಕ್ಷ 12 ಮುಸ್ಲಿಮರಿಗೆ ಟಿಕೆಟ್ ನೀಡಿದ್ದವು.

ಇನ್ನೊಂದು ಗಮನಾರ್ಹ ಸಂಗತಿ ಎಂದರೆ, ರಾಜ್ಯದ 80 ಕ್ಷೇತ್ರಗಳ ಪೈಕಿ 21 ಕ್ಷೇತ್ರಗಳಲ್ಲಿ ಮುಸ್ಲಿಮ್ ಮತದಾರರು ನಿರ್ಣಾಯಕರು ಎಂದು ಹೇಳಲಾಗಿದೆ. ಆದಾಗ್ಯೂ, ಯಾವೊಬ್ಬ ಮುಸ್ಲಿಮ್ ಅಭ್ಯರ್ಥಿ ಎರಡನೆಯ ಸ್ಥಾನವನ್ನು ಕೂಡ ಪಡೆಯಲು ಸಾಧ್ಯವಾಗಲಿಲ್ಲ.

ಈ ಬಾರಿ ಇಡೀ ದೇಶದಲ್ಲಿ ಕೇವಲ 23 ಮುಸ್ಲಿಮರು ಮಾತ್ರ ಲೋಕಸಭೆಗೆ ಆಯ್ಕೆಯಾಗಿದ್ದು, ಇದು ಕೂಡ ಮುಸ್ಲಿಮ್ ಅಲ್ಪ ಪ್ರಾತಿನಿಧ್ಯದಲ್ಲಿ ಒಂದು ದಾಖಲೆ. ಕರ್ನಾಟಕದಂಥ ಪ್ರಗತಿಪರ ರಾಜ್ಯದಲ್ಲಿ ಕೂಡ ಯಾವೊಬ್ಬ ಮುಸ್ಲಿಮ್ ಈ ಬಾರಿ ಆಯ್ಕೆಯಾಗಲು ಸಾಧ್ಯವಾಗಿಲ್ಲ.

2008ರ ಕರ್ನಾಟಕ ರಾಜ್ಯ ವಿಧಾನಸಭಾ ಚುನಾವಣೆಯಲ್ಲಿ ಬಿಜೆಪಿ ಅತ್ಯಧಿಕ 110 ಸ್ಥಾನಗಳನ್ನು ಪಡೆದು ಅಧಿಕಾರಕ್ಕೆ ಬಂದಿತ್ತು. ಆಗಲೂ ಬಿಜೆಪಿಯಲ್ಲಿ ಒಬ್ಬ ಶಾಸಕನು ಕೂಡ ಇರಲಿಲ್ಲ. ವಾಸ್ತವದಲ್ಲಿ ಪಕ್ಷ ಮುಸ್ಲಿಮರಿಗೆ ಟಿಕೆಟ್ ನೀಡಿಯೇ ಇರಲಿಲ್ಲ.

ನವೆಂಬರ್ 2013ರಲ್ಲಿ ನಡೆದ ನಾಲ್ಕು ರಾಜ್ಯ ವಿಧಾನಸಭಾ ಚುನಾವಣೆಗಳಲ್ಲಿ ಚುನಾಯಿತರಾದ ಒಟ್ಟು 1589 ಶಾಸಕರಲ್ಲಿ ಮುಸ್ಲಿಮ್ ಶಾಸಕರ ಸಂಖ್ಯೆ ಕೇವಲ ಎಂಟು. ಈ ಹಿಂದೆ ಅವರ ಸಂಖ್ಯೆ 20 ಆಗಿತ್ತು.

ಸೆಕ್ಯುಲರ್ ಪಕ್ಷಗಳು ಮುಸ್ಲಿಮರ ರಾಜಕೀಯ ತುಷ್ಟೀಕರಣ, ಓಲೈಕೆಯಲ್ಲಿ ತೊಡಗಿದ್ದರು. ಈ ಸಮುದಾಯಕ್ಕೆ ಈ ಗತಿ ಏಕೆ ಪ್ರಾಪ್ತವಾಯಿತು ಎಂಬುದನ್ನೂ ಪರಿಶೀಲಿಸುವುದು ಅತ್ಯಗತ್ಯ. ನ್ಯಾಯಮೂರ್ತಿ ರಾಜೇಂದ್ರ ಸಾಚಾರ್ ಸಮಿತಿಯ ಶಿಫಾರಸುಗಳ ಅನುಷ್ಠಾನ, ಪ್ರಧಾನಮಂತ್ರಿಗಳ ಮತೀಯ ಅಲ್ಪಸಂಖ್ಯಾಕರಿಗಾಗಿ ಇರುವ 15 ಅಂಶಗಳ ಕಾರ್ಯಕ್ರಮ, ರಾಷ್ಟ್ರದ ಆಯ್ದ 80 ಮುಸ್ಲಿಮ್ ಪ್ರಾಬಲ್ಯದ ಜಿಲ್ಲೆಗಳಲ್ಲಿ ಮುಸ್ಲಿಮರ ಅಭಿವೃದ್ಧಿಗಾಗಿ ವಿಶೇಷ ಕಾರ್ಯಕ್ರಮಗಳ ಅನುಷ್ಠಾನ, ಇತ್ಯಾದಿಗಳನ್ನು ಕಾಂಗ್ರೆಸ್ ನೇತೃತ್ವದ ಯುಪಿಎ ಸರಕಾರ ಜಾರಿಗೆ ಕೊಟ್ಟಾದ ಮೇಲೆಯೂ ಕಾಂಗ್ರೆಸ್ ಮತ್ತು ಮಿತ್ರಪಕ್ಷಗಳನ್ನು ಮುಸ್ಲಿಮರು ಏಕೆ ಹಿಡಿಯಲಿಲ್ಲ? ಮುಸ್ಲಿಮರು ರಾಷ್ಟ್ರದ ರಾಜಕೀಯ ಮುಖ್ಯವಾಹಿನಿಯಿಂದ ಪ್ರತ್ಯೇಕಿಸಲ್ಪಡುತ್ತಿದ್ದಾರೆಯೇ? ರಾಜಕೀಯ ಪಕ್ಷದ ಯಶಸ್ಸಿಗೆ ಮುಸ್ಲಿಮರ ಬೆಂಬಲ ಅಗತ್ಯ ಎನ್ನುವುದು ಸತ್ಯವೋ? ಮಿಥ್ಯವೋ ?

**(ತರಂಗ: 5 ಜೂನ್ 2014)**

# ಕ್ರೈಸ್ತರು ಅಲ್ಲಾ ಎನ್ನುವಂತಿಲ್ಲ: ಮಲೇಷ್ಯ ಕೋರ್ಟ್

**ಕೌಲಾಲಂಪುರ:** ದೇವರನ್ನು ಅಲ್ಲಾ ಎಂದು ಕರೆಯಲು ಅನುಮತಿ ಕೋರಿ ಸಲ್ಲಿಸಿದ್ದ ಅರ್ಜಿಯನ್ನು ಮಲೇಷ್ಯಾ ಸುಪ್ರೀಂ ಕೋರ್ಟಿನ ಸಪ್ತ ಸದಸ್ಯ ವಿಶೇಷ ಪೀಠ ತಿರಸ್ಕರಿಸುವುದರೊಂದಿಗೆ ಮುಸ್ಲಿಂ ಬಾಹುಳ್ಯದ ದೇಶದಲ್ಲಿ ಕ್ರೈಸ್ತರು, 8 ವರ್ಷದಿಂದ ನಡೆಸಿದ ಕಾನೂನು ಹೋರಾಟ ವಿಫಲಗೊಂಡಿದೆ.

**( ಉದಯವಾಣಿ: 24-06-2014)**

**ಓದಿದ್ದು**

# ಶರಿಯಾ ಕೋರ್ಟ್ ಅಮಾನ್ಯ : ಸುಪ್ರೀಂ

- ವ್ಯಕ್ತಿಯ ಹಕ್ಕುಗಳಿಗೆ ವಿರುದ್ಧವಾದ ಫತ್ವಾ ಹೊರಡಿಸುವಂತಿಲ್ಲ ■ ಜನರು ಕಡ್ಡಾಯವಾಗಿ ಫತ್ವಾ ಪಾಲನೆ ಮಾಡಬೇಕಿಲ್ಲ
- ಶರಿಯಾ ಕೋರ್ಟ್ ನ್ಯಾಯಾಂಗ ವ್ಯವಸ್ಥೆಗೆ ಪರ್ಯಾಯವಲ್ಲ

**ಹೊಸದಿಲ್ಲಿ, ಜು.7: ಮುಸ್ಲಿಮರ ಶರಿಯಾ ನ್ಯಾಯಾಲಯಗಳಿಗೆ ಕಾನೂನಿನ ಮಾನ್ಯತೆಯಾಗಲಿ, ಕಾನೂನುಬದ್ಧ ಸ್ಥಾನಮಾನವಾಗಲಿ ಇಲ್ಲ ಎಂದು ಸುಪ್ರೀಂ ಕೋರ್ಟ್ ಸೋಮವಾರ ಐತಿಹಾಸಿಕ ತೀರ್ಪು ನೀಡಿದೆ. ಇದೇ ವೇಳೆ, ಶರಿಯಾ ಕೋರ್ಟುಗಳು ಹೊರಡಿಸುವ ಫತ್ವಾಗಳ ಬಗ್ಗೆ ಅಸಮಾಧಾನ ವ್ಯಕ್ತಪಡಿಸಿದೆ.**

ಕೆಲವೊಂದು ಪ್ರಕರಣಗಳಲ್ಲಿ ಶರಿಯಾ ನ್ಯಾಯಾಲಯಗಳು ಹೊರಡಿಸುವ ಆದೇಶ (ಫತ್ವಾ)ಗಳು ಮಾನವ ಹಕ್ಕುಗಳನ್ನು ಉಲ್ಲಂಘಿಸುತ್ತವೆ. ಅಮಾಯಕರನ್ನು ದಂಡಿಸುತ್ತವೆ. ಅಮಾಯಕ ಜನರನ್ನು ಶಿಕ್ಷಿಸುವುದಕ್ಕೆ ಇಸ್ಲಾಂ ಸೇರಿದಂತೆ ಯಾವುದೇ ಧರ್ಮವೂ ಅನುಮತಿ ನೀಡುವುದಿಲ್ಲ. ಹೀಗಾಗಿ ತನ್ನ ಎದುರು ಉಪಸ್ಥಿತನಿಲ್ಲದ ವ್ಯಕ್ತಿಯ ಹಕ್ಕುಗಳಿಗೆ ವಿರುದ್ಧವಾದ ಯಾವುದೇ ಆದೇಶವನ್ನು 'ದಾರುಲ್ ಖಾಜಾ' (ಮೌಲ್ವಿ)ಗಳು ನೀಡ ಕೂಡದು ಎಂದು ನ್ಯಾ ಸಿ.ಕೆ. ಪ್ರಸಾದ್ ನೇತೃತ್ವದ ಸು.ಕೋ. ಪೀಠ ತಾಕೀತು ಮಾಡಿದೆ.

ದೇಶ ನ್ಯಾಯಾಂಗ ವ್ಯವಸ್ಥೆಗೆ ಸಮಾನಾಂತರವಾಗಿ ನಡೆಸಲಾಗುತ್ತಿರುವ ಶರಿಯಾ ನ್ಯಾಯಾಲಯಗಳ ಸಾಂವಿಧಾನಿಕ ಬದ್ಧತೆ ಪ್ರಶ್ನಿಸಿ ವಿಶ್ವಲೋಚನ ಮದನ್ 2005ರಲ್ಲಿ ಸಾರ್ವಜನಿಕ ಹಿತಾಸಕ್ತಿ ಅರ್ಜಿ ಸಲ್ಲಿಸಿದ್ದರು. ಇದರ ವಿಚಾರಣೆ ವೇಳೆ ಕೋರ್ಟ್ ಈ ಮಹತ್ವದ ಆದೇಶ ನೀಡಿದೆ.

ಫತ್ವಾ ಎಂಬುದನ್ನು ಜನರು ಕಡ್ಡಾಯವಾಗಿ ಪಾಲನೆ ಮಾಡಬೇಕಿಲ್ಲ. ಮೌಲ್ವಿಗಳು ಹೊರಡಿಸುವ ಒಂದು ಅಭಿಪ್ರಾಯ ಇದಾಗಿದೆ. ಇದನ್ನು ಜಾರಿ ಮಾಡುವ ಅಧಿಕಾರ ಮೌಲ್ವಿಗಳಿಗೆ ಇರುವುದಿಲ್ಲ ಎಂದು ಅಖಿಲ ಭಾರತ ವೈಯಕ್ತಿಕ ಕಾನೂನು ಮಂಡಳಿ ವಿಚಾರಣೆ ವೇಳೆ ತಿಳಿಸಿತು. ಮೌಲ್ವಿ ಹೊರಡಿಸುವ ಫತ್ವಾ ಒಬ್ಬ ವ್ಯಕ್ತಿಯ ಇಚ್ಛೆಗೆ ವಿರುದ್ಧವಾಗಿದ್ದರೆ ಆತ ನ್ಯಾಯಾಲಯದ ಮೆಟ್ಟಿಲೇರಬಹುದು ಎಂದು ಮಂಡಳಿಯ ವಕೀಲರು ತಿಳಿಸಿದರು.

## ಏನಿದು ಶರಿಯಾ ಕೋರ್ಟ್?

ಕೌಟುಂಬಿಕ ಜೀವನ, ಮದುವೆ, ವಿಚ್ಛೇದನದಂಥ ಇತರ ವೈಯಕ್ತಿಕ ವಿಚಾರಗಳಿಗೆ ಸಂಬಂಧಿಸಿದಂತೆ ತಮ್ಮದೇ ಆದ ಕಾನೂನುಗಳನ್ನು ಮುಸ್ಲಿಮರು ಪಾಲಿಸುತ್ತಾರೆ. ಇಂಥ ವಿಚಾರಗಳಲ್ಲಿ ತೀರ್ಮಾನ ತಿಳಿಸುವ ವ್ಯವಸ್ಥೆಯನ್ನು ಶರಿಯಾ ನ್ಯಾಯಾಲಯಗಳೆಂದು ಕರೆಯಲಾಗುತ್ತದೆ.

**(ಉದಯವಾಣಿ 8-7-2014)**


**Statement about ownership and other particulars about the Newspaper**
**Yugarashmi Quarterly** (Form IV See Rule 8)

| | | |
|---|---|---|
| 1. Place of Publication | : | Mangalore |
| 2. Period of its Publication | : | Quarterly |
| 3. Printer's Name | : | Muhammad Yusuf |
| Whether citizen of India | : | Yes |
| Address | : | 10-23-1008/1, 1st Floor , Ansari Road, Bunder, Mangalore - 575 001 |
| 4. Publisher's Name | : | Muhammad Yusuf |
| Whether citizen of India | : | Yes |
| Address | : | 10-23-1008/1, 1st Floor , Ansari Road, Bunder, Mangalore - 575 001 |
| 5. Editor's Name | : | Muhammad Yusuf |
| Whether citizen of India | : | Yes |
| Address | : | 10-23-1008/1, 1st Floor , Ansari Road, Bunder, Mangalore - 575 001 |
| 6. Name and address of individuals who own the newspaper and partners or shareholders holding more than one percent of the capital | : | Jamath Ahmadiyya "Darussalam" Near Railway Level Crossing, Pandeshwar, Mangalore - 575 001 |

I, Muhammad Yusuf hereby declare that the particulars given above are true to the best of my knowledge and belief.

Sd/-
Muhammad Yusuf

Date : 1-7-2014

ಅಹ್ಮದಿಯರಿಗೆ ಸುತ್ತೋಲೆ

# ತಹ್‌ರೀಕ್ ಜದೀದ್ ಮತ್ತು ಪವಿತ್ರ ರಮಝಾನ್ ತಿಂಗಳು

ಹಝ್ರತ್ ಖಲೀಫತುಲ್ ಮಸೀಹ್ ಸಾನೀ (ದ್ವಿತೀಯ ಖಲೀಫ) ರಝಿಯಲ್ಲಾಹು ಅನ್‌ಹು ತಹ್‌ರೀಕ್ ಜದೀದ್ ಮತ್ತು ರಮಝಾನ್ ತಿಂಗಳ ನಾಲ್ಕು ಮುಖ್ಯ ಸಮಾನ ವಿಷಯಗಳಾದ ಸರಳ ಜೀವಿತ, ಕಷ್ಟಪಟ್ಟು ಕೆಲಸಮಾಡುವುದರ ಅಭ್ಯಾಸ, ಸ್ಥಿರಚಿತ್ತತೆ ಮತ್ತು ಪ್ರಾರ್ಥನೆ ಇವುಗಳ ಬಗ್ಗೆ ಸವಿಸ್ತಾರವಾಗಿ ವಿವರಿಸಿದ ನಂತರ ಹೀಗೆ ಹೇಳಿದರು:

"ನೀವು ರಮಝಾನ್ ತಿಂಗಳಲ್ಲಿ ಅದರ ಲಾಭ ಪಡೆಯಲು ಇಚ್ಛಿಸುವುದಾದರೆ, ತಹ್‌ರೀಕ್ ಜದೀದ್ ಅಭಿಯಾನದಲ್ಲಿ ಭಾಗವಹಿಸಿರಿ. ನೀವು ತಹ್‌ರೀಕ್ ಜದೀದ್‌ಗೆ ಲಾಭ ಉಂಟು ಮಾಡಲು ಬಯಸುವುದಾದರೆ, ಉಪವಾಸದಿಂದ ಸರಿಯಾದ ರೀತಿಯಲ್ಲಿ ಲಾಭ ಪಡೆಯಿರಿ. ತಹ್‌ರೀಕ್ ಜದೀದ್ ಎಂದರೆ ಸರಳ ಜೀವಿತ ಕೈಗೊಳ್ಳುವುದು, ಕಷ್ಟಪಟ್ಟು ಕೆಲಸಮಾಡುವ ಮತ್ತು ಬಲಿದಾನಗಳನ್ನು ಮಾಡುವ ಅಭ್ಯಾಸ ಮಾಡಿಕೊಳ್ಳುವುದು ಆಗಿದೆ. ರಮಝಾನ್ ತಿಂಗಳು ಇದೇ ಪಾಠವನ್ನು ನಿಮಗೆ ಕಲಿಸಲಿಕ್ಕೋಸ್ಕರ ಆಗಮಿಸುತ್ತದೆ. ಯಾವ ಉದ್ದೇಶಕ್ಕಾಗಿ ರಮಝಾನ್ ತಿಂಗಳು ಆಗಮಿಸಿದೆಯೋ ಆ ಉದ್ದೇಶ ಲಕ್ಷ್ಯಗಳನ್ನು ತಲುಪಲು ನೀವು ಕಠಿಣ ಪರಿಶ್ರಮ ನಡೆಸಿರಿ.... ಪ್ರತಿಯೊಬ್ಬನು ತನ್ನ ರಮಝಾನ್ ಉಪವಾಸ ತಹ್‌ರೀಕ್ ಜದೀದಿನ ಸಂಯಮನ ನಿಯಮ ಪ್ರಕಾರ ಅನುಷ್ಠಿಸಲು ಪ್ರಯತ್ನಿಸಬೇಕು. ತಹ್‌ರೀಕ್ ಜದೀದ್ ಅನುಷ್ಠಾನವು ರಮಝಾನಿನ ಉಪವಾಸದ ಅನುಷ್ಠಾನದ ಪ್ರಕಾರವಾಗಿರಬೇಕು. ರಮಝಾನ್ ನಮ್ಮ ಶಾರೀರಿಕ ಆಶಾಭಿಲಾಷೆಗಳನ್ನು ಹತೋಟಿಯಲ್ಲಿಡುವುದಾಗಬೇಕು. ತಹ್‌ರೀಕ್ ಜದೀದ್ ನಮ್ಮ ಆತ್ಮಕ್ಕೆ ನವಚೈತನ್ಯ ತುಂಬುವಂತಹದ್ದಾಗಬೇಕು. ರಮಝಾನಿನಿಂದ ನೀವು ಲಾಭ ಪಡೆಯಿರಿ ಎಂದು ನಾನು ಹೇಳಿದುದರ ಅರ್ಥ ನೀವು ತಹ್‌ರೀಕ್ ಜದೀದಿನ ಉದ್ದೇಶ ಲಕ್ಷ್ಯಗಳನ್ನು ರಮಝಾನಿನ ಬೆಳಕಿನಲ್ಲಿ ಮನವರಿಕೆ ಮಾಡಿಕೊಳ್ಳಬೇಕು ಎಂದಾಗಿದೆ. ನೀವು ತಹ್‌ರೀಕ್ ಜದೀದ್ ಕಡೆಗೆ ಲಕ್ಷ್ಯ ನೀಡಿರಿ ಎಂದು ನಾನು ಹೇಳಿದುದರ ಅರ್ಥ ಪ್ರತಿಯೊಂದು ಅವಸ್ಥೆಯಲ್ಲಿಯೂ ರಮಝಾನಿನ ಭಾವನೆ ನಿಮ್ಮ ಮೇಲೆ ಅಧಿಕಾರ ಚಲಾಯಿಸುವಂತಾಗಬೇಕು ಎಂದಾಗಿದೆ. ನಿಜವಾದ ತ್ಯಾಗ ಮತ್ತು ನಿರಂತರ ತ್ಯಾಗ ಮಾಡುವ ಅಭ್ಯಾಸ ನಿಮ್ಮಲ್ಲಿ ಉಂಟುಮಾಡಬೇಕು. ನಿಜವಾದ ತ್ಯಾಗವಿಲ್ಲದೆ ದಾಟಿ ಹೋಗುವ ರಮಝಾನ್ ಸರಿಯಾದ ರಮಝಾನ್ ಅಲ್ಲ. ಆತ್ಮಕ್ಕೆ ನವಚೈತನ್ಯ ನೀಡದೆ ದಾಟಿ ಹೋಗುವ ತಹ್‌ರೀಕ್ ಜದೀದ್ ಸರಿಯಾದ ತಹ್‌ರೀಕ್ ಅನುಷ್ಠಾನವಲ್ಲ." (ಖುತುಬ ಜುಮುಅ 4-11-1938)

ಇದೇ ವಿಷಯವನ್ನು ಮುಂದುವರಿಸುತ್ತಾ 1938 ನವೆಂಬರ್ ದಿನಾಂಕ 11ರಂದು ಶುಕ್ರವಾರದ ಖುತುಬದಲ್ಲಿ ತಹ್‌ರೀಕ್ ಜದೀದ್ ಚಂದಾ ನೀಡುವವರಿಗೋಸ್ಕರ ವಿಶೇಷ ಪ್ರಾರ್ಥನೆ ನಡೆಸಬೇಕೆಂದು ಆಗ್ರಹಪಡಿಸುತ್ತಾ ಹಝ್ರತ್ ಖಲೀಫತುಲ್ ಮಸೀಹ್ ಸಾನೀ ರಝಿಯಲ್ಲಾಹು ಅನ್‌ಹು ಹೀಗೆ ಹೇಳಿದರು:

"ರಮಝಾನ್ ತಿಂಗಳ ಕೊನೆಯ ಹತ್ತು ದಿವಸ ಪ್ರಾರಂಭವಾಗಲಿದೆ. ಈ ತಹ್‌ರೀಕ್ ಜದೀದ್‌ಗೋಸ್ಕರ ಹಿಂದೆ ಮಾಡಿದ ತ್ಯಾಗಗಳ ಬಗ್ಗೆ ಕೃತಜ್ಞತೆ ಅರ್ಪಿಸಲು ಮತ್ತು ಮುಂದೆ ತ್ಯಾಗಗಳನ್ನು ಮಾಡಲು ಶಕ್ತಿಯನ್ನು ಗಳಿಸಲು ಪ್ರಾರ್ಥನೆ ಮಾಡುತ್ತಾ ಈ ದಿನಗಳನ್ನು ವಿನಿಯೋಗಿಸಿರಿ. ಹಿಂದಿನ ವರ್ಷಗಳಲ್ಲಿ ತ್ಯಾಗಗಳನ್ನು ಮಾಡಲು ಯಾರಿಗೆ ಭಾಗ್ಯ ಲಭಿಸಿದೆಯೋ ಅವರು ಅದಕ್ಕೋಸ್ಕರ ಅಲ್ಲಾಹನಿಗೆ ಕೃತಜ್ಞತೆ ಅರ್ಪಿಸಲಿ. ತ್ಯಾಗಗಳನ್ನು ಮಾಡುವ ಪ್ರತಿಯೊಬ್ಬನಿಗೋಸ್ಕರ ಪ್ರಾರ್ಥನೆ ಮಾಡುವ ಪ್ರತಿಯೊಬ್ಬನು ಪ್ರಾರ್ಥಿಸಲಿ – ಧರ್ಮದ ಪ್ರಗತಿಗೋಸ್ಕರ ಮತ್ತು ಜಮಾಅತನ್ನು ಬಲಪಡಿಸಲು ಮಾಡಿದ ತ್ಯಾಗಗಳ ಫಲಸ್ವರೂಪವಾಗಿ ಅಲ್ಲಾಹನು ಅನುಗ್ರಹಗಳನ್ನು ತ್ಯಾಗಮಾಡುವ ಜನರಿಗೆ ಸುರಿಸಲಿ. ಅಂತಹ ಜನರಿಗೆ ಅಲ್ಲಾಹನು ತನ್ನ ಪ್ರೀತಿ ಮತ್ತು ಅನುಗ್ರಹಗಳನ್ನು ದಯಪಾಲಿಸಲಿ. ಅಲ್ಲಾಹನ ಮಾರ್ಗದಲ್ಲಿ ಮಾಡಿದ ತ್ಯಾಗಗಳನ್ನು ಎಷ್ಟು ಪ್ರೀತಿ ಮತ್ತು ನಿಷ್ಠೆಯಿಂದ ಮಾಡಲಾಗಿದೆಯೋ ಅದಕ್ಕೆ ಅನುಸಾರವಾಗಿ ಅಲ್ಲಾಹನು ಅನುಗ್ರಹ ನೀಡಲಿ." (ಅಲ್ ಫಝ್ಲ್ 15-11-1938)

ಖುರ್‌ಶೀದ್ ಅಹ್ಮದ್ ಅನ್‌ವರ್
ವಕೀಲುಲ್ ಮಾಲ್ ತಹ್‌ರಿಕ್ ಜದೀದ್, ಖಾದಿಯಾನ್.


ಹೊಸ ಪ್ರಕಟನೆಗಳು

**ಧರ್ಮದ ನಾಮದಲ್ಲಿ ರಕ್ತಪಾತ**

*ಗ್ರಂಥ ಕರ್ತ : ಮಿರ್ಝಾ ತಾಹಿರ್ ಅಹ್ಮದ್*

ಪುಟಗಳು : **185** ಬೆಲೆ : ರೂ. **50/-**

**ಖತ್‌ಮೆ ನುಬುವ್ವತ್ - ನಿಜಾಂಶಗಳು**

*ಗ್ರಂಥ ಕರ್ತ : ಮಿರ್ಝಾ ಬಶೀರ್ ಅಹ್ಮದ್*

ಪುಟಗಳು : **155** ಬೆಲೆ : ರೂ. **50/-**

*ಸಂಪರ್ಕಿಸಿರಿ :*

**ಅಹ್ಮದಿಯಾ ಮುಸ್ಲಿಮ್ ಜಮಾಅತ್**

ನಂ.1, 3ನೇ ಕ್ರಾಸ್, ವಿಲ್ಸನ್ ಗಾರ್ಡನ್, ಬೆಂಗಳೂರು - **560 027. Ph : 080 - 22246133**

ವಾರ್ತೆಗಳು

# ಅಹ್ಮದಿಯಾ ಶಾಂತಿ ಸಮ್ಮೇಳನ

**ಮಂಗಳೂರು:** ಅಹ್ಮದಿಯಾ ಮುಸ್ಲಿಂ ಜಮಾಅತ್ ಮಂಗಳೂರು ಘಟಕ ಮತ್ತು ಮಜ್ಲಿಸ್ ಖುದ್ದಾಮುಲ್ ಅಹ್ಮದಿಯಾ, ದಕ್ಷಿಣ ವಲಯ, ಕರ್ನಾಟಕ ವತಿಯಿಂದ ಕಳೆದ ಮೇ 3 ರಂದು ಮಂಗಳೂರಿನ ಪುರಭವನದಲ್ಲಿ ಶಾಂತಿ ಸಮ್ಮೇಳನ ಜರಗಿತು.

ಜ । ಮೌಲವಿ ಆಸಿಫ್ ಅಹ್ಮದ್ ಖಾದಿಮ್ ಸಾಹೇಬ್ ಖುರ್‌ಆನ್ ಪಠಿಸಿದರು. ಜನಾಬ್ ಬಿ. ಎಸ್. ಅಬ್ದುರ್ರಹೀಂ ಸಾಹೇಬ್ ಭಾಷಾಂತರ ಓದಿ ಹೇಳಿದರು.

ಮಜ್ಲಿಸ್ ಖುದ್ದಾಮುಲ್ ಅಹ್ಮದಿಯಾ ಭಾರತ ಅಧ್ಯಕ್ಷ ಜನಾಬ್ ರಫೀಕ್ ಅಹ್ಮದ್ ಬೇಗ್ ಸಾಹೇಬರು ಸಮ್ಮೇಳನದ ಅಧ್ಯಕ್ಷತೆ ವಹಿಸಿದರು. ಜಾಗತಿಕ ಶಾಂತಿ ಸ್ಥಾಪನೆಗೋಸ್ಕರ ಅಹ್ಮದಿಯಾ ಮುಸ್ಲಿಂ ಜಮಾಅತ್ ಮಾಡುವ ಪರಿಶ್ರಮದ ಬಗ್ಗೆ ಅವರು ವಿವರಿಸಿದರು.

ಶಾಸಕರಾದ ಶ್ರೀ ಜೆ.ಆರ್ ಲೋಬೋ, ಮಂಗಳೂರಿನ ಮಹಾ ಪೌರ ಶ್ರೀ ಮಹಾಬಲ ಮಾರ್ಲ, ರಾಮಕೃಷ್ಣ ಮಠದ ಅಧ್ಯಕ್ಷರಾದ ಶ್ರೀ ಸ್ವಾಮಿ ಜಿತಕಾಮಾನಂದ, ಸೈಂಟ್ ಜೋಸೆಫ್ ಸೆಮಿನರಿಯ ಆಧ್ಯಾತ್ಮಿಕ ನಿರ್ದೇಶಕ ರೆವ. ಫಾ. ಕ್ಲಿಫರ್ಡ್ ಫೆರ್ನಾಂಡಿಸ್, ಶ್ರೀ ಗುರು ಸಿಂಘ್ ಸಭಾದ ಸರ್ದಾರ್ ಮೇಜರ್ ಸಿಂಘ್, ಉದಯವಾಣಿ ಚೀಫ್ ಆಫ್ ನ್ಯೂಸ್ ಬ್ಯೂರೋ ಶ್ರೀ ಮನೋಹರ ಪ್ರಸಾದ್ ಮತ್ತು ಪತ್ರಕರ್ತೆ ಶ್ರೀಮತಿ ರೇಶ್ಮಾ ಉಳ್ಳಾಲ್ ಲೋಕ ಶಾಂತಿಯ ಬಗ್ಗೆ ತಮ್ಮ ಅನಿಸಿಕೆಗಳನ್ನು ವ್ಯಕ್ತಪಡಿಸಿದರು.

ಜ। ಕೆ.ಕೆ. ಬದ್ರುದ್ದೀನ್ ಸಾಹೇಬ್ "ಇಸ್ಲಾಂ ಮತ್ತು ಭೀಕರವಾದ" ಎಂಬ ವಿಷಯದಲ್ಲಿ ಮಾತನಾಡಿದರು. ಜ। ಎಂ.ಪಿ. ಇಬ್ರಾಹಿಂ ಸಾಹೇಬ್ ಶಾಂತಿ ಸ್ಥಾಪನೆಗೋಸ್ಕರ ಇಸ್ಲಾಂ ನೀಡುವ ಅಧ್ಯಾಪನೆಗಳನ್ನು ವಿವರಿಸಿದರು. ಮೌಲವಿ ಮುಹಮ್ಮದ್ ಕಲೀಮ್ ಖಾನ್ ಸಾಹೇಬ್ ಜಾಗತಿಕ ಶಾಂತಿಗೋಸ್ಕರ ಅಹ್ಮದಿಯಾ ಪಂಚಮ ಖಲೀಫರು ಮಾಡುವ ಪ್ರಯತ್ನಗಳ ಬಗ್ಗೆ ವಿವರಿಸಿದರು.

ಮಂಗಳೂರು ಅಹ್ಮದಿಯಾ ಘಟಕದ ಅಧ್ಯಕ್ಷ ಜ। ಮುಹಮ್ಮದ್ ಯೂಸುಫ್ ಸಾಹೇಬ್ ಕೃತಜ್ಞತೆ ಸಲ್ಲಿಸಿದರು.

ಮಜ್ಲಿಸ್ ಖುದ್ದಾಮುಲ್ ಅಹ್ಮದಿಯಾ ಭಾರತ ಉಪಾಧ್ಯಕ್ಷ ಜ। ಮುಸವ್ವಿರ್ ಅಹ್ಮದ್ ಸಾಹೇಬ್ ಮತ್ತು ಮಜ್ಲಿಸ್ ಖುದ್ದಾಮುಲ್ ಅಹ್ಮದಿಯಾ ದಕ್ಷಿಣ ವಲಯ ಕರ್ನಾಟಕದ ಅಧ್ಯಕ್ಷ ಜ। ಮುಸದ್ದಿಖ್ ಅಹ್ಮದ್ ಸಾಹೇಬ್ ಉಪಸ್ಥಿತರಿದ್ದರು. ಜ। ಸಲೀಂ ಅಹ್ಮದ್ ಸಾಹೇಬ್ ಮತ್ತು ಜ । ಜೆ.ಎಂ. ಶರೀಫ್ ಸಾಹೇಬ್ ಕಾರ್ಯಕ್ರಮವನ್ನು ನಿರ್ವಹಿಸಿದರು.

ಜಾಗತಿಕ ಶಾಂತಿ ಸ್ಥಾಪನೆಗೋಸ್ಕರ ಅಹ್ಮದಿಯಾ ಮುಸ್ಲಿಂ ಜಮಾಅತ್ ಲೋಕದಾದ್ಯಂತ ಮಾಡುವ ಪರಿಶ್ರಮದ ಬಗ್ಗೆ ವೀಡಿಯೋ ಕ್ಲಿಪ್ಸನ್ನು ಪ್ರದರ್ಶಿಸಲಾಯಿತು.

# ಖುದ್ದಾಮುಲ್ ಅಹ್ಮದಿಯಾ, ಅತ್ಫಾಲುಲ್ ಅಹ್ಮದಿಯಾ ವಾರ್ಷಿಕ ವಲಯ ಇಜ್ತಿಮಾ

**ಮಂಗಳೂರು:** ಮೇ ದಿನಾಂಕ 3 ಮತ್ತು 4ರಂದು ಖುದ್ದಾಮುಲ್ ಅಹ್ಮದಿಯಾ, ಅತ್ಫಾಲುಲ್ ಅಹ್ಮದಿಯಾ 10ನೇ ವಲಯ ಇಜ್ತಿಮಾ ಮಂಗಳೂರಿನ ಎನ್. ಜಿ. ಓ. ಹಾಲ್‌ನಲ್ಲಿ ಜರಗಿತು.

ಪ್ರಥಮ ದಿನದ ಕಾರ್ಯಕ್ರಮ ಫಜ್ರ್ ನಮಾಝ್‌ನಿಂದ ಪ್ರಾರಂಭವಾಯಿತು. ಮೌಲವಿ ಆಸಿಫ್ ಅಹ್ಮದ್ ಸಾಹೇಬ್ (ಮಂಗಳೂರು) ನಮಾಝಿಗೆ ನೇತೃತ್ವ ವಹಿಸಿದರು. ಹಝ್ರತ್ ಮುಸ್ಲಿಹ್ ಮೌಊದ್[ರ] ಖುದ್ದಾಮುಲ್ ಅಹ್ಮದಿಯಾಕ್ಕೆ ನೀಡಿದ ಉಪದೇಶಗಳ ಬಗ್ಗೆ ದರ್ಸ್ ನೀಡಿದರು.

ಪ್ರಾತಃ ಕಾಲ 10 ಗಂಟೆಗೆ ಪ್ರಾರಂಭವಾದ ಸಮಾವೇಶದ ಅಧ್ಯಕ್ಷತೆಯನ್ನು ಮಜ್ಲಿಸ್ ಖುದ್ದಾಮುಲ್ ಅಹ್ಮದಿಯಾ ಸದರ್ ಭಾರತ ಜನಾಬ್ ರಫೀಕ್ ಬೇಗ್ ಸಾಹೇಬ್ ವಹಿಸಿದರು. ಸಲೀಂ ಅಹ್ಮದ್ ಸಾಹೇಬ್ (ಮಂಗಳೂರು) ಖುರ್‌ಆನ್ ಪಠಿಸಿದರು. ಸಲಾಹುದ್ದೀನ್ ಸಾಹೇಬ್ (ಶಿವಮೊಗ್ಗ) ನಝ್ಮ್ ಹಾಡಿದರು. ಜೆ.ಎಂ. ಶರೀಫ್ ಸಾಹೇಬ್ (ಖಾಯಿದ್, ಮಡಿಕೇರಿ) ಸ್ವಾಗತ ಭಾಷಣ ಮಾಡಿದರು. ಆಶ್ರಫ್ ಖಾನ್ ಸಾಹೇಬ್ (ಖಾಯಿದ್, ಬೆಂಗಳೂರು) ವಾರ್ಷಿಕ ವರದಿ ಸಲ್ಲಿಸಿದರು. ಮುಖ್ಯ ಅತಿಥಿಗಳಾದ ಮುಸದ್ದಿಖ್ ಅಹ್ಮದ್ ಸಾಹೇಬ್ (ಝೋನಲ್ ಖಾಯಿದ್) ಮತ್ತು ಮೌಲವಿ ಕಲೀಮ್ ಖಾನ್ ಸಾಹೇಬ್ (ಬೆಂಗಳೂರು) ಭಾಷಣ ಮಾಡಿದರು. ವಿವಿಧ ಸ್ಪರ್ಧೆಗಳು ನಡೆದವು.

ದ್ವಿತೀಯ ದಿನದ ಕಾರ್ಯಕ್ರಮ ತಹಜ್ಜುದ್ ನಮಾಝ್‌ನಿಂದ ಪ್ರಾರಂಭವಾಯಿತು. ಮೌಲವಿ ಮೌಲಾ ಸಾಹೇಬ್ (ಸಾಗರ) ನಮಾಝಿಗೆ ನೇತೃತ್ವ ವಹಿಸಿದರು. ಸೈಂಟ್ ಎಲೋಸಿಯಸ್ ಕಾಲೇಜ್ ಮೈದಾನದಲ್ಲಿ ವಿವಿಧ ಕ್ರೀಡಾ ಸ್ಪರ್ಧೆಗಳು ಜರಗಿದವು.

ಸಂಜೆ ನಡೆದ ಸಮಾಪನ ಸಭೆಯಲ್ಲಿ ಜಫೀಕ್ ಬೇಗ್ ಸಾಹೇಬ್ ಮತ್ತು ಅಹ್ಮದಿಯಾ ಜಮಾಅತ್ ಮಂಗಳೂರು ಘಟಕದ ಅಧ್ಯಕ್ಷ ಜ। ಮುಹಮ್ಮದ್ ಯೂಸುಫ್ ಸಾಹೇಬ್ ಭಾಷಣ ಮಾಡಿದರು. ಎಂ. ಅಬ್ದುಸ್ಸಲಾಮ್ ಸಾಹೇಬ್ (ಖಾಯಿದ್, ಮಂಗಳೂರು) ಕೃತಜ್ಞತೆ ಸಲ್ಲಿಸಿದರು.

## ಅಹ್ಮದಿಯಾ ಬುಕ್ ಸ್ಟಾಲ್

**ಮಂಗಳೂರು:** ಶ್ರೀ ಮಾರಿಕಾಂಬ ಜಾತ್ರೆಯ ಸಂದರ್ಭದಲ್ಲಿ ಸಾಗರದ ಅಹ್ಮದಿಯಾ ಮುಸ್ಲಿಂ ಜಮಾಅತಿನ ವತಿಯಿಂದ ಫೆ.18ರಿಂದ 14 ದಿನಗಳ ಕಾಲ ಬುಕ್ ಸ್ಟಾಲ್ ತೆರೆಯಲಾಗಿತ್ತು.

ಸಾಹಿತಿ ಡಾ||ನಾ. ಡಿಸೋಜ ಪುಸ್ತಕ ಮಳಿಗೆಯನ್ನು ಉದ್ಘಾಟಿಸಿದರು. ಮಂಗಳೂರಿನ "ಯುಗರಶ್ಮಿ" ಸಂಪಾದಕರಾದ ಮುಹಮ್ಮದ್ ಯೂಸುಫ್ ಸಾಹೇಬ್ ದುಆ ಮಾಡಿದರು.

ಜನಾಬ್ ಯೂಸುಫ್ ಸಾಹೇಬ್ (ಸ್ಥಳೀಯ ಅಧ್ಯಕ್ಷರು), ಶ್ರೀ ಎಸ್. ನಾಗರಾಜ್ (ಲೆಕ್ಕಾಧಿಕಾರಿ), ನದೀಮ್ ಅಹ್ಮದ್ (ಯುವ ಘಟಕದ ಅಧ್ಯಕ್ಷರು), ಮೀರ್ ಅಜಮ್ ಝುಕರಿಯಾ (ಜಿಲ್ಲಾ ಯುವ ಘಟಕದ ಅಧ್ಯಕ್ಷರು), ವಸೀಮ್ ಅಹ್ಮದ್ (ಪ್ರಚಾರ ಕಾರ್ಯದರ್ಶಿ) ಉಪಸ್ಥಿತರಿದ್ದರು.

ಸುಮಾರು 50 ಸಾವಿರ ಜನರು ಬುಕ್ ಸ್ಟಾಲ್ ಸಂದರ್ಶಿಸಿದ್ದಾರೆ. 7 ಸಾವಿರಕ್ಕೂ ಅಧಿಕ ಕಿರು ಹೊತ್ತಗೆಗಳನ್ನು ಹಂಚಲಾಯಿತು.

---

**"ದೇಶ ಪ್ರೇಮ (ಧಾರ್ಮಿಕ) ವಿಶ್ವಾಸದ ಅಂಶವಾಗಿದೆ."**

– ಹಝ್ರತ್ ಮುಹಮ್ಮದ್ ಪೈಗಂಬರ್(ಸ)

---

# LOVE FOR ALL HATRED FOR NONE



**ಎಲ್ಲರೊಂದಿಗೆ ಪ್ರೀತಿ**
**ಯಾರೊಂದಿಗೂ ದ್ವೇಷವಿಲ್ಲ**

# ನಿಧನ ವಾರ್ತೆಗಳು

## ಜ| ಮೌಲವಿ ಅಬ್ದುಲ್ ವಹ್ಹಾಬ್ ಆದಮ್ ಸಾಹೇಬ್



ಘಾನ ದೇಶದ ಅಮೀರ್ ಜನಾಬ್ ಮೌಲವಿ ಅಬ್ದುಲ್ ವಹ್ಹಾಬ್ ಆದಮ್ ಸಾಹೇಬ್ ಜೂನ್ 22ರಂದು ನಿಧನ ಗಾದರು. ("ಇನ್ನಾ ಲಿಲ್ಲಾಹಿ ವ ಇನ್ನಾ ಇಲೈಹಿ ರಾಜಿಊನ್")

ಅವರು 50 ವರ್ಷಗಳಿಗಿಂತ ಹೆಚ್ಚುಕಾಲ ಜಮಾಅತ್‌ಗೆ ಸೇವೆ ಸಲ್ಲಿಸಿದ್ದಾರೆ. 1938ರಲ್ಲಿ ಘಾನದಲ್ಲಿ ಜನಿಸಿದ ಅವರನ್ನು 1952ರಲ್ಲಿ ಅವರ ತಾಯಿ, ತನ್ನ ಮೃತ ಪತಿಯ ಆಶೆಯ ಪ್ರಕಾರ ರಬ್ವಕ್ಕೆ ಕಳುಸಿದರು. 1960ರಲ್ಲಿ ಅವರು "ಶಾಹಿದ್" ಬಿರುದು ಪಡೆದರು. 1969ರ ತನಕ ಅವರು ಧರ್ಮ ಪ್ರಚಾರಕರಾಗಿದ್ದರು. ಆನಂತರ ಅವರು ಘಾನದ "ಜಾಮಿಅ ಅಹ್ಮದಿಯಾ"ದ ಪ್ರಿನ್ಸಿಪಲ್ ಆದರು. 1971 ರಲ್ಲಿ ಅವರನ್ನು ಲಂಡನಿನ ಫಝ್ಲ್ ಮಸ್ಜಿದ್‌ನ ನಾಇಬ್ ಇಮಾಮರನ್ನಾಗಿ ನೇಮಿಸಲಾಯಿತು. ನಂತರ 1975 ರಲ್ಲಿ ಅವರನ್ನು ಘಾನದ ಅಮೀರ್ ಮತ್ತು ಮುಬಲ್ಲಿಗ್ ಇನ್‌ಚಾರ್ಜ್ ಆಗಿ ನೇಮಿಸಲಾಯಿತು. ಈ ಹುದ್ದೆಯಲ್ಲಿ ಅವರು 39 ವರ್ಷಗಳ ಕಾಲ ಸೇವೆ ಸಲ್ಲಿಸಿದರು.

ವಹ್ಹಾಬ್ ಸಾಹೇಬರು ಪ್ರಥಮ ಆಫ್ರಿಕನ್ ಮುಬಲ್ಲಿಗ್ ಆಗಿದ್ದರು. ಅವರು ಘಾನದ ಪ್ರಥಮ ಅಮೀರ್ ಮತ್ತು ಮಿಶನರಿ ಇನ್ ಚಾರ್ಜ್ ಆಗಿದ್ದರು. ಅವರು ಒಮ್ಮೆ ಖಲೀಫರ ಅನುಪಸ್ಥಿತಿಯಲ್ಲಿ ಖಲೀಫರ ಪ್ರತಿನಿಧಿಯಾಗಿ ರಬ್ವದ ಪ್ರಥಮ ಆಫ್ರಿಕನ್ "ಅಮೀರ್ ಮಖಾಮೀ" ಆಗಿದ್ದರು. ಯುರೋಪಿನಲ್ಲಿ ಕೇಂದ್ರದ ಪ್ರಥಮ ಆಫ್ರಿಕನ್ ಮುಬಲ್ಲಿಗ್ ಅವರಾಗಿದ್ದರು. ಅವರು ಕೇಂದ್ರದ ಪ್ರತಿನಿಧಿಯಾಗಿ ಕೆನಡ, ಜರ್ಮನಿ, ಬೆನಿನ್, ಮಾಲಿ, ಐವರಿಕೋಸ್ಟ್, ನೈಜೀರಿಯಾ, ಬುರ್ಕಿನೋ ಫಾಸೋ, ಲೈಬೀರಿಯಾ, ಸಿರ್‍ರಾಲಿಯೋನ್ ಮತ್ತು ಜಮೈಕ ಇತ್ಯಾದಿ ದೇಶಗಳಿಗೆ ಸಂದರ್ಶನ ನೀಡಿದ್ದರು.

ಅವರು ತನ್ನ ತಾಯಿಯ ಹೆಸರಿನಲ್ಲಿ ಒಂದು ಸಂಸ್ಥೆಯನ್ನು ಸ್ಥಾಪಿಸಿ ಅವರ ಮೂಲಕ ಬಡವರಿಗೆ ಸಹಾಯ ಮಾಡುತ್ತಿದ್ದರು. ಅವರು ಅಮೀರ್ ಆಗಿದ್ದ ಕಾಲದಲ್ಲಿ ಘಾನದ ಜಮಾಅತ್ ಬೃಹತ್ತಾಗಿ ಅಭಿವೃದ್ಧಿಗೊಂಡಿದೆ. ಘಾನದಲ್ಲಿ 400 ಶಾಲೆಗಳನ್ನೂ 7 ದೊಡ್ಡ ಆಸ್ಪತ್ರೆಗಳನ್ನೂ 2 ಹೋಮಿಯೋಪತಿ ಚಿಕಿತ್ಸಾಲಯಗಳನ್ನೂ ಘಾನ ಜಮಾಅತ್ ನಡೆಸುತ್ತಿದೆ.

ಶಾಂತಿ ಸ್ಥಾಪನೆಗಾಗಿ ವಹ್ಹಾಬ್ ಸಾಹೇಬರು ನಡೆಸಿದ ಪ್ರಯತ್ನಗಳನ್ನು ಮಾನ್ಯ ಮಾಡಿಕೊಂಡು ಇಂಟರ್‌ರಿಲಿಜನ್ಸ್ ಮತ್ತು ಇಂಟರ್‌ನೇಶನಲ್ ಫೆಡರೇಶನ್ ಅವರಿಗೆ "ಅಂಬಾಸಡರ್ ಆಫ್ ಪೀಸ್" ಎಂಬ ಪ್ರಶಸ್ತಿಯನ್ನು ನೀಡಿ ಆದರಿಸಿದೆ. ಘಾನ ಸರಕಾರ ಸಹ ಅವರಿಗೆ ವಿದ್ಯಾಭ್ಯಾಸದಲ್ಲಿ ಸಾಧಿಸಿದ ಪ್ರಗತಿಗಾಗಿ ಪ್ರಶಸ್ತಿಗಳನ್ನು ನೀಡಿ ಗೌರವಿಸಿದೆ. ಘಾನದ ಯುನಿವರ್ಸಿಟಿ ಆಫ್ ಕೇಪ್ ಕೋಸ್ಟ್ 2007ರಲ್ಲಿ ಅವರಿಗೆ ಗೌರವಾದ ಪಿ.ಎಚ್.ಡಿ. ಪದವಿ ನೀಡಿ ಆದರಿಸಿದೆ.

ಅವರು ಘಾನದ ಸೆಂಟರ್ ಫಾರ್ ಡೆಮೋಕ್ರಟಿಕ್ ಡೆವಲಪ್‌ಮೆಂಟ್ ಇದರ ಸದಸ್ಯರಾಗಿದ್ದರು. ಅವರು ಘಾನದ ಇಂಟಗ್ರಿಟಿ ಇನಿಶಿಯೇಟಿವ್‌ನ ವೈಸ್ ಚೇರ್‌ಮನ್ ಆಗಿದ್ದರು. ಅವರು ನ್ಯಾಶನಲ್ ಪೀಸ್ ಕೌನ್ಸಿಲ್ ಸದಸ್ಯರಾಗಿದ್ದರು. ಅವರು ಕೌನ್ಸಿಲ್ ಫಾರ್ ರಿಲಿಜನ್ಸ್ ಇದರ ಸಹ-ಸ್ಥಾಪಕರೂ ಅದರ ರಾಜಾಧ್ಯಕ್ಷರೂ ಆಗಿದ್ದರು. ಅವರು ನ್ಯಾಶನಲ್ ರಿಕೊನ್ಸಿಲಿಯೇಶನ್ ಕಮಿಶನ್‌ನ ಸದಸ್ಯರೂ ಆಗಿದ್ದರು. ಅವರು ಲಂಡನಿನಲ್ಲಿ "ಮುಸ್ಲಿಂ ಹೆರಾಲ್ಡ್" ಪತ್ರಿಕೆಯ ಉಪಸಂಪಾದಕರಾಗಿ ಸಹ ಕಾರ್ಯ ನಿರ್ವಹಿಸಿದ್ದರು.

ವಹ್ಹಾಬ್ ಸಾಹೇಬ್ ನಿಧನ ಹೊಂದಿದಾಗ ಘಾನ ಸರಕಾರ ಬಹಳ ಗೌರವ ನೀಡಿತು. ಸಕಲ ಸರಕಾರಿ ಗೌರವಗಳೊಂದಿಗೆ ಅವರನ್ನು ದಫನ ಮಾಡಲಾಯಿತು. ದೇಶದ ಅಧ್ಯಕ್ಷರು, ಉಪಾಧ್ಯಕ್ಷರು ಮತ್ತು ಮಂತ್ರಿಗಳು ಗೌರವ ಸಲ್ಲಿಸಿದರು. ಘಾನದ ಟಿ.ವಿ. ಚಾನಲ್ ದಫನ ಬಗ್ಗೆ ವರದಿ ಬಿತ್ತರಿಸಿತು.

ವಹ್ಹಾಬ್ ಸಾಹೇಬ್ ಪತ್ನಿಯನ್ನೂ ನಾಲ್ವರು ಪುತ್ರರನ್ನೂ ಮೂವರು ಪುತ್ರಿಯರನ್ನೂ ಆಗಲಿ ಹೋಗಿದ್ದಾರೆ. ಅಲ್ಲಾಹನು ಸ್ವರ್ಗದಲ್ಲಿ ವಹ್ಹಾಬ್ ಸಾಹೇಬರ ಪದವಿಯನ್ನು ಉನ್ನತಗೊಳಿಸಲಿ ಮತ್ತು ತನ್ನ ಪ್ರೀತಿಗೆ ಪಾತ್ರರಾದವರೊಂದಿಗೆ ಸ್ಥಾನ ದಯಪಾಲಿಸಲಿ, ಆಮೀನ್.

## ಯು.ಬಿ. ಅಬ್ದುಲ್ ಖಾದರ್ ಸಾಹೇಬ್



ಜ| ಯು.ಬಿ. ಅಬ್ದುಲ್ ಖಾದರ್ ಸಾಹೇಬ್ 13-5-2014 ರಂದು ನಿಧನರಾದರು. ("ಇನ್ನಾ ಲಿಲ್ಲಾಹಿ ವ ಇನ್ನಾ ಇಲೈಹಿ ರಾಜಿ ಊನ್)"

ಮೃತರಿಗೆ ಸುಮಾರು 50 ವರ್ಷ ಪ್ರಾಯವಾಗಿತ್ತು. 1993ರಲ್ಲಿ ಅವರು ಅಹ್ಮದಿಯಾ ಮುಸ್ಲಿಂ ಜಮಾಅತಿಗೆ ಸೇರಿದರು. ಅಹ್ಮದಿ ಆದ ಕಾರಣ ಅವರು ತುಂಬಾ ಕಷ್ಟ ನಷ್ಟಗಳನ್ನು ಅನುಭವಿಸಿದರು. ಅವರು ತನ್ನ ಪತ್ನಿ ಮತ್ತು ಇಬ್ಬರು ಪುತ್ರಿಯರಿಂದ ಬೇರ್ಪಟ್ಟರು. ತನ್ನ ಮನೆಯಿಂದಲೂ ಅವರು ಹೊರತಳ್ಳಲ್ಪಟ್ಟರು.ಆದರೂ ಅವರು ತನ್ನ ವಿಶ್ವಾಸವನ್ನು ತ್ಯಜಿಸಲಿಲ್ಲ. ತನ್ನ ಬಂಧು ಮಿತ್ರಾದಿಗಳಿಗೂ ಮುಸ್ಲಿಂ ಧರ್ಮ ಪಂಡಿತರಿಗೂ ಅವರು ಅಹ್ಮದಿಯಾ ಸಂದೇಶವನ್ನು ತಲುಪಿಸುತ್ತಲೇ ಇದ್ದರು. ಮೃತರು ತನ್ನ ದ್ವಿತಿಯ ಪತ್ನಿಯನ್ನೂ ಒಬ್ಬ ಪುತ್ರಿ ಮತ್ತು ಒಬ್ಬ ಪುತ್ರನನ್ನೂ ಅನೇಕ ಬಂಧು ಮಿತ್ರಾದಿಗಳನ್ನೂ ಅಗಲಿದ್ದಾರೆ.

ಅಲ್ಲಾಹನು ಅವರಿಗೆ ಮಗ್ಫಿರತನ್ನೂ ಜನ್ನತನ್ನೂ ದಯಪಾಲಿಸಲಿ, ಆಮೀನ್.

# ಸೌಹಾರ್ದ

ಹಿಂದೂ ಮುಸ್ಲಿಮ್ ಕ್ರೈಸ್ತವರೆಲ್ಲರೂ
ಏಕ ಕುಟುಂಬದ ಬಂಧು ಬಾಂಧವರು
ಸಿಖ್ಖರು, ಫಾರಸೀ, ಜೈನರು, ಬೌದ್ಧರು
ಎಲ್ಲರೂ ಒಂದೇ ನಮ್ಮವರು



ವಿಶ್ವವ ಸೃಷ್ಟಿಸಿ ಪಾಲಿಸುವ ದೇವನು
ಏಕನೆಂದು ಸಾರಿವೆ ಗ್ರಂಥಗಳೆಲ್ಲಾ
ವಿವಿಧ ಧರ್ಮಗಳ ಮನುಜರೆಲ್ಲರೂ
ಆ ದೇವನ ಮಕ್ಕಳೇ ಸರಿ

ಉಷ್ಣವೂ ಶೈತ್ಯವೂ ಚರ್ಮದ ಮೇಲಣ
ವರ್ಣಗಳನ್ನು ಮಾರ್ಪಡಿಸಿದರೂ
ನಾಡಿಯಲ್ಲೋಡುವ ರಕುತದ ವರ್ಣವು
ಒಂದೇ ಅಲ್ಲವೇ ನಮ್ಮಲ್ಲಿ?

ಸತ್ಯವ ಗ್ರಹಿಸಲು ಬುದ್ಧಿಯು ನಮಗಿದೆ
ನಿತ್ಯವೂ ಕಚ್ಚಾಡಲು ಕಾರಣವೇನಿದೆ?
ಯುಕ್ತಿಯು, ವಿಶ್ವಾಸವು, ಆದರ್ಶ ಪ್ರಜ್ಞೆಯು
ವ್ಯಕ್ತಿಗಳ ತಮ್ಮ ಮನೋಭಾವ

ನಲ್ಮೆಯ, ಸ್ನೇಹದ, ಸೌಮ್ಯ ಸ್ವಭಾವದ
ಮೇಲ್ಮೆಯ ಹುಡುಕಿ ಸಾಧಿಸುವ
ಸೃಷ್ಟಿಕರ್ತನ ಸದ್ಗುಣ ಕೀರ್ತನೆಯ
ನಿತ್ಯವೂ ನಾವು ಕೊಂಡಾಡುವ

ಶ್ರೀಕೃಷ್ಣ, ಶ್ರೀರಾಮ, ಶ್ರೀಬುದ್ಧ,
ಶ್ರೀ ಯೇಸು, ಶ್ರೀ ಝೊರಾಸ್ಟರ್
ನೋಹಾ, ಮೋಶೆ, ದಾವೀದ, ಸೊಲೊಮನ್
ಮುಹಮ್ಮದ್ ಮುಸ್ತಫಾ ಸಲ್ಲಲ್ಲಾಹು ಅಲೈಹಿ ವಸಲ್ಲಂ

ವಾಗ್ದತ್ತ ಮಹ್‌ದೀ ಮಸೀಹರೆಲ್ಲರೂ
ದೇವನಿಯೋಜಿತ ಪುಣ್ಯಪುರುಷರು
ಹಿಂದೂ ಮುಸ್ಲಿಂ ಕ್ರೈಸ್ತವರೆಲ್ಲರೂ
ಏಕ ಕುಟುಂಬದ ಬಂಧು ಬಾಂಧವರು ....

(ಎಸ್.ವಿ. ಝೈನುದ್ದೀನ್ ಸಾಹೇಬರ ಮಲಯಾಳಂ
ಕವನದಿಂದ ಸ್ಫೂರ್ತಿ ಪಡೆದು)

## ಪುಸ್ತಕ ಪರಿಚಯ

### ಮಹಿಳೆ ಇಸ್ಲಾಮ್‌ನಲ್ಲಿ

ಲೇಖಕ: ಸರ್ ಮುಹಮ್ಮದ್ ಝಫ್ರುಲ್ಲಾ ಖಾನ್

ಪುಟ: 38, ಬೆಲೆ : 20

### ಧರ್ಮದ ಪುನಶ್ಚೇತನ ಸಿದ್ಧಾಂತ

ಲೇಖಕ: ಹಝ್‌ರತ್ ಮಿರ್ಝಾ ತಾಹಿರ್ ಅಹ್ಮದ್

ಪುಟ: 20, ಬೆಲೆ : 15

ಸಂಪರ್ಕಿಸಿರಿ: **Ameer, Ahmadiya Muslim Jamath**

**No.1, 3rd Cross Road, Wilson Garden, BANGALORE - 560 027**




ಮೇ 3ರಂದು ಮಂಗಳೂರು ಪುರಭವನದಲ್ಲಿ ಜರುಗಿದ ಶಾಂತಿ ಸಮ್ಮೇಳನದಲ್ಲಿ ಜನಾಬ್ ರಫೀಕ್ ಅಹ್ಮದ್ ಬೇಗ್ ಸಾಹೇಬ್ ಮಾತನಾಡುತ್ತಿದ್ದಾರೆ.




ಮೇ 3 ಮತ್ತು 4ರಂದು ಮಂಗಳೂರು ಎನ್‌ಜಿಒ ಹಾಲ್‌ನಲ್ಲಿ ಜರುಗಿದ ಖುದ್ದಾಮುಲ್ ಅಹ್ಮದಿಯಾ, ಅತ್ಫಾಲುಲ್ ಅಹ್ಮದಿಯಾ ಇಜ್ತಿಮಾ.



ಫೆಬ್ರವರಿ 18ರಂದು ಸಾಗರದಲ್ಲಿ ಅಹ್ಮದಿಯಾ ಪುಸ್ತಕ ಮಳಿಗೆಯನ್ನು ಸಾಹಿತಿ ಡಾ. ನಾ. ಡಿ'ಸೋಜ ಉದ್ಘಾಟಿಸಿದರು.

Registered with the Registrar of Newspapers for India No. R.N. 27354/75
Yugarashmi Kannada Quarterly, July - 2014. Price : Rs. 15/-





ಅಹ್ಮದಿಯಾ ಮುಸ್ಲಿಂ ಜಮಾಅತಿನ
ವತಿಯಿಂದ ಪ್ರಕಟಿಸಲ್ಪಟ್ಟ

**ಪವಿತ್ರ ಖುರ್‌ಆನ್**

ಕನ್ನಡ ಭಾಷಾಂತರ

**ಬೆಲೆ : ರೂ. 200/-**



**ಮುಹಮ್ಮದ್ ಪೈಗಂಬರರ ಜೀವನ ಚರಿತ್ರೆ**

ಗ್ರಂಥಕರ್ತ : ಮಿರ್ಝಾ ಬಶೀರುದ್ದೀನ್ ಮಹ್‌ಮೂದ್ ಅಹ್ಮದ್

**ಪುಟಗಳು - 320. ಬೆಲೆ : 100/-**

**ದೊರೆಯುವ ವಿಳಾಸ**

AHMADIYYA MUSLIM MISSION
No.1, 3rd Cross Road,
Wilson Garden, Bangalore - 560 027
Phone : 080 - 22246133

NAZARAT NASHR-O-ISHAAT
Sadr Anjuman Ahmadiyya
QADIAN - 143516
(PUNJAB)

**National Toll Free Number : 1800 3010 2131**
**National Website : ahmadiyyamuslimjamaat.in**
**International Website : alislam.org**
**Email : info@ahmadiyyamuslimjamaat.in**


Edited and Published by Muhammad Yusuf on behalf of Jamath Ahmadiyya at 10-23-1008/1, Ist Floor, Ansari Road, Mangalore - 575 001.
Printed at 'Digantha Mudrana Ltd.', Yeyyadi Mangalore on behalf of Jubilee Printing Press, Mangalore.
Typeset at 'We Are Designers', Bharath Building, Hampankatta, Mangalore - 575 001